ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 ಸಂಚಿಕೆ 38-39 ರೂ. 2.00 24 ಸೆಪ್ಟೆಂಬರ್ 1995

ಒಳಪುಟಗಳಲ್ಲಿ

ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ತುರ್ತು ಕ್ರಮ ಕೈಗೊಳ್ಳದಿದ್ದರೆ ತೀವ್ರ ಹೋರಾಟ

ಕೃಷ್ಣಾ ಕಣಿವೆಯ ರೈತರ ರಾಜ್ಯ ಮಟ್ಟದ ಸಮಾವೇಶದ ಕರೆ

4.9.95 ರಂದು ಗುಲ್ಬರ್ಗ ಜಿಲ್ಲೆಯ ಭೀಮರಾಯನ ಗುಡಿಯಲ್ಲಿ ಸೇರಿದ ಕೃಷ್ಣಾ ಕಣಿವೆಯ ಗುಲ್ಬರ್ಗ, ಬೀದರ್, ಬಿಜಾಪುರ, ರಾಯಚೂರು, ಬಳ್ಳಾರಿ ಜಿಲ್ಲೆಗಳ ರೈತರ ಬೃಹತ್ ಸಮಾವೇಶ 2000 ಇಸವಿಯೊಳಗೆ ನಮ್ಮ ಪಾಲಿಗೆ ಸಂದ ಕೃಷ್ಣಾ ನದಿಯ 734 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಲು ಈಗಾಗಲೇ ಪ್ರಾರಂಭವಾಗಿರುವ ಇನ್ನೂ ಕೆಲವು ಪ್ರಾರಂಭವಾಗ ಬೇಕಾಗಿರುವ ನೀರಾವರಿ ಯೋಜನೆಗಳನ್ನೆಲ್ಲ ಕೂಡಲೇ ಪೂರ್ಣಗೊಳಿಸಲು ತುರ್ತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ರಾಜ್ಯ ಸರಕಾರದ ಮೇಲೆ ಒತ್ತಾಯ ತರುವ ಸಲುವಾಗಿ ಮೂರು ಹಂತದ ಹೋರಾಟದ ಕಾರ್ಯಕ್ರಮವನ್ನು ನಿರ್ಧರಿಸಿದೆ. ಮೊದಲನೆಯ ಹಂತವಾಗಿ ಸೆಪ್ಟೆಂಬರ್ 18 ರಿಂದ 25ರವರೆಗೆ ಒಂದು ವಾರ ತಾಲೂಕು ಕಛೇರಿಗಳ ಮುಂದೆ ಧರಣಿ, ಎರಡನೆಯ ಹಂತದಲ್ಲಿ ಈ ವರ್ಷ ಡಿಸೆಂಬರ್ ಕೊನೆಯಲ್ಲಿ ಬೆಂಗಳೂರಿನಲ್ಲಿ ಬೃಹತ್ ರೈತಪ್ರದರ್ಶನ, ಮೂರನೆಯ ಹಂತವಾಗಿ 1996ರಲ್ಲಿ ರಾಜ್ಯಾದ್ಯಂತ ಪಿಕೆಟಿಂಗ್ ಕಾರ್ಯಕ್ರಮ ಹಮ್ಮಿಕೊಂಡಿದೆ.

3000ಕ್ಕೂ ಹೆಚ್ಚು ಜನರು ಸೇರಿದ್ದ ಈ ಸಮಾವೇಶವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರೂ, ಅಖಿಲ ಭಾರತ ಕಿಸಾನ್ ಸಭೆಯ ಕಾರ್ಯದರ್ಶಿಗಳಲ್ಲೊಬ್ಬರಾದ ಎಸ್. ರಾಮಚಂದ್ರ ಪಿಳ್ಳೆಯವರು ಉದ್ಘಾಟಿಸಿದರು.

ಅಖಿಲ ಭಾರತ ಕಿಸಾನ್ ಸಭೆ ಭಾರತ ದೇಶದಲ್ಲಿಯೇ ಅತಿ ದೊಡ್ಡ ರೈತರ ಸಂಘಟನೆಯಾಗಿದೆ ಎಂದು 1936ರಲ್ಲಿ ಸ್ಥಾಪನೆಯಾದ ಈ ರೈತ ಸಂಘಟನೆ ದೇಶದ ರೈತರ ಅದರಲ್ಲೂ ಬಡ ಮಧ್ಯಮ ರೈತರ ಬೇಡಿಕೆಗಳ ಸಲುವಾಗಿ ನಿರಂತರ ಹೋರಾಡುತ್ತಾ ಬಂದಿದೆಯೆಂದೂ, ರೈತರ ಮೇಲಾಗುವ ಎಲ್ಲಾ ದಬ್ಬಾಳಿಕೆ ಅತ್ಯಾಚಾರಗಳನ್ನು ಧೈರ್ಯದಿಂದ ಎದುರಿಸುತ್ತ, ಸರ್ಕಾರದ ರೈತ ವಿರೋಧಿ ನೀತಿಗಳನ್ನು ವಿರೋಧಿಸುತ್ತ ಬಂದಿದೆಯೆಂದೂ ಹೇಳಿದರು. ನಮ್ಮ ದೇಶದಲ್ಲಿ ಎರಡು ತರದ ರೈತ ಸಂಘಟನೆಗಳಿವೆಯೆಂದೂ ಅವರಲ್ಲಿ ಒಂದು ದೇಶದಲ್ಲಿಯ 90 ಕಟ್ಟ ಬಡರೈತರ ಹಿತವನ್ನು ರಕ್ಷಣೆ ಮಾಡುತ್ತಿದ್ದಾರೆ. ಮತ್ತೊಂದು ಸಂಘಟನೆ ಭೂಮಾಲಕರ ಹಿತರಕ್ಷಣೆ ಮಾಡುತ್ತದೆಂದೂ ವಿಶ್ಲೇಷಿಸಿದರು. ನೀರಾವರಿ ಯೋಜನೆಗಾಗಿ ನಡೆಸುವ ಹೋರಾಟ ಇಡೀ ದೇಶದ ಜನರ ಹೋರಾಟದ ಒಂದು ಭಾಗವಾಗಿದೆಯೆಂದೂ, ದೇಶ ಭೀಕರ ನೀರಿನ ಸಮಸ್ಯೆಯನ್ನೆದುರಿಸುತ್ತಿದೆಯೆಂದೂ ಒಂದು ಭಾಗದ ಬರಗಾಲ ಬಿದ್ದರೆ ಮತ್ತೊಂದು ನೆರೆ ಹಾವಳಿಯನ್ನೆದುರಿಸಬೇಕಾಗುತ್ತದೆಂದೂ, ಕೇಂದ್ರ ಸರಕಾರಕ್ಕೆ ಸರಿಯಾದ ನೀರಿನ ಧೋರಣೆ ಇಲ್ಲದಿರುವುದರಿಂದ ದೇಶದ ಜನತೆ ಇಂಥ ಗಂಭೀರ ಪರಿಸ್ಥಿತಿಯನ್ನೆದುರಿಸಬೇಕಾಗಿದೆಯೆಂದು ಹೇಳಿದರು.

ನಮ್ಮ ದೇಶದಲ್ಲಿ ಹರಿಯಾಣ, ಪಂಜಾಬ್, ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ ನೀರಾವರಿ ವ್ಯವಸ್ಥೆ ಇರುವುದರಿಂದ ಸಾಕಷ್ಟು ಆಹಾರ ಧಾನ್ಯ ಬೆಳೆಯುತ್ತಿವೆಯೆಂದೂ, ಶೇ. 75 ರಷ್ಟು ಪ್ರದೇಶ ನೀರಾವರಿಗೊಳಪಡಲು ಯೋಗ್ಯತೆಯಿದ್ದರೂ ಕೂಡಾ ಇನ್ನು ಮುಂದೆ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದಿಲ್ಲೆಂದು ಹೇಳುತ್ತಿದೆ ಯಾಕೆ ಗೊತ್ತೇ? ಇನ್ನೂ ಹೆಚ್ಚು ಪ್ರದೇಶ ನೀರಾವರಿಗೊಳಪಟ್ಟರೆ ಹೆಚ್ಚು ಆಹಾರ ಧಾನ್ಯ ಉತ್ಪಾದನೆಯಾಗುತ್ತದೆ. ಆದರೆ ಭೂಮಾಲಕರಿಗೆ ತಾವು ಬೆಳೆದ ಬೆಳೆಗೆ ಹೆಚ್ಚು ಬೆಲೆ ಸಿಗುವುದಿಲ್ಲವೆಂಬ ಒಂದೇ ಒಂದು ಕಾರಣ ಅದಾಗಿದೆ. ಹಾಗೆಯೇ ನೀರಾವರಿ ಪ್ರದೇಶ ಹೆಚ್ಚಾದರೆ ಅವರಿಗೆ ಕಡಿಮೆ ದುಡಿಮೆಗೆ ಕೂಲಿಯಾಳುಗಳು ಸಿಗುವುದಿಲ್ಲ ಎಂದು ಎಸ್.ಆರ್.ಪಿ.ಯವರು ನೀರಾವರಿ ಕುರಿತು ಸರಕಾರದ ಧೋರಣೆಯನ್ನು ವಿಶ್ಲೇಷಿಸಿದರು.

ಕೈಗಾರಿಕೆಗಳನ್ನು ಖಾಸಗೀಕರಣಗೊಳಿಸುತ್ತಿರುವಂತೆ ನೀರಾವರಿ ಯೋಜನೆಗಳನ್ನು ಖಾಸಗೀಕರಣಗೊಳಿಸುವ ವಿಚಾರ ಸರಕಾರದ ಮುಂದಿದೆಯೆಂದೂ ಆ ರೀತಿ ಮಾಡಿ ರೈತರಿಗೆ ನೀರು ಪೂರೈಸುವ, ವಿದ್ಯುತ್ ಪೂರೈಸುವ ಜವಾಬ್ದಾರಿಯನ್ನು ಕೈಬಿಡುವ ಸಂಭವವಿದೆಯೆಂದೂ ಎಚ್ಚರಿಸಿದರು. ಈ ಯೋಜನೆಗಳನ್ನು ಗುತ್ತೇದಾರರಿಗೆ ಹಾಗೂ ವಿದೇಶೀ ಕಂಪನಿಗಳಿಗೊಪ್ಪಿಸುವ ಕೇಂದ್ರ ಸರಕಾರದ ನೀತಿಯ ವಿರುದ್ಧ ತೀವ್ರ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ವಿಜಯನಗರ ಅರಸ ಮತ್ತು ಚಾಲುಕ್ಯರ ಆಡಳಿತೆಯಲ್ಲಿ ಸಾಕಷ್ಟು ನೀರಾವರಿ ಯೋಜನೆಗಳಿದ್ದವೆಂದೂ ಸ್ವಾತಂತ್ರ್ಯ ಪಡೆದು 48 ವರ್ಷಗಳಾದರೂ ಕೂಡಾ ನಮ್ಮನಾಳುವ ಸರಕಾರಗಳು ಅತ್ಯಗತ್ಯವಾದ ನೀರಾವರಿ ಯೋಜನೆಗಳತ್ತ ಗಮನಹರಿಸುತ್ತಿಲ್ಲೆಂದು ಖೇದ ವ್ಯಕ್ತಮಾಡಿ, ನೀರಾವರಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಮುಗಿಸುವಂತೆ ಮಾಡಲು ಬಲಿಷ್ಠವಾದ ಸಂಘಟಿತ ಹೋರಾಟ ನಡೆಸುವುದರ ಅವಶ್ಯಕತೆಯನ್ನು ಒತ್ತಿ ಹೇಳಿದರು. ಅಂಥ ಚಳುವಳಿ ನಡೆಸಲಿಕ್ಕೆ ಕರ್ನಾಟಕದಲ್ಲಿ ಮತ್ತು ದೇಶದಲ್ಲಿ ಪ್ರಬಲವಾದ ಹೋರಾಟ ರೂಪಿಸಬೇಕೆಂದು ಹೇಳಿದರು.

ರೈತ ಸಂಘದ ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಬಾಳೆಯವರು ಸಮಾವೇಶದ ಮುಖ್ಯ ಗೊತ್ತುವಳಿ ಮತ್ತು ಬೇಡಿಕೆಗಳನ್ನು ಮಂಡಿಸಿ ವಿವರಣೆ ನೀಡಿದರು. ಜಿ.ಎನ್.ನಾಗರಾಜ್, ಪಿ. ಜಗನ್ನಾಥ(ಬೆಂಗಳೂರು) ಮಲ್ಲಯ್ಯ ಜಾಲಹಳ್ಳಿ(ರಾಯಚೂರು) ಭೀಮಸಿ ಕಲಾದಗಿ(ಬಿಜಾಪುರ) ಚೆನ್ನಪ್ಪ ಆನೆಗುಂದಿ (ಗುಲ್ಬರ್ಗ) ಇವರು ನಿರ್ಣಯವನ್ನು ಬೆಂಬಲಿಸಿ ಮಾತನಾಡಿದರು. ಸಿಐಟಿಯು ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್, ಸಿಪಿಐ(ಎಂ) ಮುಖಂಡ ಎನ್.ಕೆ. ಉಪಾಧ್ಯಾಯ, ನೀಲಗುಂದ ಸ್ವಾಮಿ ಮೊದಲಾದವರು ಸರಕಾರದ ನೀತಿಯನ್ನು ಖಂಡಿಸಿ ಭಾಷಣ ಮಾಡಿದರು. ವೀರಣ್ಣ ಗೌಡ ಮಲಾಬಾದಿ ಅವರು ಸ್ವಾಗತಿಸಿದರು. ಮಾರುತಿ ಮಾನ್ಪಡೆಯವರು ತಮ್ಮ ಪ್ರಾರಂಭಿಕ ಭಾಷಣದಲ್ಲಿ ರಾಜ್ಯ ಸರಕಾರಗಳ ನೀರಾವರಿ ನೀತಿಯಿಂದಾಗಿ, ಕೃಷ್ಣಾ ನೀರಾವರಿ ಪ್ರದೇಶದ ರೈತರ ಸಂಕಷ್ಟ-ಗೋಳನ್ನು ಪರಿಣಾಮಕಾರಿಯಾಗಿ ವಿವರಿಸಿ ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿದರು. ರೈತ ಸಂಘದ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್ ಅಧ್ಯಕ್ಷತೆವಹಿಸಿದ್ದರು. ಹಳೆಪ್ಪ ಹವಲದಾರ ಅವರು ಆಭಾರ ಮನ್ನಿಸಿದರು. ಹೋರಾಟವನ್ನು ತೀವ್ರಗೊಳಿಸಬೇಕೆಂಬ ಹೊಸ ಹುಮ್ಮಸ್ಸಿನಿಂದ ಸಮಾವೇಶ ಮುಕ್ತಾಯವಾಯಿತು.

ಪುಟ 8 ನೋಡಿ

ಸೆಪ್ಟೆಂಬರ್ 15: ರಾಜ್ಯಾದ್ಯಂತ ಸಾಮೂಹಿಕ ಸಂಘಟನೆಗಳ ಪ್ರತಿಭಟನಾ ಧರಣಿ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರೆಯ ಮೇರೆಗೆ ಸೆಪ್ಟೆಂಬರ್ 15 ರಂದು ರಾಜ್ಯದಲ್ಲೂ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹೊಸ ಆರ್ಥಿಕ ನೀತಿಗಳ ಹಾಗೂ ಕೋಮುವಾದದ ವಿರುದ್ಧ ಸಾಮೂಹಿಕ ಧರಣಿ ನಡೆದಿವೆ. ಕಾರ್ಮಿಕರು, ನೌಕರರು, ರೈತರು, ಕೃಷಿಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿ-ಯುವಜನರ ಪ್ರತಿನಿಧಿಗಳು ಭಾಗವಹಿಸಿದ್ದಾರೆ. ವಿವರಗಳು ಮುಂದಿನ ವಾರ

ಈ ವಾರದ ವ್ಯಂಗ್ಯ ಚಿತ್ರ 'ಟೈಂಸ್ ಆಫ್ ಇಂಡಿಯಾ'ದಲ್ಲಿ ಕೇಂದ್ರ ಸಂಪುಟ ವಿಸ್ತರಣೆಯ ಬಗ್ಗೆ ಲಕ್ಷ್ಮಣ್

ಏನೇ ಆಗಲಿ, ಪಾಪ, ಪಕ್ಷದ ಇಮೇಜನ್ನು ಬಲ ಪಡಿಸಲು ತನ್ನಿಂದ ಸಾಧ್ಯವಾದುದೆಲ್ಲಾ ಮಾಡಿದ್ದಾರೆ!



ಏಜೆಂಸಿದಾರರಲ್ಲಿ, ಓದುಗರಲ್ಲಿ ವಿನಂತಿ

'ಐಕ್ಯರಂಗ'ದ ಹಣಕಾಸು ಸ್ಥಿತಿ ಸುಧಾರಿಸುವಲ್ಲಿ ಸಹಕರಿಸಿ

ನೀವು ಈಗಾಗಲೇ ಗಮನಿಸಿರುವಂತೆ 'ಐಕ್ಯರಂಗ' ಕಳೆದ ಕೆಲವು ವಾರಗಳಿಂದ ಪ್ರತೀವಾರ ಪ್ರಕಟವಾಗುತ್ತಿರಲಿಲ್ಲ. ಇದಕ್ಕೆ ಏಕೈಕ ಕಾರಣ ಹಣಕಾಸಿನ ತೊಂದರೆ ಎಂಬುದೂ ನಿಮಗೆ ತಿಳಿದಿದೆ. ಇದರಿಂದಾಗಿ ಅವಧಿಯಲ್ಲಿ ರಾಜ್ಯದಲ್ಲಿ, ದೇಶದಲ್ಲಿ, ಜಗತ್ತಿನಲ್ಲಿ ನಡೆದ ಹಲವಾರು ಘಟನೆಗಳ ಬಗ್ಗೆ - ಕಾವೇರಿ ವಿವಾದ, ಹಕ್ಕು ಚ್ಯುತಿ ಪ್ರಕರಣ, ಈಗ ವಾಸುದೇವನ್ ಪ್ರಕರಣ, ರಾಜಕೀಯದಲ್ಲಿ ತೆಲುಗುದೇಶಂ ಬಿಕ್ಕಟ್ಟು, ತಮಿಳುನಾಡಿನಲ್ಲಿ ಹಿಂದಿನ ರಾಜ-ಮಹಾರಾಜರುಗಳನ್ನು ನಾಚಿಸುವ ಆಡಂಬರದ ಪ್ರದರ್ಶನ, ಬೋಸ್ನಿಯಾ, ನೇಪಾಳದಲ್ಲಿನ ಘಟನೆಗಳು ಇತ್ಯಾದಿಗಳ ಬಗ್ಗೆ ಮಾಹಿತಿಗಳನ್ನು, ವಿಶ್ಲೇಷಣೆಗಳನ್ನು ಒದಗಿಸುವುದು ನಮಗೆ ಸಾಧ್ಯವಾಗಲಿಲ್ಲ, ಅದೇ ರೀತಿ ಜನಸಾಮಾನ್ಯರ ನಡುವೆ ದುಡಿಯುತ್ತಿರುವ ಪಕ್ಷದ, ಸಾಮೂಹಿಕ ಸಂಘಟನೆಗಳ ವಿವಿಧ ಘಟಕಗಳ ಚಟುವಟಿಕೆಗಳ ಸುದ್ದಿಗಳನ್ನು ಪ್ರಕಟಿಸುವುದೂ ಸಾಧ್ಯವಾಗಲಿಲ್ಲ.

ಇನ್ನು ಮುಂದೆ ಹೀಗಾಗಬಾರದು ಎಂಬುದು ಎಲ್ಲೆಡೆಯಿಂದ ವ್ಯಕ್ತವಾಗುತ್ತಿರುವ ಆಶಯ. ಆದರೆ ಇದು ಸಾಧ್ಯವಾಗಬೇಕಾದರೆ ಓದುಗರ, ಏಜೆಂಸಿದಾರರ ಸಹಕಾರ ಅತ್ಯಗತ್ಯ - ಮುಖ್ಯವಾಗಿ ಏಜೆಂಸಿದಾರರ ಸಹಕಾರ. ಏಕೆಂದರೆ ಹೊಸ ಆರ್ಥಿಕ ನೀತಿಗಳ ದುಷ್ಫಲವಾಗಿ ಸರ್ವತ್ರ ತೀವ್ರ ಬೆಲೆಯೇರಿಕೆಯಾದಂತೆ ಪತ್ರಿಕೆಯ ನಿರ್ವಹಣಾ ವೆಚ್ಚದಲ್ಲೂ ವಿಪರೀತ ಏರಿಕೆಯಾಗಿದೆ. ಇಂತಹ ಸಂದರ್ಭದಲ್ಲಿ ನಮ್ಮ ಪತ್ರಿಕೆಯ ಬೆನ್ನೆಲುಬಾಗಿರುವ ಏಜೆಂಸಿದಾರರಲ್ಲಿ ಬಹಳ ಮಂದಿ ತಮ್ಮ ಬಾಕಿಗಳನ್ನು ತೀರಿಸದಿರುವುದು 'ಐಕ್ಯರಂಗ'ದ ಹಣಕಾಸು ಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದೆ. ಆದ್ದರಿಂದ ನಮ್ಮ ಮಾನ್ಯ ಏಜೆಂಸಿದಾರರು ತಮ್ಮ ಬಾಕಿಗಳನ್ನೆಲ್ಲಾ ಬೇಗನೇ ತೀರಿಸುವ ಮೂಲಕ ನೆರವಾಗಬೇಕೆಂದು, ಅದೇ ರೀತಿ ನಮ್ಮ ಓದುಗರು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸಲು ಅದಕ್ಕೆ ಅಗತ್ಯವಾಗಬಹುದಾದ ಪತ್ರಿಕೆಯ ಲೋಪ-ದೋಷಗಳ ಬಗ್ಗೆ ತಿಳಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇವೆ.

-ವ್ಯವಸ್ಥಾಪಕರು

ಕರ್ನಾಟಕ

ಸುದ್ದಿ ಸಮಾಚಾರ

ಇ.ಎಂ.ಎಸ್. ಒಬ್ಬ ಶ್ರೇಷ್ಠ ಸಾಧಕರು

-ಕಾಂ. ನಾಯನಾರ್

ಭಾರತದ ಕಮ್ಯುನಿಸ್ಟ್ ಚಳುವಳಿಯ ಹಿರಿಯ ನೇತಾರರಾದ ಕಾಂ. ಇ.ಎಂ.ಎಸ್. ನಂಬೂದರಿಪ್ಪಾಡ್ ಅವರನ್ನು ಕುರಿತ ಪ್ರಸಕ್ತ 'ಇಎಂಎಸ್'ನ ನಾಲ್ಕನೇ ಆವೃತ್ತಿಯ ಬಿಡುಗಡೆಯ ಸಮಾರಂಭ. ಸೆಪ್ಟೆಂಬರ್ 2ರಂದು ಬೆಂಗಳೂರಿನ ಪುರಭವನದಲ್ಲಿ ನಡೆಯಿತು.

ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರೂ, ಕೇರಳದ ಮಾಜಿಮುಖ್ಯಮಂತ್ರಿ ಕಾಂ.ನಾಯನಾರ್ ಅವರು ಪುಸ್ತಕವನ್ನು ಬಿಡುಗಡೆ ಮಾಡಿದರು. ಹಾಗೂ ಸಮಾರಂಭದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಡಾ.ಯು.ಆರ್.ಅನಂತಮೂರ್ತಿಯವರು, ಡಾ.ಜಿ. ರಾಮಕೃಷ್ಣ, ಕೇರಳದ ಪ್ರೊ. ಜಗನ್ನಾಥ ಫಣಿಕ್ಕರ್ ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಕಾಂ.ಪಿ.ರಾಮಚಂದ್ರರಾವ್‌ಮುಂತಾದವರುಪಾಲ್ಗೊಂಡಿದ್ದರು.

ಡಾ. ಯು.ಆರ್. ಅನಂತ ಮೂರ್ತಿಯವರು ಮಾತನಾಡುತ್ತಾ ಕೇರಳ ಇಂದು ಭಾರತದಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕವಾಗಿ ಮುಂದುವರಿದ ರಾಜ್ಯಗಳ ಮುಂಚೂಣಿಯಲ್ಲಿದೆ. ಅದಕ್ಕೆ ಅಲ್ಲಿನ ಎಡ ಪಂಥೀಯ ಚಳುವಳಿಯೇ ಕಾರಣ. ಇ.ಎಂ.ಎಸ್. ಅವರಂತೆ ಒಂದು ಪ್ರದೇಶದ ಚರಿತ್ರೆಯ ನಿರ್ಮಾಣದಲ್ಲಿ ನಿರ್ಣಾಯಕ ಪಾತ್ರ ವಹಿಸಿದವರು ಭಾರತದಲ್ಲಿ ಇನ್ನೊಬ್ಬರಿಲ್ಲ. ಇಎಂಎಸ್ ಗಾಂಧಿಯುಗದ ಕೊನೆಯ ಮಹಾಪುರುಷಎಂದುಹೇಳಿದರು.

ಭಾರತದಲ್ಲಿ ಶಿಕ್ಷಣದ ಪ್ರಶ್ನೆಯ ಮೇಲೆ ತಮ್ಮ ಅಧಿಕಾರವನ್ನು ಕಳೆದುಕೊಂಡ ಏಕೈಕ ಮುಖ್ಯಮಂತ್ರಿ ಸರಕಾರ ಇ.ಎಂ.ಎಸ್. ಮತ್ತು ಅವರ ಸರಕಾರ. 1959ರಲ್ಲಿ ಕೇರಳದಲ್ಲಿ ಶಿಕ್ಷಣವನ್ನು ಮಠ, ಚರ್ಚು, ಮಸೀದಿಗಳಂತಹ ಧಾರ್ಮಿಕ ಹಾಗೂ ಕೋಮು ಸಂಘಗಳ ಹಿಡಿತದಿಂದ ಬಿಡಿಸುವ ಪ್ರಯತ್ನಗಳ ಪರಿಣಾಮವಾಗಿ ಇಎಂಎಸ್ ನೇತೃತ್ವದ ಕಮ್ಯುನಿಸ್ಟ್ /ಎಡ ಪ್ರಜಾಪ್ರಭುತ್ವ ಸರಕಾರ ವಜಾ ಮಾಡಲ್ಪಟ್ಟಿತು ಎಂದು ಅವರು ತಿಳಿಸಿದರು.

ಮಾರ್ಕ್ಸ್‌ವಾದಿಗಳೊಂದಿಗೆ ತಮಗೆ ಹಲವು ವೈಚಾರಿಕ ಭಿನ್ನಾಭಿಪ್ರಾಯಗಳಿದ್ದರೂ ಸಹ, ಮಾರ್ಕ್ಸ್‌ವಾದಿಗಳನ್ನು ತಾವು ಮೆಚ್ಚಿಕೊಳ್ಳಲು ಕಾರಣ ಭಾರತದ ವಾಸ್ತವ ಪರಿಸ್ಥಿತಿಯ ಸರಿಯಾದ ವಿಶ್ಲೇಷಣೆ,-ಪ್ರಾದೇಶಿಕ ವೈಶಿಷ್ಟ್ಯತೆ ಸಂಸ್ಕೃತಿಗಳ, ಭಾಷೆಗಳ ರಕ್ಷಣೆಯ ಅಗತ್ಯವನ್ನು ಸರಿಯಾಗಿ ಗುರುತಿಸಿಕೊಳ್ಳುವಾಗಲೇ ರಾಷ್ಟ್ರದ ಐಕ್ಯತೆಯ ಸಮಗ್ರತೆಯ ಬಗೆಗಿನ ಅವರ ಅಸೀಮ ಬದ್ಧತೆ -ಏಕತೆ ವಿವಿಧತೆಗಳ ನಡುವಿನ ಸಮನ್ವಯ ಎಂದು ಅವರು ಹೇಳಿದರು.

ಕೇರಳದ ಎಡರಂಗ ಸರಕಾರದ ಅವಧಿಯಲ್ಲಿ ತಾವು ಮಹಾತ್ಮ ಗಾಂಧಿ ವಿಶ್ವವಿದ್ಯಾಲಯದ ಉಪ ಕುಲಪತಿಗಳಾಗಿದ್ದ 4 ವರ್ಷಗಳ ಅವಧಿಯಲ್ಲಿ ಒಂದೇ ಒಂದು ದಿನವೂ ಸಹ ಎಡರಂಗ ಸರಕಾರದ ಯಾವುದೇ ಮಂತ್ರಿ, ಶಾಸಕ, ರಾಜಕಾರಣಿ, ಮುಖ್ಯಮಂತ್ರಿ ವಿ.ವಿ.ಯ ಹಾಗೂ ಉಪ ಕುಲಪತಿಯ ಸ್ವಾಯತ್ತ ಅಧಿಕಾರವನ್ನು ಉಲ್ಲಂಘಿಸುವ 'ಒಂದೇ ಒಂದು' ನಿರ್ದೇಶನವನ್ನು ಯಾರೂ ನೀಡಲಿಲ್ಲ ಎಂದು ತಿಳಿಸಿದರು.

ಕಾಂ. ಇ.ಎಂ.ಎಸ್. ಅವರನ್ನು ಕುರಿತ 'ಇ.ಎಂ.ಎಸ್.' ಪುಸ್ತಕದ ನಾಲ್ಕನೇ ಆವೃತ್ತಿಯನ್ನು ಬಿಡುಗಡೆ ಮಾಡಿದ ಕಾಂ. ಇ.ಕೆ. ನಾಯನಾರ್ ಅವರು ಮಾತನಾಡಿ 1937ರಲ್ಲಿ ಕೇರಳದಲ್ಲಿ ಕೇವಲ 4 ಜನರೊಂದಿಗೆ ಆರಂಭವಾದ ಕಮ್ಯುನಿಸ್ಟ್ ಪಕ್ಷವನ್ನು 1957ರಲ್ಲಿ ಅಧಿಕಾರಕ್ಕೆ ತಂದ ಚಳುವಳಿಗೆ ಇ.ಎಂ.ಎಸ್. ನೇತೃತ್ವ ನೀಡಿದರು. ಅವರು 'ಸಾಧಕರು' ಎಂದರು.

ಆದರೆ ಅವರ ಸಾಧನೆಯು ಅವರು ಪಕ್ಷಕ್ಕೆ ದಾನ ನೀಡಿದ ತಮ್ಮ ಅಪಾರ ಆಸ್ತಿಯಿಂದ ಸಾಧ್ಯವಾದುದಲ್ಲ. ಮಾರ್ಕ್ಸ್‌ವಾದ, ಲೆನಿನ್‌ವಾದದ ಸಮರ್ಥ ಅರ್ಥೈಸುವಿಕೆ, ಪ್ರಯೋಗದಿಂದ ಮಾತ್ರ ಅದುಸಾಧ್ಯವಾಯಿತು ಎಂದರು. ಸಮಾಜ ಬದಲಾವಣೆಯ ಕಣ್ಣೋಟದಿಂದ, ವರ್ಗ ದೃಷ್ಟಿಕೋನದಿಂದ ಮಾತ್ರ ಇಂಥ ಸಾಧನೆ ಸಾಧ್ಯವಾಯಿತುಎಂದುಅವರುಪ್ರತಿಪಾದಿಸಿದರು.

ಡಾ. ಜಿ. ರಾಮಕೃಷ್ಣ ಅವರು ಕಾಂ. ಇ.ಎಂ.ಎಸ್. ಅವರ ಬೌದ್ಧಿಕ ವೈಚಾರಿಕ ಪ್ರಖರತೆಯ ಬಗ್ಗೆ ಮಾತನಾಡಿ, ಅವರ ವಿಶ್ಲೇಷಣಾತ್ಮಕ ಬೌದ್ಧಿಕ ಶಿಸ್ತನ್ನು ಪ್ರಶಂಸಿಸಿದರು. ವಿಶ್ವದ ಎಲ್ಲಾ ತಾತ್ವಿಕ ಚಿಂತನೆಯನ್ನು ಕರಗತ ಮಾಡಿಕೊಂಡ ಚಿಂತಕ ಇ.ಎಂ.ಎಸ್.ಎಂದ ಅವರು, ನೈಜ ಹೋರಾಟಗಳ ನಡುವಿನಿಂದ ಮೂಡಿ ಬಂದವರು. ಮಾತ್ರವೇ ಶ್ರೇಷ್ಠ ಚಿಂತಕರಾಗಬಲ್ಲರು, ಹೋರಾಟದ ಅನುಭವವಿಲ್ಲದ ಬುದ್ಧಿ ಜೀವಿ- ಕೇವಲ 'ಸೆಮಿನಾರಿಸ್ಟ್' ಆಗುತ್ತಾನೆ. ಇ.ಎಂ.ಎಸ್. ಹೋರಾಟಗಳ ನಡುವಿನಿಂದ ಮೂಡಿ ಬಂದ ಮಹಾನ್ ಚಿಂತಕ ಎಂದರು.

ಈ ಕಾರ್ಯಕ್ರಮದಲ್ಲಿ 'ಚಿಂತಾ' ಪತ್ರಿಕೆಯ ಸಂಪಾದಕರ ಡಿ. ಭಾಸ್ಕರನ್ ಇ.ಎಂ.ಎಸ್. ಪುಸ್ತಕ ಲೇಖಕ ಪಿ.ವಿ. ದಾಸ್ ಸಿಪಿಎಸಿಯ ಸಿ. ಕುಂಜಪ್ಪನ್, ಆರ್.ವಿ. ಆಚಾರಿ ಮುಂತಾದವರು ಪಾಲ್ಗೊಂಡಿದ್ದರು.

ಇದಕ್ಕೆ ಮುಂಚೆ 'ಕೇರಳ ಹಾಗೂ ಕರ್ನಾಟಕ' ಗಳಲ್ಲಿ ಪುನರುಜ್ಜೀವನ ಚಳುವಳಿ' ಕುರಿತು ವಿಚಾರ ಸಂಕಿರಣ ನಡೆಯಿತು. ಈ ಸಂದರ್ಭದಲ್ಲಿ ಪ್ರೊ. ಜಗನ್ನಾಥ ಫಣಿಕ್ಕರ್ ಅವರು ಕೇರಳದ ಸಮಾಜ ಸುಧಾರಣಾ ಚಳುವಳಿಯ ಬಗ್ಗೆ ಮಾತನಾಡಿ ಹತ್ತೊಂಭತ್ತನೆಯ ಶತಮಾನದ ಕೊನೆಯಲ್ಲಿ ಶ್ರೀ ನಾರಾಯಣಗುರು ಆರಂಭಿಸಿದ ಧಾರ್ಮಿಕ ಸುಧಾರಣಾ'ದ ಚಳುವಳಿ -ಬಂಗಾಳದಲ್ಲಿ ವಿವೇಕಾನಂದ, ರಾಜಾ ರಾಮ್ ಮೋಹನ್ ರಾಯ್ ಅವರ ಚಳುವಳಿ ಕೇರಳದ ಸಮಾಜದಲ್ಲಿ ವ್ಯಾಪಕ ಪ್ರಭಾವ ಬೀರಿತು.

ಸಾಹಿತ್ಯದ ಎಲ್ಲ ರಂಗಗಳಲ್ಲಿ ಈ ಪುನರುಜ್ಜೀವನ ಚಳುವಳಿಯೇ ಕೇರಳದಲ್ಲಿ ಎಡಪಂಥೀ' . ಕ್ರಾಂತಿಕಾರಿ ಚಳುವಳಿಗೆ ಭೂಮಿಕೆಯನ್ನೊದಗಿಸಿತು. 19ನೇ ಶತಮಾನದ ಅಂತ್ಯದಲ್ಲಿ ಆರಂಭವಾದ ಈ ಚಳುವಳಿ 1957ರಲ್ಲಿ ಕಮ್ಯುನಿಸ್ಟ್ ಸರಕಾರ ಅಧಿಕಾರಕ್ಕೆ ಬಂದಾಗ ತನ್ನ 'ಕ್ಲೈಮ್ಯಾಕ್ಸ್' ಹಂತವನ್ನು ತಲುಪಿತು ಎಂದರು.

ಕೇರಳದ ಈ ಚಳುವಳಿಗೆ ಸಾಹಿತಿಗಳಾದ ವೆಲ್ಲತ್ತೋಳ ನಾರಾಯಣನ್, ಕುಮಾರನ್, ಈಶನ್ ಮುಂತಾದವರ ಕೊಡುಗೆಯನ್ನು ಅವರು ಸ್ಮರಿಸಿದರು.

ಕರ್ನಾಟಕ ಸಮಾಜ ಸುಧಾರಣಾ ಚಳುವಳಿಯ ಬಗ್ಗೆ ಬರಗೂರು ರಾಮಚಂದ್ರಪ್ಪ ಅವರು ಮಾತನಾಡಿ. ಜಡ-ಯಥಾ-ಸ್ಥಿತಿಯ ನೆಲೆಯನ್ನು ಮೀರಿದ ಸಾಮಾಜಿಕ ಚಲನೆ, ಸಂಘರ್ಷವನ್ನು ನಿರ್ಲಕ್ಷಿತ ಸಮುದಾಯದ ಪರವಾದ ದನಿಯನ್ನು ತಾವು 'ಸುಧಾರಣೆ' ಎಂದು ಭಾವಿಸುವುದಾಗಿ ತಿಳಿಸಿ ಈ ಅರ್ಥ ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ನಡೆದ ವಚನ ಚಳುವಳಿ ತನ್ನ ಅನೇಕ ಮಿತಿಗಳ ನಡುವೆಯೂ ಕ್ರಾಂತಿಕಾರಕ ಚಳುವಳಿ ಎಂದ ಅವ ಖಾಸಗಿ ಭಕ್ತಿಯನ್ನು ಪ್ರತಿಪಾದಿಸಿದ ಧರ್ಮದ ಸಾಂಸ್ಥೀಕರಣವನ್ನು, ದೇವಾಲಯವನ್ನು ನಿರಾಕರಿಸಿದ ಈ ಚಳುವಳಿ ದಲಿತರನ್ನು ಧಾರ್ಮಿಕ ಕಕ್ಷೆಗೆ ತೆಗೆದುಕೊಂಡಿತು ಎಂದರು.

ಮುಂದೆ 16-17ನೇ ಶತಮಾನದ ಭಕ್ತಿ ಸಾಹಿತ್ಯ ರಾಜ ಪ್ರಭುತ್ವ ದಿಂದ ಭಕ್ತಿಯನ್ನು ಪ್ರತ್ಯೇಕಿಸಿ ಬೀದಿಗೆ ತಂದ ಚಳುವಳಿ ಎಂದರು. ಕನಕದಾಸರ 'ರಾಮಧ್ಯಾನ ಚರಿತೆ'ಯ ಅಕ್ಕಿ-ರಾಗಿಗಳ ಜಗಳ ಘರ್ಷಣೆ ಮೇಲ್ವರ್ಗ ಹಾಗೂ ಕೆಳವರ್ಗ ಘರ್ಷಣೆ ಸಂಕೇತ ಎಂದರು. 20ನೇ ಶತಮಾನದ ಆರಂಭದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಉರ್ದು ಶಾಲೆಯ ಆರಂಭ, ಜಾತ್ಯಾತೀತ ನೀತಿಯ ಪ್ರತಿಪಾದನೆ, ಹಿಂದುಳಿದವರಿಗೆ ಮೀಸಲಾತಿ-ಪ್ರಜಾಪ್ರತಿನಿಧಿ ಸಭೆ-ಮಹಿಳೆಯರಿಗೆ ಆದ್ಯತೆ- ಇತರ ದಿಗಳು ಸಾಹಿತ್ಯ ರಂಗದಲ್ಲಿ ಶಿಶುನಾಳ ಷರೀಫರು, ಮುಂತಾದವರು ನವೋದಯದ ಸಂದರ್ಭದಲ್ಲಿ ಕುವೆಂಪು, ಬೇಂದ್ರೆ ನಂತರ ನಿರಂಜನ, ಬಸವರಾಜ ಕಟ್ಟೀಮನಿ ಮುಂತಾದವರು ಸಮಾಜ ಸುಧಾರಣಾ ಚಳುವಳಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು.

ವರದಿ : ಆರ್. ರಾಮಕೃಷ್ಣ

ಸಿಐಟಿಯು ಬೆಳ್ಳಿಹಬ್ಬ ಆಚರಣೆ

ಕುಂದಾಪುರ

ಆಗಸ್ಟ್ 27, 95ರಂದು ಕುಂದಾಪುರದಲ್ಲಿ ಸಿಐಟಿಯುವಿಗೆ ಸೇರಿದ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ, ಕುಂದಾಪುರ ನೆಹರು ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ, ಸಿಐಟಿಯುವಿನ ರಾಜ್ಯ ಸಮಿತಿಯ ಕಾರ್ಯದರ್ಶಿಯವರಾದ ಕಾಂ. ಕೆ. ಶಂಕರ್‌ರವರ ಅಧ್ಯಕ್ಷತೆಯಲ್ಲಿ ಬೆಳ್ಳಿಹಬ್ಬದ ಸಭೆಯು ನಡೆಯಿತು. ಎಸ್.ಕೆ. ಬೀಡಿ ವರ್ಕರ್ಸ್ ಯೂನಿಯನ್‌ನ ಕುಂದಾಪುರ ಶಾಖೆಯ ಕಾರ್ಯದರ್ಶಿಯವರಾದ ಶ್ರೀ. ಕೆ.ನಾರಾಯಣರವರು ಸ್ವಾಗತಿಸಿ ಕಳೆದ 25 ವರ್ಷಗಳ ಅವಧಿಯಲ್ಲಿ ಸಿಐಟಿಯುವಿನ ನೇತೃತ್ವದಲ್ಲಿ ನಡೆದ ಚಳುವಳಿ ಹಾಗೂ ಸಾಧನೆಯ ಬಗ್ಗೆ ವಿವರಿಸಿದರು.

ಉದ್ಘಾಟನೆಯನ್ನು ರಾಜ್ಯ ಸಮಿತಿಯ ಉಪಾಧ್ಯಕ್ಷರಾದ ಕಾಂ. ಸಿ. ನಂಜುಂಡಪ್ಪನವರು ನೆರವೇರಿಸಿ ಮಾತನಾಡುತ್ತಾ ಸಿಐಟಿಯು ಅಸಂಘಟಿತ ಕಾರ್ಮಿಕರ ಶೋಷಿತ ವರ್ಗದ ನೆರವಿಗೆ ಹೋಗುವ ಸಂಘಟನೆ. ವೇತನ ಕೂಲಿಗೆ ವ್ಯವಸ್ಥೆ ಬದಲು ಮಾಡಲು ದುಡಿಯುವ ಬೇರೆ ವಿಭಾಗಗಳ ಜನರ ಸಖ್ಯತೆ ಬಯಸುವ ಸಂಘಟನೆ ಎಂದರು.

ಸಿಐಟಿಯು ಜಿಲ್ಲಾ ಸಮಿತಿಯ ಸದಸ್ಯರಾದ ವಿ.ನರಸಿಂಹರವರು ಹಾಗೂ ರೈತ ಸಂಘದ ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿಯವರಾದ ಅಬ್ರಹಾಂ ಕರ್ಕಡರವರು ಮಾತನಾಡಿ ದುಡಿಯುವ ವರ್ಗ ರಾಜಕೀಯ ಪ್ರಜ್ಞೆಯನ್ನು ಬೆಳೆಸಿ, ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಲು ಮುಂದಾಗಬೇಕೆಂದರು. ಕಾರ್ಯಕ್ರಮದ ಕೊನೆಯಲ್ಲಿ ಕಾಂ. ಮಹಾಬಲ ಒಡೇರಹೋಬಳಿಯವರು ವಂದಿಸಿದರು.

ಹಾಸನ:

ಸಿಐಟಿಯುವಿನ ಬೆಳ್ಳಿಹಬ್ಬ ಆಚರಣೆ ಆಗಸ್ಟ್ 19ರಂದು ಹಾಸನದ ಗಣಪತಿ ಪೆಂಡಾಲ್‌ನಲ್ಲಿ ಕಾರ್ಮಿಕರ ಸಮಾವೇಶ ಜರುಗಿತು.

ಈ ಕಾರ್ಯಕ್ರಮವನ್ನು ಸಿಐಟಿಯುವಿನ ರಾಜ್ಯ ಉಪಾಧ್ಯಕ್ಷರಾದ ಸಿ. ನಂಜುಂಡಪ್ಪ ಉದ್ಘಾಟಿಸಿ, ಸಿಐಟಿಯು ಸ್ಥಾಪನೆ, ಬೆಳವಣಿಗೆಗಳ ಕುರಿತು ಇತಿಹಾಸವನ್ನು ತಿಳಿಸಿದರು. ಕುಡಿಯುವ ಜನತೆ, ಜಾತಿ, ಮತ,

ಭಾಷೆ ಮತ್ತು ಪ್ರಾದೇಶಿಕ ಮನೋಭಾವವನ್ನು ಬಿಟ್ಟು ಐಕ್ಯತೆಯಿಂದ ಹೋರಾಡಬೇಕೆಂದು ಅವರು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿದ್ದ ಸಿಐಟಿಯುವಿನ ಹಿರಿಯ ಉಪಾಧ್ಯಕ್ಷ ಕಾ. ಎನ್.ಕೆ. ಉಪಾಧ್ಯಾಯ ಮಾತನಾಡಿ, ಕಾರ್ಮಿಕರ ಹಿತಸಾಧನೆಗಾಗಿ ಬೇರೆ ಬೇರೆ ಸಂಘಟನೆಗಳ ಐಕ್ಯತೆ ಮತ್ತು ಹೋರಾಟ ಅಗತ್ಯವೆಂದರು. ಸಾಮೂಹಿಕ ಸಂಘಟನೆಗಳ ವೇದಿಕೆ, ಕಾಂಗ್ರೆಸ್‌ನ ಆರ್ಥಿಕ ನೀತಿಗಳ ವಿರುದ್ಧ ಸೆಪ್ಟೆಂಬರ್‌ನಲ್ಲಿ ಸಂಘಟಿಸಿರುವ ಹೋರಾಟಕ್ಕೆ ಬೆಂಬಲ ನೀಡಬೇಕೆಂದರು.

ಮತ್ತೋರ್ವ ಅತಿಥಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಸಂಘಟನೆಯ ರಾಜ್ಯ ಸಂಚಾಲಕಿ ಕಾಂ. ವರಲಕ್ಷ್ಮಿ ಮಾತನಾಡಿ 17ಲಕ್ಷ ಬಾಲ ಕಾರ್ಮಿಕರು, 4ಲಕ್ಷ ಜನ ಬಾಲವೇಶ್ಯೆಯರು ಭಾರತದಲ್ಲಿದ್ದು, ಇದು ಆಡಳಿತ ನಡೆಸುತ್ತಿರುವವರ ವಿಕೃತ ನೀತಿಗಳ ಪರಿಣಾಮವೆಂದರು.

ಬೆಳ್ಳಿ ಹಬ್ಬ ಆಚರಣೆಗೆ ಸಮತಾ ಮಹಿಳಾ ಸಂಘಟನೆಯ ರಾಜ್ಯ ಸಂಚಾಲಕಿ ಹಾಗೂ ಭಾರತ ಜ್ಞಾನ ವಿಜ್ಞಾನ ಸಮಿತಿಯ ಪ್ರಮುಖ ಕಾರ್ಯಕರ್ತೆ ಶ್ರೀಮತಿ ಸಿ.ಸೌಭಾಗ್ಯ ಶುಭ ಕೋರಿ ಮಾತನಾಡಿದರು.

ಸಭೆಯ ಅಧ್ಯಕ್ಷತೆಯನ್ನು ಕಾಂ.ವಿ.ಸುಕುಮಾರ್ ಕಾಂ.ದೂಜ ಮತ್ತು ಕಾಂ.ರಾಘವೇಶ್ವ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾಂ.ಕೆ.ಟಿ.ರಾಘವೇಂದ್ರ ಮೊದಲಿಗೆ ಸ್ವಾಗತಿಸಿ,ಕೊನೆಯಲ್ಲಿವಂದಿಸಿದರು.

ಕೊಡಗು:

ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್(ಸಿಐಟಿಯು)ನ ವತಿಯಿಂದ ಆಗಸ್ಟ 15 ರಂದು ಗೋಣಿಕೊಪ್ಪ ಪಂಚಾಯ್ತಿ ಸಭಾಂಗಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಸಿಐಟಿಯುನ ಕಳೆದ 'ಇಪ್ಪತ್ತೈದು' ವರ್ಷಗಳ ಸಾಧನೆಗಳು ಹಾಗೂ ಜಿಲ್ಲೆಯಲ್ಲಿ ಕಾರ್ಮಿಕರ ಚಳುವಳಿ ಕುರಿತು ವಿಚಾರ ಸಂಕಿರಣದಲ್ಲಿ ಸಿಐಟಿಯುನ ಅಖಿಲ ಭಾರತ ಕಾರ್ಯಕಾರಿ ಮಂಡಳಿ ಸದಸ್ಯರಾದ ಕಾಂ.ಆರ್.ಮೋಹನ್ ಕುಮಾರ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ 'ಕಾರ್ಮಿಕರ ಸಂಘಟನೆ ನಿನ್ನೆ ಇವತ್ತು ಮತ್ತು ಸಿಐಟಿಯುವಿನ ಸಾಧನೆ' ಎನ್ನುವ ವಿಷಯದ ಕುರಿತಾಗಿ ಮಾತನಾಡಿದರು.

ಜೀವವಿಮಾ ನೌಕರರ ಸಂಘ, ಡಿವೈಎಫ್‌ಐ, ಅಖಿಲ ಭಾರತ ಬ್ಯಾಂಕ್ ನೌಕರರ ಫೆಡರೇಶನ್ (ಬಿಇಎಫ್‌ಐ) ಸಂಘಟನೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದ ಸಿಐಟಿಯು ಬೆಳ್ಳಿ ಹಬ್ಬ ಸಮಾರಂಭದಲ್ಲಿ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಹೆಚ್.ಎಂ.ಕಾಳಯ್ಯ ಸರ್ವರನ್ನು ಸ್ವಾಗತಿಸಿದರು.

ವೇದಿಕೆಯ ಮೇಲೆ ಪೀಟರ್ ಲೋಬೋ, ಡಾ.ಆರ್.ಅಪ್ಪಣ್ಣ, ಎನ್.ಡಿ.ಕುಟ್ಟಪ್ಪ, ಕಿಶೋರ್ ಕುಟ್ಟಪ್ಪ ಉಪಸ್ಥಿತರಿದ್ದರು.

ಗುರುಪುರ:

1970ರಲ್ಲಿ ಎಐಟಿಯುಸಿಯಿಂದ ಪ್ರತ್ಯೇಕಗೊಂಡು ವರ್ಗ ಹೋರಾಟದ ಹಾದಿಯಲ್ಲಿ ದೃಢವಾಗಿ ಮುನ್ನಡೆಯುತ್ತಾ ಕಾರ್ಮಿಕ ವರ್ಗಕ್ಕೆ ಸಿಐಟಿಯು ನಾಯಕತ್ವ ನೀಡಲಾರಂಭಿಸಿ, 25 ವರ್ಷಗಳು ತುಂಬಿದ್ದು, ಇಂದು ನರಸಿಂಹ ರಾವ್ ಸರಕಾರದ ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿಗೆದುರಾಗಿ ರೈತ ಕಾರ್ಮಿಕ, ವಿದ್ಯಾರ್ಥಿ, ಯುವಜನತೆ, ಬುದ್ಧಿಜೀವಿಗಳನ್ನು ಒಂದೇ ವೇದಿಕೆಯಡಿಯಲ್ಲಿ ಅಣಿನೆರಿಸಿ, ದೃಢವಾದ ಹೋರಾಟ ನಡೆಸಲು ಸಿಐಟಿಯುಗೆ ಸಾಧ್ಯವಾಗಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ.ವಿ.ಜೆ.ಕೆ.ನಾಯರ್ ಆಗಸ್ಟ್ 11ರಂದು ಗುರುಪುರದಲ್ಲಿ ನಡೆದ ಸಿಐಟಿಯು ಬೆಳ್ಳಿಹಬ್ಬದ ಸಂದರ್ಭದಲ್ಲಿ ನುಡಿದರು.

ಜಿಲ್ಲಾ ಸಿಐಟಿಯು ಅಧ್ಯಕ್ಷರಾದ ಕಾಂ.ಬಿ.ಮಾಧವರವರು ಮಾತನಾಡುತ್ತಾ ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳ ವಿರುದ್ಧ ದೃಢ ಹೋರಾಟ ನಡೆಸಿ, ಎಲ್.ಐ.ಸಿ. ಬ್ಯಾಂಕ್‌ನಂತಹ ಕ್ಷೇತ್ರವೊಂದು ರಂಗಗಳಲ್ಲಿ ಈ ನೀತಿಗಳ ಜ್ಯಾರಿಯನ್ನು ತಿಮ್ಮ ಟ್ಟಿಸಲು ಸಾಧ್ಯವಾಗಿದೆಯೆಂದು ವಿವರಿಸಿದರು.

ರಾಜ್ಯದ ದುಡಿಯುವ ಮಹಿಳೆಯರ ಸಂಘಟನೆಯ ನಾಯಕಿ ಕಾಂ.ವರಲಕ್ಷ್ಮಿಯವರು ಮಾತನಾಡುತ್ತಾ, ಸಿಐಟಿಯು ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಮತ್ತು ಅವರ ವಿಶಿಷ್ಟ ಸಮಸ್ಯೆಗಳ ಬಗ್ಗೆ ವಿವರಿಸುತ್ತಾ ಮಹಿಳೆಯರು ಬಹುಸಂಖ್ಯಾತರಾಗಿ ದುಡಿಯುವ ಬೀಡಿಯಂತಹ ಕೈಗಾರಿಕೆಯಲ್ಲಿ ಕಾರ್ಮಿಕರಿಗೆ ನಾಯಕತ್ವ ನೀಡಲು ಮುಂದೆ ಬರುವಂತೆ ಕರೆ ನೀಡಿದರು.

ಕಾ. ವಾಸುದೇವ ಆಚಾರಿಯವರು ಸ್ವಾಗತಿಸಿದ್ದು, ಕಾ.ಗಂಗಯ್ಯ ಅಮೀನ್‌ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಕೊನೆಯಲ್ಲಿ ಕಾಂ. ಯು.ಬಿ.ಲೋಕಯ್ಯ ಧನ್ಯವಾದವಿತ್ತರು.

ಶಿವಮೊಗ್ಗ:

ಕೇಂದ್ರ ಕಾರ್ಮಿಕ ಸಂಘಟನೆಯಾದ ಸಿಐಟಿಯುವಿನ 25ನೇ ವರ್ಷದ ಬೆಳ್ಳಿ ಹಬ್ಬವನ್ನು ಆಗಸ್ಟ್ 15ರಂದು ಭದ್ರಾವತಿಯ ನ್ಯೂಟೌನ್ ಶಾರದ ಮಂದಿರದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಬೆಳ್ಳಿ ಬರಹವನ್ನು ಉದ್ಘಾಟಿಸಿ ಮಾತನಾಡಿದ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಕಾಂ.ಸಿ. ನಂಜುಂಡಪ್ಪ ಸಿಐಟಿಯು ಬೆಳೆದು ಬಂದ ದಾರಿಯನ್ನು ವಿವರಿಸುತ್ತಾ, ಐಕ್ಯ ಹೋರಾಟಗಳನ್ನು ನಡೆಸಿ ದೊಡ್ಡ ಸಾಧನೆಯನ್ನು ಮಾಡಿದೆ ಎಂದು, ಹೊಸ ಆರ್ಥಿಕ ಕೈಗಾರಿಕಾ ನೀತಿಯ ವಿರುದ್ಧ ನಡೆಸಿದ್ದ ಹೋರಾಟಗಳನ್ನು ವಿವರಿಸಿದರು. ಮುಂದಿನ ಕರ್ತವ್ಯವಾಗಿ ಪಿ.ವಿ.ಎನ್. ಸರ್ಕಾರದ ಹೊಸ ಆರ್ಥಿಕ , ಕೈಗಾರಿಕ ನೀತಿಗಳ ವಿರುದ್ಧ ಐಕ್ಯತಾ ಚಳುವಳಿಗಳ ಮುಂದುವರೆಯಬೇಕೆಂದರು.

ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಕಾಂ. ನಿತ್ಯಾನಂದ ಸ್ವಾಮಿ ಮಾತನಾಡಿದರು. ಅಧ್ಯಕ್ಷತೆ ವಹಿಸಿಮಾತನಾಡಿದ ಕಾಂ.ಎಸ್.ಬಿ. ಶಿವಶಂಕರ್‌ರವರು, ಜಿಲ್ಲೆಯಲ್ಲಿ ಸಿಐಟಿಯು ಬೆಳೆಸಿ ಮುಂದಕ್ಕೊಯ್ಯಲು ಶ್ರಮಿಸಬೇಕೆಂದು ಹೇಳಿದರು. 250ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಕಾಂ.ಎಲ್.ರಂಗೇಗೌಡ ಸ್ವಾಗತಿಸಿದರು. ಕಾಂ. ಜಿ. ರಮೇಶ್ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಕಾಂ.ನರಸಿಂಹಯ್ಯ ವಂದಿಸಿದರು.

ನೀರಾವರಿ ಯೋಜನೆಗಳ ಪುನರಾರಂಭಕ್ಕೆ ಒತ್ತಾಯ

ಬಿಜಾಪುರ: ಆಗಸ್ಟ್ 21ರಂದು ಬಿಜಾಪುರದಲ್ಲಿ ಪ್ರಾಂತ ರೈತ ಸಂಘದ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಬಸವಂತ ಕಲ್ಲೊಳ್ಳಿ ವಹಿಸಿದ್ದರು. ಸಭೆಯಲ್ಲಿ ಹಾಜರಿದ್ದ ಭೀಮಶಿ ಕಲಾದಗಿ ಮತ್ತು ಅಣ್ಣಾರಾಯ ಈಳಗೇರ ಅವರು ಮಾತನಾಡಿ ಇಂಡಿ ಮತ್ತು ಬಿಜಾಪುರ ತಾಲೂಕುಗಳಲ್ಲಿ ಸರಿಯಾಗಿ ಮಳೆಯಾಗದೆ ರೈತರು ಸಂಕಷ್ಟಕ್ಕೊಳಗಾಗಿದ್ದಾರೆ. ರೈತರ ಬೆಳೆ ನಷ್ಟಕ್ಕೆ ಪರಿಹಾರ ನೀಡಬೇಕು ಹಾಗೂ ವಿಮಾ ಯೋಜನೆಯಿಂದ ಪರಿಹಾರ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಿದರು.

ಆಲಮಟ್ಟಿ, ಕೃಷ್ಣಾ ಎಡದಂಡೆ ತಾಲೂಕುಗಳ ನೀರಾವರಿ ಕಾರ್ಯಗಳನ್ನು ತೀವ್ರ ಪುನರಾರಂಭಿಸಬೇಕೆಂದು ಸರಕಾರದ ಮೇಲೆ ಒತ್ತಾಯ ತರಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸಿಪಿಐ(ಎಂ) ಅಧ್ಯಯನ ಶಿಬಿರ

ಆಗಸ್ಟ್ 13ರಂದು ಗುಲ್ಬರ್ಗಾದ ಶಹಾಬಾದ್‌ನಲ್ಲಿ ಸಿಪಿಐ(ಎಂ)ನ ಅಧ್ಯಯನ ಶಿಬಿರವು ಎಬಿಎಲ್ ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾಂ.ಎ.ಬಿ.ದಾಸ್ ಧ್ವಜಾರೋಹಣ ಮಾಡುವದರೊಂದಿಗೆ ಉದ್ಘಾಟಿಸಲಾಯಿತು. ಅವರು ಮಾತನಾಡುತ್ತಾ ಬಂಡವಾಳಶಾಹಿ ನೀತಿ ಹಾಗೂ ಅದರ ದಬ್ಬಾಳಿಕೆಯಿಂದ ಜನರಿಗೆ ಆಗುತ್ತಿರುವ ಅನ್ಯಾಯ, ಹೊಸ ಆರ್ಥಿಕ ಹಾಗೂ ಕೈಗಾರಿಕಾ ನೀತಿಯಿಂದ ಹುಟ್ಟುತ್ತಿರುವ ನಿರುದ್ಯೋಗ ಸಮಸ್ಯೆಯ ಬಗ್ಗೆ ಯುವಜನರು ಎಚ್ಚರ ವಹಿಸಬೇಕೆಂದರು.

ಈ ಅಧ್ಯಯನ ಶಿಬಿರವನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾದ ಕಾಂ.ಪಿ.ರಾಮಚಂದ್ರರಾವ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಜಿ.ಎನ್. ನಾಗರಾಜ್, ಜಿಲ್ಲಾ ಕಾರ್ಯದರ್ಶಿಗಳಾದ ಕಾಂ.ಮಾರುತಿ ಮಾನ್ಪಡೆ ಅವರು ನಿಭಾಯಿಸಿ ತರಗತಿಗಳನ್ನು ನಡೆಸಿಕೊಟ್ಟರು. ಅಧ್ಯಯನ ಶಿಬಿರದಲ್ಲಿ 36 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಪಕ್ಷದ ಮೂಲಕ ಕಾರ್ಯಕ್ರಮಗಳನ್ನು ಅಂಗೀಕರಿಸಲಾಯಿತು.

"ನೀರುದ್ಯೋಗ ಸಮಸ್ಯೆ ಮತ್ತು ಕರ್ನಾಟಕದ ಅಭಿವೃದ್ಧಿ" ಕುರಿತ ರಾಜ್ಯ ಸಮಾವೇಶ

ದೇಶೀ ಉದ್ದಿಮೆಗಳನ್ನು ನಾಶಮಾಡಿ ನಿರುದ್ಯೋಗ ಹೆಚ್ಚಿಸುವ ನೀತಿಗಳನ್ನು ಬದಲಿಸಬೇಕು

- ಪ.ಬಂಗಾಳ ಕೈಗಾರಿಕ ಮಂತ್ರಿ

ಬೆಂಗಳೂರು: ನಮ್ಮ ದೇಶದ ಆರ್ಥಿಕ ಬೆಳವಣಿಗೆಯನ್ನು ಗಮನಿಸಿದಾಗ ನಮಗೆ ವಿಷಾದವಾಗುತ್ತದೆ. ಸ್ವಾತಂತ್ರ್ಯ ಸಿಕ್ಕಿ 49 ವರ್ಷವಾದರೂ ನಮ್ಮ ದೇಶದಲ್ಲಿ ನಿರುದ್ಯೋಗ ಅನಕ್ಷರತೆ, ಬಡತನ ಜಾಸ್ತಿಯಾಗುತ್ತಿದ್ದು ಜನರ ಕಷ್ಟ ಹೆಚ್ಚಾಗಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಕಲ್ಪಿಸಿ ಕೊಡಲು ಹಲವಾರು ಸ್ವಾತಂತ್ರ್ಯ ಹೋರಾಟಗಾರರು ಮಾಡಿದ ತ್ಯಾಗ-ಬಲಿದಾನಗಲಿಗೆ ಸರಕಾರ ಅಪಚಾರವೆಸಗಿದೆ. 7 ನೇ ಪಂಚವಾರ್ಷಿಕ ಯೋಜನೆಯಿಂದ 8 ನೇ ಪಂಚವಾರ್ಷಿಕ ಯೋಜನೆ ಮುಗಿಯುವ ಹಂತದಲ್ಲಿ ನಿರುದ್ಯೋಗ ಸಮಸ್ಯೆ ವಿಪರೀತವಾಗಿ ಏರಿದೆ. ಪಂಚವಾರ್ಷಿಕ ಯೋಜನೆ ಜಾರಿ ಮಾಡುವಾಗ ದೇಶದಲ್ಲಿ ಕೃಷಿ ಕೈಗಾರಿಕೆ ಬೆಳೆದು ನಿರುದ್ಯೋಗ ಸಮಸ್ಯೆ ಹೋಗಲಾಡಿಸಬಹುದು ಎಂಬ ಆಶಯ ಈಡೇರಿಲ್ಲ ಎಂದು ಪ.ಬಂಗಾಳದ ಕೈಗಾರಿಕಾ ಮತ್ತು ವಾಣಿಜ್ಯ ಸಚಿವರಾದ ಬಿದ್ಯುತ್ ಗಂಗೂಲಿ ಅವರು ಆಗಸ್ಟ 20ರಂದು ಎಸ್‌ಎಫ್‌ಐ ಹಾಗೂ ಡಿ.ವೈ.ಎಫ್.ಐ ರಾಜ್ಯ ಸಮಿತಿ ಸಂಘಟಿಸಿದ್ದ "ನಿರುದ್ಯೋಗ ಸಮಸ್ಯೆ ಮತ್ತು ಕರ್ನಾಟಕದ ಅಭಿವೃದ್ಧಿ ವಿಷಯದ" ಬಗ್ಗೆ ರಾಜ್ಯ ಸಮಾವೇಶವನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು. ನಗರದ ಸೆನೆಟ್ ಹಾಲ್‌ನಲ್ಲಿ ಈ ಸಮಾವೇಶ ನಡೆಯಿತು.

ಅವರು ಮುಂದುವರಿಯುತ್ತಾ ಸಮಾಜವಾದಿ ರಾಷ್ಟ್ರ ಮತ್ತು ಬಂಡವಾಳಶಾಹಿ ರಾಷ್ಟ್ರಗಳ ಬೆಳವಣಿಗೆಯ ತುಲನೆಯನ್ನು ಮಾಡಿದಾಗ ಸಮಾಜವಾದಿ ರಾಷ್ಟ್ರಗಳು ಅಲ್ಲಿನ ನೀರುದ್ಯೋಗ ಸಮಸ್ಯೆಯನ್ನು, ಅನಕ್ಷರತೆಯನ್ನು ಅನಾರೋಗ್ಯವನ್ನು ಹೋಗಲಾಡಿಸಿ ಅಭಿವೃದ್ಧಿ ಸಾಧಿಸುವಲ್ಲಿ ಸಮಾಜವಾದ ಉತ್ತಮ ವ್ಯವಸ್ಥೆ ಎಂದು ಸಾಧಿಸಿ ತೋರಿಸಿದ್ದಾರೆ. ಬಡತನ, ನಿರುದ್ಯೋಗ ಅನಕ್ಷರತೆ, ಅನಾರೋಗ್ಯ ಬಹುಸಂಖ್ಯಾತ ಜನರು ಹೀನಸ್ಥಿತಿಯಲ್ಲಿರುವ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ನಿರುದ್ಯೋಗ ಸಮಸ್ಯೆ ವಿಪರೀತವಾಗುತ್ತಿದೆ.

ಉದ್ಯೋಗ ಹೆಚ್ಚು ಮಾಡುತ್ತೇವೆ ಎಂಬ ಸರಕಾರ ನಿರ್ಗಮನ ನೀತಿಯಿಂದ ಈಗಾಗಲೇ 1 ಮಿಲಿಯಕ್ಕೂ ಹೆಚ್ಚಿನ ಉದ್ಯೋಗಸ್ತರನ್ನು ನಿರುದ್ಯೋಗರನ್ನಾಗಿಸಿದೆ. ಕೇವಲ ರಾಜ್ಯ ಸರಕಾರವೇ ಅಭಿವೃದ್ಧಿ ಮಾಡಲು ಸಾಧ್ಯವಿಲ್ಲ. ಯಾಕೆಂದರೆ ಕೇಂದ್ರಕ್ಕೆ ಹೆಚ್ಚಿನ ಜವಾಬ್ದಾರಿ ಇದೆ. ಆದುದರಿಂದ ಕೇಂದ್ರ ಸರಕಾರ ಮನಸ್ಸು ಮಾಡಿ ಪರ್ಯಾಯ ಯೋಜನೆಯನ್ನು ಜಾರಿಗೊಳಿಸಿ ದಿನೇ ದಿನೇ ಹೆಚ್ಚುತ್ತಿರುವ ಬಡತನ, ನಿರುದ್ಯೋಗ ಸಮಸ್ಯೆಗಳನ್ನು ಹೋಗಲಾಡಿಸಬಹುದು.

ಈ ಮಿತಿಯೊಳಗೂ 1977ರಲ್ಲಿ ಸಿಪಿಐ(ಎಂ)ನ ನೇತೃತ್ವದಲ್ಲಿ ಆಡಳಿತಕ್ಕೆ ಬಂದ ಪಶ್ಚಿಮ ಬಂಗಾಳದ ಎಡರಂಗ ಸರಕಾರ ದೇಶಕ್ಕೆ ಮಾದರಿಯಾಗುವ ರೀತಿಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಿದೆ. ಸಮಗ್ರ ಭೂಸುಧಾರಣೆಗಳ ಮುಖಾಂತರ ಗ್ರಾಮಂತರ ಮತ್ತು ನಗರ ಪ್ರದೇಶದ ಯುವಜನರಿಗೆ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ಪ್ರಯತ್ನಿಸಲಾಗಿದೆ ಎಂದರು. 1947ರಲ್ಲಿ ಸ್ವತಂತ್ರವಾದ ಭಾರತದೇಶ 1948ರಲ್ಲಿ ಸ್ವತಂತ್ರವಾದ ಚೀನಾ ದೇಶದೊಂದಿಗೆ ತುಲನೆ ಮಾಡಿ ಮಾತನಾಡಿದರು.

ನಮ್ಮ ದೇಶದಲ್ಲಿ ಮಾನಲ ಸಂಪನ್ಮೂಲವನ್ನು ಉಪಯೋಗಿಸುವ ಕೃಷಿ-ಕೈಗಾರಿಕಾ ರಂಗಗಳನ್ನು ವಿಸ್ತರಿಸುವುದರಿಂದ ವಿಜ್ಞಾನ-ತಂತ್ರಜ್ಞಾನ ಹೆಚ್ಚಾಗಿ ಪ್ರೋತ್ಸಾಹಿಸಿ ಬಡತನ-ನಿರುದ್ಯೋಗ ಕಡಿಮೆ ಮಾಡಬಹುದೆಂದು ಅವರು ಹೇಳಿದರು.

ಸಮಾವೇಶದ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷರಾದ ಎಚ್.ಎಸ್. ನಾಗಮೋಹನ ದಾಸ್‌ರವರು ವಹಿಸಿದ್ದರು. ವೇದಿಕೆಯಲ್ಲಿ ರಾಜ್ಯ ಕೃಷಿ ಕೂಲಿಕಾರ ಸಂಘದ ನಾಯಕರಾದ ಜಿ.ಎನ್.ನಾಗರಾಜ್, ಡಿ.ವೈ.ಎಫ್.ಐ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್, ಎಸ್.ಎಫ್.ಐ ರಾಜ್ಯ ಸಮಿತಿ ಕಾರ್ಯದರ್ಶಿ ಪ್ರಕಾಶ್, ಎಸ್.ಎಫ್.ಐ ರಾಜ್ಯ ಅಧ್ಯಕ್ಷರಾದ ಶಾಂತರಾಮ್ ನಾಯಕ್ ಉಪಸ್ಥಿತರಿದ್ದರು.

ಸಮಾವೇಶಕ್ಕೆ ಶುಭ ಕೋರಿ ಕರ್ನಾಟಕ ರಾಜ್ಯ ಸರಕಾರದ ಕೈಗಾರಿಕಾ ಮತ್ತು ವಾಣಿಜ್ಯ ಸಚಿವರಾದ ಆರ್.ವಿ. ದೇಶಪಾಂಡೆ ಸಂದೇಶವನ್ನು ಕಳುಹಿಸಿದ್ದರು.

ಪ್ರಾರಂಭದಲ್ಲಿ ಡಿ.ವೈ.ಎಫ್.ಐ. ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಗೋಪಾಲಕೃಷ್ಣ ಸ್ವಾಗತಿಸಿ, ಎಸ್.ಎಫ್.ಐ. ನ ಶಾಂತರಾಮ ನಾಯಕ್‌ರವರು ವಂದಿಸಿದರು.

ಡಿವೈಎಫ್‌ಐ ರಾಜ್ಯ ಸಮ್ಮೇಳನ ಸ್ವಾಗತ ಸಮಿತಿ ರಚನೆ

ಡಿವೈಎಫ್‌ಐನ 5ನೇ ರಾಜ್ಯ ಸಮ್ಮೇಳನದ ಸಿದ್ಧತೆಯಾಗಿ ಸ್ವಾಗತ ಸಮಿತಿಯನ್ನು ಮಂಗಳೂರಿನಲ್ಲಿ ಆಗಸ್ಟ್ 13ರಂದು ರಚಿಸಲಾಯಿತು.

ನಗರದ ಕಾರ್ನಾಡ್ ಸದಾಶಿವರಾಯರ ಸಭಾಂಗಣದಲ್ಲಿ ಸೇರಿದ್ದ ಸಭೆಯಲ್ಲಿ ವಿವಿಧ ವಿಭಾಗಗಳ ಗಣ್ಯರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಬಿ.ಮಾಧವರವರು ವಹಿಸಿದ್ದರು. ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಸ್ವಾಗತಿಸಿದರು.

ಡಿವೈಎಫ್‌ಐನ ಸಮ್ಮೇಳನದ ಮಹತ್ವ, ಕಳೆದ ನಾಲ್ಕು ವರ್ಷಗಳಲ್ಲಿನ ಚಟುವಟಿಕೆ, ಬೆಳವಣಿಗೆ, ಸಮ್ಮೇಳನದ ರೂಪು-ರೇಷಣೆಗಳ ಬಗ್ಗೆ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ ವಿವರಿಸಿದರು.

ಸಮ್ಮೇಳನದ ಯಶಸ್ವಿಗಾಗಿ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಖ್ಯಾತ ಸಾಹಿತಿ ಫಕೀರ್ ಮಹ್ಮದ್ ಕಟ್ಪಾಡಿ, ಕಾರ್ಯಾಧ್ಯಕ್ಷರಾಗಿ ಬಿ.ಮಾಧವ, ಪ್ರಧಾನ ಕಾರ್ಯದರ್ಶಿಯಾಗಿ ವಸಂತ ಆಚಾರಿ, ಖಜಾಂಚಿಯಾಗಿ ಕೃಷ್ಣಪ್ಪ ಕೊಂಚಾಡಿಯವರನ್ನು ಆಯ್ಕೆ ಮಾಡಲಾಗಿದೆ.

ರಾಜ್ಯ ಸಮ್ಮೇಳನ ಅಕ್ಟೋಬರ್ 14ರಿಂದ 16ರವರೆಗೆ ಜರುಗಲಿದೆ.

ಅರಣ್ಯ ಇಲಾಖೆ ಅಕ್ರಮ: ಸಿಬಿಐ ತನಿಖೆಗೆ ಆಗ್ರಹ

ಬಿಜಾಪುರ: ರಾಜ್ಯದ ಅರಣ್ಯ ಇಲಾಖೆ ಸಚಿವರಾದ ಹುಲ್ಲಪ್ಪ ಮೇಟಿ ಅವರು ಚುನಾಯಿತರಾಗಿರುವ ಬಾದಾಮಿ ತಾಲೂಕಿನ ಅನಂತಗಿರಿ ಬೆಟ್ಟದಲ್ಲಿ 600ರಿಂದ 700ರವರೆಗೆ ನೀಲಗಿರಿ ಮರಗಳನ್ನು ಅಕ್ರಮವಾಗಿ ಕಡಿದು ಹಾಕಲಾಗಿದ್ದು, ಅತ್ಯಂತ ಗಂಭೀರ ಸ್ವರೂಪದ ಈ ಪ್ರಕರಣದ ತನಿಖೆಯನ್ನು ಕೇಂದ್ರ ಸರಕಾರದ ಸಿಬಿಐ ಸಂಸ್ಥೆಗೇ ಒಪ್ಪಿಸುವಂತೆ ನೀಲಗುಂದದ ಶ್ರೀ ವೀರಮಂಹಂತೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಮುಖ್ಯಮಂತ್ರಿ ದೇವೇಗೌಡರನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಕಡಿದ ಮರಗಳ ಫೋಟೋ ಸಹಿತ ಸಲ್ಲಿಸಲಾದ ಮನವಿಯ ಪ್ರತಿಗಳನ್ನು ಇಲ್ಲಿಯ ಪತ್ರಕರ್ತರಿಗೆ ನೀಡಿರುವ ನೀಲಗುಂದ ಸ್ವಾಮಿಗಳು ಅದರಲ್ಲಿ 20 ವರ್ಷಗಳ ಹಿಂದೆಯೇ ನೆಡಲ್ಪಟ್ಟು ಪೂರ್ಣವಾಗಿ ಬೆಳೆದಿದ್ದ ಈ ಮರಗಳು ಲಕ್ಷಾಂತರ ರೂ. ಬೆಲೆ ಬಾಳುತ್ತಿದ್ದರೂ, ಬಾದಾಮಿಯ ಆರ್‌ಎಫ್‌ಓ ಅವರು ಈ ಮರಗಳ ಸಂಖ್ಯೆಯನ್ನು ಕೇವಲ 365 ಎಂದೂ, ಎಲ್ಲಾ ಗಿಡಗಳ ಒಟ್ಟು ಬೆಲೆ ಕೇವಲ ಹತ್ತಾರು ಸಾವಿರ ರೂ.ಗಳೆಂದೂ ಪತ್ರಿಕಾ ಹೇಳಿಕೆ ನೀಡಿರುವುದನ್ನು ಗಮನಿಸಿದರೆ ಹಾಗೂ ಇದುವರೆಗೂ ಮರಗಳ್ಳರನ್ನು ಹಿಡಿಯುವ ಪ್ರಯತ್ನವನ್ನು ನಡೆಸದಿರುವುದನ್ನು ನೋಡಿದರೆ ಇವರಲ್ಲಿ ಅಧಿಕಾರಿಗಳು ಮತ್ತು ಮರಗಳ್ಳರ ನಡುವೆ ಅನೈತಿಕ ಹೊಂದಾಣಿಕೆ ಇರುವುದು ಸ್ಪಷ್ಟವಾಗಿ ಕಾಣುತ್ತದೆ. ಆದ್ದರಿಂದ ಇದನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

ಇದೇ ತಾಲೂಕನ್ನು ಪ್ರತಿನಿಧಿಸುವ ಅರಣ್ಯ ಸಚಿವರು ಒಂದು ಸಲವೂ ಇಲ್ಲಿಗೆ ಭೇಟಿ ಕೊಡದಿರುವುದನ್ನು ನೋಡಿದರೆ ಸಚಿವರಿಗೂ ಈ ಘಟನೆಯ ತನಿಖೆಯಾಗುವುದು ಬೇಕಿಲ್ಲವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ರಾಜ್ಯ ಸರಕಾರದಿಂದ ತನಿಖೆ ನಡೆದರೆ ಸಚಿವರು ಪ್ರಭಾವ ಬೀರುವ ಸಾಧ್ಯತೆ ಇರುವುದರಿಂದ ಈ ತನಿಖೆಯನ್ನು ಸಿಬಿಐಗೆ ಒಪ್ಪಿಸಿದರೆ ಸಂದೇಹಕ್ಕೆ ಆಸ್ಪದ ಇರುವುದಿಲ್ಲವೆಂದು ಸ್ವಾಮಿಗಳು ಅಭಿಪ್ರಾಯಪಟ್ಟಿದ್ದಾರೆ.

ಐವರು ದಿನಗೂಲಿಗಳ ನಿಗೂಢ ಸಾವು: ಇದೇ ಅರಣ್ಯ ಇಲಾಖೆಗೆ ಸೇರಿದ ಗದಗ-ಬಿಂಕದಕಟ್ಟೆಯಲ್ಲಿಯ ಪ್ರಾಣಿ ಸಂಗ್ರಹಾಲಯದಲ್ಲಿ ಒಬ್ಬ ಮಹಿಳೆಯರೂ ಸೇರಿದಂತೆ ಐವರು ದಿನಗೂಲಿ ನೌಕರರ ನಿಗೂಡ ಸಾವು ಸಂಭವಿಸಿದ್ದು ಇದರಲ್ಲಿ ಒಂದು ಪ್ರಕರಣವನ್ನು ಈಗಾಗಲೇ ಸಿಓಡಿ ತನಿಖೆಗೆ ಒಪ್ಪಿಸಲಾಗಿದೆ. ಈ ಎಲ್ಲಾ ಪ್ರಕರಣಗಳನ್ನು ಸ್ವಯಂಪ್ರೇರಿತ ಆತ್ಮಹತ್ಯಾ ಪ್ರಕರಣಗಳೆಂದು ಪರಿಗಣಿಸಿ ಮುಚ್ಚಿಹಾಕಲಾಗಿರುವುದನ್ನು ನೋಡಿದರೆ ಇದರಲ್ಲಿ ಅರಣ್ಯ ಮತ್ತು ಪೋಲೀಸ್ ಇಲಾಖೆಗಳೆರಡೂ ಶಾಮೀಲಾಗಿರುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ. ಅದರಲ್ಲಿಯೂ ಈಗಿನ ಡಿಎಫ್‌ಓ ಅವರೂ ಅರಣ್ಯ ಸಚಿವರ ಸಂಬಂಧಿಕರೇ ಆಗಿರುವುದರಿಂದ ರಾಜ್ಯ ಸರಕಾರದ ಯಾವುದೇ ಇಲಾಖೆಯಿಂದ ತನಿಖೆ ನಡೆದರೂ ಅದು ಶಂಕಾತೀತವಾಗಿರಲು ಸಾದ್ಯವಿಲ್ಲವೆಂದ ಅವರು ಇದನ್ನು ಸಿಬಿಐ ತನಿಖೆಯೇ ಸೂಕ್ತವಾಗುತ್ತದೆ ಎಂದು ಹೇಳಿದ್ದಾರೆ.

ಬೀಡಿ ಕಾರ್ಮಿಕರ ಸಮಾವೇಶ

ಕುಂದಾಪುರ: ಆಗಸ್ಟ್ 13ರಂದು ಬೀಡಿ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲಿ ತಾಲೂಕು ಮಟ್ಟದ ಸಮಾವೇಶ ನಡೆಯಿತು. ಸಮಾವೇಶದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕೆ.ಶಂಕರ್‌ರವರು ವಹಿಸಿದ್ದರು. ಕಾರ್ಯದರ್ಶಿಯವರಾದ ಮಹಾಬಲ ಒಡೇರಹೋಬಳಿಯವರು ಸ್ವಾಗತಿಸಿ ಬೀಡಿ ಕಾರ್ಮಿಕರ ಸಮಸ್ಯೆ ಹಾಗೂ ಸರಕಾರ ಇತ್ತೀಚೆಗೆ ಪ್ರಕಟಪಡಿಸಿದ ಕರಡು ಕನಿಷ್ಟ ಕೂಲಿಯ ಸೂಚನೆಯ ಕುರಿತು ವಿವರಿಸಿ, ಕನಿಷ್ಟ ಕೂಲಿಯ ಅಂತಿಮ ಪ್ರಕಟಣೆಯನ್ನು ಸರಕಾರ ತುರ್ತಾಗಿ ಪ್ರಕಟಿಸಲು ಒತ್ತಾಯಿಸಿದರು.

ಬೀಡಿ ಕಾರ್ಮಿಕರ ಸಮಾವೇಶವನ್ನು ಉದ್ದೇಶಿಸಿ ಸಿಐಟಿಯು ಮುಖಂಡರಾದ ಸಿ.ನಾರಾಯಣ, ಮತ್ತು ವಿ.ನರಸಿಂಹರವರು ಮಾತನಾಡಿ ಸಂಘಟನೆಯನ್ನು ವಿಸ್ತರಿಸಿ ಬೆಳೆಸಲು ಸಲಹೆ ನೀಡಿ ಶುಭ ಹಾರೈಸಿದರು. ರೈತ ಸಂಘದ ತಾಲೂಕು ಕಾರ್ಯದರ್ಶಿಯವರಾದ ಯು.ದಾಸಭಂಡಾರಿಯವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮೂಡಬಿದ್ರಿ: ಆಗಸ್ಟ್ 20ರಂದು ಮೂಡಬಿದ್ರಿ ಪ್ರದೇಶ ಬೀಡಿ ಕೆಲಸಗಾರರ ಸಂಘದ ವತಿಯಿಂದ ಬೀಡಿ ಕಾರ್ಮಿಕರ ಸಮಾವೇಶವು ಜರುಗಿತು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಯು.ಬಿ.ಲೋಕಯ್ಯನವರು ವಹಿಸಿದ್ದರು. ಸಂಘದ ಕಾರ್ಯದರ್ಶಿ ರಮಣಿಯವರು ಸ್ವಾಗತಿಸಿದರು. ಯು.ಬಿ.ಲೋಕಯ್ಯನವರು ಮಾತನಾಡುತ್ತಾ ಕಾರ್ಮಿಕರ ಹೋರಾಟಕ್ಕೆ ಮಣಿದು ಸರಕಾರ ಬೀಡಿ ಕಾರ್ಮಿಕರಿಗೆ ಕನಿಷ್ಟ ಕೂಲಿ ರೂ. 36.85ನ್ನು ಕರಡು ಪ್ರಕಟಣೆ ಹೊರಡಿಸಿ 4 ತಿಂಗಳಾದರೂ ಅದನ್ನು ಅಂತಿಮ ಪ್ರಕಟಣೆ ಮಾಡಿಲ್ಲ. ಈ ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಹಾಗೂ ಕನಿಷ್ಟ ಕೂಲಿ ಅಂತಿಮ ಪ್ರಕಟಣೆಗಾಗಿ ತೀವ್ರ ಚಳುವಳಿ ನಡೆಸಬೇಕೆಂದೂ ಕರೆ ನೀಡಿದರು.

ನಾಗರಿಕ ಸೌಲಭ್ಯಕ್ಕೆ ಆಗ್ರಹಿಸಿ ಹೋರಾಟ

ತುಮಕೂರು: ನಗರದ 4 ಮತ್ತು 5 ನೇ ಡಿವಿಜನ್‌ನಲ್ಲಿ ನಜರಾಬಾದ್, ವೀರಸಾಗರ, ಈದ್ಗಾ ಮೊಹಲ್ಲ, ವಿಜಯನಗರ ಕಾಲೋನಿಗಳಲ್ಲಿ ಕನಿಷ್ಠ ನಾಗರಿಕ ಸೌಲಭ್ಯಗಳಾದ ರಸ್ತೆ ದುರಸ್ತಿ ಬೀದಿ ದೀಪ, ಕೆಟ್ಟಿರುವ ಕೈ ಪಂಪುಗಳನ್ನು ಸರಿಪಡಿಸಲು ಒತ್ತಾಯಿಸಿ ಸಿಪಿಐ(ಎಂ) ನ ನೇತೃತ್ವದಲ್ಲಿ ಆಗಸ್ಟ್ 14 ರಂದು ನಗರದ ಪುರಭವನ ವೃತ್ತದಿಂದ ಮೆರವಣಿಗೆಯಲ್ಲಿ ಹೊರಟು ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಸುಮಾರು 3000 ಸಹಿವುಳ್ಳ ಮನವಿ ಪತ್ರವನ್ನು ಅರ್ಪಿಸಿ, ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆಗೆ ಆಗಮಿಸುವಂತೆ ಒತ್ತಾಯಿಸಲಾಯಿತು. ಈ ಮೆರವಣಿಗೆಯ ನೇತೃತ್ವವನ್ನು ಸಿಐಟಿಯುನ ಕಾಂ. ಮಹಮದ್ ದಸ್ತಗಿರ್, ಕಾಂ. ಹಯಾತ್, ಕಾಂ. ಸೈಯದ್ ಯಾಸಿನ್, ಕಾಂ.ರಾಬಿಯಾಬಿ, ಕಾಂ. ಕತೀಜ್, ಹನುಮಂತರಾಯ, ಸೈಯದ್ ಮುಜೀಬ್ ಇವರುಗಳು ವಹಿಸಿದ್ದರು.

ಮನವಿ.ಪತ್ರವನ್ನು ಸ್ವೀಕರಿಸಿದ ಜಿಲ್ಲಾಧಿಕಾರಿಗಳಾದ ಎಸ್.ಸುಜಾತರವರು ತಾವು ಸಮಸ್ಯೆಯನ್ನು ಬಗೆ ಹರಿಸಲು ಅಧಿಕಾರಿಗಳಿಗೆ ಸ್ಥಳ ಪರಿಶೀಲಿಸಲು ವ್ಯವಸ್ಥೆಗೊಳಿಸುವುದಾಗಿ ತಿಳಿಸಿದರು.

ಗ್ರಾಮ ಪಂಚಾಯಿತಿ ನೌಕರರ ಸಭೆ

ಆಗಸ್ಟ್ 13ರಂದು ವಿಜಾಪುರದ ರೈತ ಸಂಘದ ಕಾರ್ಯಾಲಯದಲ್ಲಿ ಕಾಂ. ಭೀಮಶಿ ಕಲಾದಗಿಯವರ ಅಧ್ಯಕ್ಷತೆಯಲ್ಲಿ ಗ್ರಾಮ ಪಂಚಾಯಿತಿ ಎಂಪ್ಲಾಯಿಸ್ ಯೂನಿಯನ್ ಜಿಲ್ಲಾ ಸಮಿತಿ ಸಭೆ ನಡೆಸಲಾಯಿತು. ರಾಜ್ಯ ಕಾರ್ಯದರ್ಶಿಗಳಾದ ಕಾಂ. ಎನ್.ಕೆ.ಉಪಾಧ್ಯಾಯ, ಅಣ್ಣಾರಾಯ ಈಳಗೇರ ಅವರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ಗ್ರಾಮ ಪಂಚಾಯತ್ ಎಂಪ್ಲಾಯಿಸ್ ಯೂನಿಯನ್‌ನ ರಾಜ್ಯ ಮಟ್ಟದ ಸಮ್ಮೇಳನ ನಡೆಯುವ ಹನ್ನೆಲೆಯಲ್ಲಿ ಪೂರ್ವಭಾವಿಯಾಗಿ ವಿಜಾಪು ಜಿಲ್ಲಾ ಸಮ್ಮೇಳನವನ್ನು ಹಾಗೂ ತಾಲ್ಲೂಕಾ ಸಮ್ಮೇಳನಗಳನ್ನು ನಡೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. ಅಲ್ಲದೇ ಈ ಸಮ್ಮೇಳನವನ್ನು ಯಶಸ್ವಿಗೊಳಿಸಲು ಸಭೆಯು ಗ್ರಾಮ ಪಂಚಾಯಿತ್ ನೌಕರರಲ್ಲಿ ವಿನಂತಿಸಿಕೊಳ್ಳಲಾಯಿತು.

ಸೆಪ್ಟಂಬರ್ 6 ರಂದು ಸಿಂದಗಿ ತಾಲ್ಲೂಕಿನಿಂದ ಪ್ರಾರಂಭವಾಗುವ ತಾಲ್ಲೂಕಾ ಸಮ್ಮೇಳನಗಳು ಸೆಪ್ಟಂಬರ್ 25 ರಂದು ವಿಜಾಪುರ ಸಮ್ಮೇಳನದೊಂದಿಗೆ ಮುಕ್ತಾಯವಾಗುವುದು.

ಶಾಂತಿ ಸುವ್ಯವಸ್ಥೆ ಕಾಯ್ದುಕೊಳ್ಳಲು ಸಿಪಿಐ(ಎಂ) ಮನವಿ

ರಾಮದುರ್ಗ: ಜಿಲ್ಲಾ ಕೇಂದ್ರ ಬೆಳಗಾವಿಯಲ್ಲಿ ಪ್ರತಿ ವರ್ಷ ಗಣೇಶೋತ್ಸವ ಅದ್ದೂರಿಯಿಂದ ಆಚರಿಸಲಾಗುತ್ತಿದೆ. ಇತ್ತೀಚಿನ ಕೆಲ ವರ್ಷಗಳಲ್ಲಿ ಗಣೇಶ ಉತ್ಸವದ ಮೆರವಣಿಗೆ ಸಂದರ್ಭದಲ್ಲಿ ಗಲಭೆಗಳುಂಟಾಗಿ ಸಾವು-ನೋವು ಸಂಭವಿಸಿದ್ದುಂಟು.

ನಗರದಲ್ಲಿ ಶಾಂತಿ ಸುವ್ಯವಸ್ಥೆ ಹಾಗೂ ನೆಮ್ಮದಿ ವಾತಾವರಣ ಮೂಡಲು ಗಣೇಶ ವಿಸರ್ಜನೆ ಮಾರ್ಗ ಬದಲಾವಣೆಗೆ ಜಿಲ್ಲಾ ಆಡಳಿತ ಸೂಚಿಸಿದ್ದಕ್ಕೆ ಕೆಲವರು ವಿರೋಧಿಸಿದ್ದಕ್ಕೆ ಸಿಪಿಐ(ಎಂ) ಆತಂಕ ವ್ಯಕ್ತಪಡಿಸಿದೆ.

ಕಾನೂನು ಸುವ್ಯವಸ್ಥೆಗೆ ಮಾರ್ಗ ಬದಲಾವಣೆಯೊಂದೇ ಪರಿಹಾರವಲ್ಲದಿದ್ದರೂ ಸಂಭವನೀಯ ಗಲಭೆಗಳ ಬಗ್ಗೆ ಕಾಳಜಿಯಿಂದ ಇರುವುದು ಸೂಕ್ತವಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಶಾಂತಿ ಸಭೆಯಲ್ಲಿ ಪರ-ವಿರೋಧ ಅಭಿಪ್ರಾಯಗಳು ವ್ಯಕ್ತವಾಗಿತ್ತು.

ಯಾವುದೇ ಸ್ವಪ್ರತಿಷ್ಠೆಗೆ ಎಡೆ ಮಾಡಿಕೊಡದೇ ಜಿಲ್ಲಾ ಆಡಳಿತದ ಸದುದ್ದೇಶದ ಸಲಹೆಗೆ ಮನ್ನಣೆ ಕೊಟ್ಟು ಸಹಕರಿಸಿ ಹೊಸ ಮಾರ್ಗದಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ನಡೆಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮುಖಂಡ ವಿ.ಪಿ. ಕುಲಕರ್ಣಿ ಈ ಸಂದರ್ಭದಲ್ಲಿ ಮನವಿ ಮಾಡಿದ್ದಾರೆ.

ಕಾವೇರಿ ನೀರಿನ ವಿವಾದದ ಕುರಿತು ವಿನಾಕಾರಣ ಗೊಂದಲ

-ಎನ್.ಕೆ. ಉಪಾಧ್ಯಾಯ

> ಅಧಿಕಾರದಲ್ಲಿರುವಾಗ ತಾನೇ ಟ್ರಿಬ್ಯೂನಲ್ಲಿಗೆ ಮಾಡಿದ ಸೂಚನೆಗಳನ್ನು ಮತ್ತು ಸಲಹೆಗಳನ್ನು ತಾನೇ ತಿರಸ್ಕರಿಸಿ ರಾಜಕೀಯ ಲಾಭಕ್ಕಾಗಿ ಕಾಂಗ್ರೆ ಪಕ್ಷವು ತನ್ನ ರಾಜಕೀಯ ದಿವಾಳಿ ಕೋರತನವನ್ನು ಪ್ರದರ್ಶಿಸಿದೆ. ಅದೇ ಸಂದರ್ಭದಲ್ಲಿ ತಾನು ಅಖಂಡ ಭಾರತದ ಕನಸನ್ನು ಕಾಣುತ್ತಿರುವ ಮತ್ತು ತನ್ನಿಂದ ಮಾತ್ರವೇ ಈ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಲು ಸಾಧ್ಯವೆಂದು ಹೇಳುತ್ತಿರುವ ಬಿಜೆಪಿ ಒಂದು ರಾಜ್ಯದ ಜನತೆಯ ವಿರುದ್ಧ ಇನ್ನೊಂದು ರಾಜ್ಯದ ಜನತೆಯನ್ನು ಎತ್ತಿಕಟ್ಟಿ ತನ್ನ ರಾಜಕೀಯವನ್ನು ಬೆಳೆಸಿಕೊಳ್ಳಲು ಪ್ರಯತ್ನಮಾಡುತ್ತಿದೆ.

ಮುಖ್ಯ ಮಂತ್ರಿ ದೇವೇಗೌಡರು ವಿರೋಧಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ 5 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡಿದ್ದರ ವಿರುದ್ಧ ಕಳೆದ ಹತ್ತು-ಹನ್ನೇರಡು ದಿವಸಗಳಿಂದ ಕಾಂಗ್ರೆ, ಬಿಜೆಪಿ, ವಾಟಾಳ ನಾಗರಾಜ ಪಕ್ಷ ಮೊದಲಾದ ರಾಜಕೀಯ ಪಕ್ಷಗಳು, ಇತರ ಸಂಘಟನೆಗಳು ಮಂಡ್ಯ, ಹಾಸನ, ಮೈಸೂರು,ತುಮಕೂರು,ಬೆಂಗಳೂರು ಮೊದಲಾದಕಡೆಗಳಲ್ಲಿ ಧರಣಿ, ಪಿಕೆಟಿಂಗ್, ಬಂದ್ ಮೊದಲಾದ ಚಳುವಳಗಳನ್ನು ನಡೆಸುತ್ತಿವೆ. ಹಾಗೆಯೇ ಕಾಂಗ್ರೆ, ಬಿಜೆಪಿ, ವಾಟಾಳ ನಾಗಾರಾಜ್ ಅವರು ಅಸೆಂಬ್ಲಿ, ಪರಿಷತ್ತುಗಳೊಳಗೂ ಪ್ರತಿಭಟನೆಗಳ ಮೂಲಕ ಗೊಂದಲ ಉಂಟುಮಾಡಿ ಅವುಗಳು, ತಮ್ಮ ಕಾರ್ಯಕಲಾಪಗಳನ್ನು ನಡೆಸದಂತೆ ಅಡ್ಡಿ ಆತಂಕ ಒಡ್ಡುತ್ತಿದ್ದಾರೆ. ಆ ಮೂಲಕ ಸಾರ್ವಜನಿಕರಿಗೆ ತೊಂದರ ಉಂಟುಮಾಡುತ್ತಿರುವುದು ಮಾತ್ರವಲ್ಲ, ಅಸೆಂಬ್ಲಿ, ಪರಿಷತ್ತುಗಳ ಅಮೂಲ್ಯ ವೇಳೆಯನ್ನು ಹಾಳುಗೆಡವಿ, ಸರಕಾರದ ಲಕ್ಷಾಂತರ ರೂಪಾಯಿ ಹಣ ವಿನಾಕಾರಣವಾಗಿ ನಿಷ್ಫಲವಾಗುವಂತ ಮಾಡಿದ್ದಾರೆ. ಇದು ಅತ್ಯಂತ ಅಕ್ಷಮ್ಯ ಮತ್ತು ಖಂಡನೀಯ.


ದೇವೇಗೌಡ ಸರಕಾರ ಮತ್ತು ಜನತಾದಳ ರಾಷ್ಟ್ರೀಯರಂಗದ ರಾಜಕೀಯ ಲಾಭಕ್ಕಾಗಿ ತಮಿಳುನಾಡಿಗೆ ನೀರನ್ನು ಕೊಡಲು ಒಪ್ಪಿ ಕರ್ನಾಟಕ ರಾಜ್ಯದ ಜನತೆಗೆ ದ್ರೋಹ ಮಾಡಿದ್ದಾರೆಂದು ಆಪಾದಿಸಿ ವಿರೋಧ ಪಕ್ಷಗಳು ಚಳುವಳಿ ಹೂಡಲು ತೀರ್ಮಾನಿಸಿವೆ, ಮುಖ್ಯ ಮಂತ್ರಿ ದೇವೇಗೌಡರು ಕಾವೇರಿ ನೀರನ್ನು ತಮಿಳುನಾಡಿಗೆ ಬಿಡುವ ಮುನ್ನ ಎಲ್ಲಾ ರಾಜಕೀಯ ಪಕ್ಷಗಳನ್ನೂ ಮತ್ತು ಎರಡು ಸದನಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನೀರು ಬಿಡಬೇಕಾಗಿತ್ತು ಎಂಬವಾದ ಸರಿಯಾಗಿದ್ದರೂ ತಮಿಳುನಾಡಿಗೆ ನೀರೇ ಬಿಡಬಾರದಾಗಿತ್ತೆಂಬ ವಾದ ಸರಿಯಲ್ಲ. ಕಾವೇರಿ ನೀರಿನ ವಿವಾದವನ್ನು ಬಗೆಹರಿಸಲು ರಚಿಸಲಾಗಿರುವ ಟ್ರಿಬ್ಯೂನಲ್ ನೀಡಿರುವ ಮಧ್ಯಾಂತರ ತೀರ್ಪಿನನ್ವಯ ಮಳೆಯ ಅಭಾವದಿಂದಾಗಿ ಕಾವೇರಿಯಿಂದ ನೀರನ್ನು ಬಿಡಬೇಕಾಗಿರುವುದು ಕಷ್ಟಕರವಾಗಿದ್ದರೂ ಕೂಡ ಅನಿವಾರ್ಯವಾಗಿರುವುದು ವಾಸ್ತವವಾಗಿದೆ. ಮತ್ತು 1993 ಆಗಸ್ಟ್‌ನಲ್ಲಿ ಅಂದಿನ ವೀರಪ್ಪ ಮೊಯಿಲಿ ಸರಕಾರ ಕಾವೇರಿ ನ್ಯಾಯ ಮಂಡಳಿಗೆ ಕೊಟ್ಟಿರುವ "ಸಂಕಷ್ಟ ಪರಿಸ್ಥಿತಿಯ ಸೂತ್ರ"ದ ಪ್ರಕಾರ ನಮ್ಮ ಸರಕಾರ 16.8 ಟಿ.ಎಂ.ಸಿ ನೀರನ್ನು ಕೊಡಬೇಕಾಗಿರುವುದರಿಂದಲೂ ತಮಿಳನಾಡಿನ ಸರಕಾರ ಸರ್ವೋಚ್ಚ ನ್ಯಾಯಾಲಯದ ಮುಂದೆ ಕಾವೇರಿ ನೀರಿನಲ್ಲಿ ಕಾವೇರಿ ನ್ಯಾಯ ಮಂಡಳಿ ನೀಡುವ ಮಧ್ಯಂತರ ತೀರ್ಪನ್ನು ಜ್ಯಾರಿ ಮಾಡಬೇಕೆಂದು ಅರ್ಜಿಯನ್ನು ಹಾಕಿರುವ ಹಿನ್ನೆಲೆಯಲ್ಲಿ ತಮಿಳುನಾಡಿಗೆ ನೀರನ್ನು ಬಿಡುವುದು ಅನಿವಾರ್ಯವಾಗಿತ್ತು.

ಇಂತಹ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಎಲ್ಲಾ ಪಕ್ಷಗಳು ಮತ್ತು ಜನತೆ ದೇಶದ ಐಕ್ಯತೆಯ ದೃಷ್ಟಿಯಿಂದ ಮತ್ತು ರಾಜ್ಯದ ದೀರ್ಘಕಾಲದ ಹಿತದೃಷ್ಟಿಯ ಆಧಾರದ ಮೇಲೆ ತಾಳ್ಮೆಯಿಂದ ಸಮಸ್ಯೆಗೆ ಪರಿಹಾರವನ್ನು ಹುಡುಕಬೇಕಾಗಿರುವ, ಸಂದರ್ಭದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ನಮ್ಮರಾಜ್ಯದ ಪ್ರಮುಖ ವಿರೋಧ ಪಕ್ಷಗಳಾದ ಕಾಂಗ್ರೆ ಮತ್ತು ಬಿಜೆಪಿ ಗಳು ಮುಂದಿನ ಲೋಕಸಭಾ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯದ ಜನತೆಯ ಭಾವನೆಗಳನ್ನು ಕೆರಳಿಸಿ ರಾಜಕೀಯ ಲಾಭವನ್ನು ಪಡೆಯಲು ಪ್ರಯತ್ನಿಸುತ್ತಿರುವುದು ಖಂಡನೀಯವಾಗಿದೆಂದು ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಅಭಿಪ್ರಾಯಪಡುತ್ತದೆ. ಅಧಿಕಾರದಲ್ಲಿರುವಾಗ ತಾನೇ ಟ್ರಿಬ್ಯೂನಲ್ಲಿಗ ಮಾಡಿದ ಸೂಚನೆಗಳನ್ನು ಮತ್ತು ಸಲಹೆಗಳನ್ನು ತಾನೇ ತಿರಸ್ಕರಿಸಿ ರಾಜಕೀಯ ಲಾಭಕ್ಕಾಗಿ ಕಾಂಗ್ರೆ ಪಕ್ಷವು ತನ್ನ ರಾಜಕೀಯ ದಿವಾಳಿ ಕೋರತನವನ್ನು ಪ್ರದರ್ಶಿಸಿದೆ.

ಅದೇ ಸಂದರ್ಭದಲ್ಲಿ ತಾನು ಅಖಂಡ ಭಾರತದ ಕನಸನ್ನು ಕಾಣುತ್ತಿರುವ ಮತ್ತು ತನ್ನಿಂದ ಮಾತ್ರವೇ ಈ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಲು ಸಾಧ್ಯವೆಂದು ಹೇಳುತ್ತಿರುವ ಬಿಜೆಪಿ ಒಂದು ರಾಜ್ಯದ ಜನತೆಯ ವಿರುದ್ಧ ಇನ್ನೊಂದು ರಾಜ್ಯದ ಜನತೆಯನ್ನು ಎತ್ತಿಕಟ್ಟಿ ತನ್ನ ರಾಜಕೀಯವನ್ನು ಬೆಳೆಸಿಕೊಳ್ಳಲು ಪ್ರಯತ್ನಮಾಡುತ್ತಿರುವುದು ಖಂಡನೀಯವಾಗಿದೆ.

ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಜನತೆ ಸಂಯಮದಿಂದ ಆಲೋಚಿಸಿ ಯಾವುದೇ ರೀತಿಯ ರಾಜಕೀಯ ಕುತಂತ್ರಗಳಿಗೆ ಕಿವಿಗೊಡಬಾರದೆಂದೂ, ರಾಜ್ಯದ ನೀರಿನ ಪ್ರಶ್ನೆಯನ್ನು ಸೌಹಾರ್ದಯುತವಾಗಿ ಮಾತುಕತೆಯ ಮೂಲಕ ಬಗೆಹರಿಸಕೊಳ್ಳಬೇಕೆಂದೂ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಮನವಿ ಮಾಡಿಕೊಂಡಿತ್ತು. ತಮ್ಮ ರಾಜಕೀಯ ಬೆಳವಣಿಗೆಗೆ ರಾಜ್ಯದ ಜನತೆಯನ್ನು ಕಬಳಿಸುವ ಶಕ್ತಿಗಳ ವಿರುದ್ಧ ಎಚ್ಚರಿಕೆ

ವಿಧಾನಸಭೆಯಲ್ಲಿ ಕಾಂ. ಶ್ರೀರಾಮರೆಡ್ಡಿ



ಆಗಸ್ಟ್ 21ರಂದು ಕರ್ನಾಟಕದ ವಿಧಾನಸಭೆ ವಿರೋಧ ಪಕ್ಷದ ಮುಖಂಡನ ಸ್ಥಾನದಲ್ಲಿರುವ ಬಿಜೆಪಿಯ ಯಡಿಯೂರಪ್ಪನವರ ಹಕ್ಕುಚ್ಯುತಿ ನಿರ್ಣಯದ ಮೇಲೆ ಚರ್ಚೆ ನಡೆಯಿತು. ವಿಧಾನಸಭಾ ಕಲಾಪಗಳ ನಿಯಮ 191 ರ ಪ್ರಕಾರ ವಿಧಾನಸಭಾಧ್ಯಕ್ಷರಿಗೆ ನಾಲ್ಕು ಸೂಚನೆಗಳು ಬಂದಿದ್ದವು. ಇದರಲ್ಲಿ ಸಿಪಿಐ(ಎಂ)ನ ಜಿ.ವಿ. ಶ್ರೀರಾಮರೆಡ್ಡಿಯವರ ಸೂಚನೆ ಮೊದಲನೆಯದಾಗಿದ್ದರಿಂದ ಅವರೇ ಮೊದಲು ಈ ಬಗ್ಗೆ ಪ್ರಸ್ತಾಪ ಮಾಡುತ್ತಾ ಇದರಲ್ಲಿ ಮೂರು ಅಂಶಗಳಿವೆ. ಮೊದಲನೆಯದು ಸದನದ ಸಭಾಧ್ಯಕ್ಷರ ಸ್ಥಾನಕ್ಕೆ ಅಗೌರವ ತರುವ ವಿಷಯ. ಎರಡನೆಯದು ಈ ಸದನದಲ್ಲಿ ಕ್ರಿಮಿನಲ್ ಗಳನ್ನು ರಕ್ಷಣೆ ಮಾಡತಕ್ಕವರಿದ್ದಾರೆಂಬ ಆಪಾದನೆ ಹಾಗೂ ಮೂರನೇಯದು ಎರಡು ರಾಜಕೀಯ ಪಕ್ಷಗಳು ಸರಕಾರದೊಡನೆ ಶಾಮೀಲಾಗಿದ್ದಾರೆಂಬ ಅವರ ಆಪಾದನೆ.

ಯಡಿಯೂರಪ್ಪನವರ ಪತ್ರಿಕಾಗೋಷ್ಠಿಯ ವರದಿಗಳನ್ನು ಉಲ್ಲೇಖಿಸುತ್ತಾ ಕಾಂ. ಶ್ರೀರಾಮರೆಡ್ಡಿಯವರು ಈ ಮೂರು ಅಂಶಗಳನ್ನು ವಿವರಿಸಿದರು.

"ಇಡೀ ವಿರೋಧ ಪಕ್ಷಗಳು ಎಲ್ಲವನ್ನು ಕೂಡಾ ನಡೆಸಿಕೊಂಡು ಹೋಗುವುದಕ್ಕೆ ಜವಾಬ್ದಾರಿ ಇದ್ದಂತ ಮತ್ತು ಎಲ್ಲಾ ವಿರೋಧ ಪಕ್ಷಗಳನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರದ ವೈಫಲ್ಯಗಳನ್ನು ಟೀಕೆ ಮಾಡುವುದಕ್ಕೆ ಬಳಸಿಕೊಳ್ಳುವ ಬದಲು ತಮ್ಮ ಹಾಗೆ ಇರತಕ್ಕ ತಮ್ಮ ಸ್ಥಾನಮಾನಗಳನ್ನೇ ಹೊಂದಿರತಕ್ಕಂತಹ ಕೆಲವು ರಾಜಕೀಯ ಪಕ್ಷಗಳ ಬಗ್ಗೆ ಅದೂ ಸದನದಲ್ಲಿ ಆ ವಿಷಯ ಪ್ರಸ್ತಾಪ ಮಾಡಿ ಚರ್ಚೆಯಾಗಿ ಸದನ ಒಂದು ತೀರ್ಮಾನಕ್ಕೆ ಬಂದ ಮೇಲೆ ಸದನದ ಹೊರಗಡೆ ಆ ರಾಜಕೀಯ ಪಕ್ಷಗಳ ಬಗ್ಗೆ ಟೀಕೆ ಮಾಡತಕ್ಕಂತದ್ದು ಮತ್ತು ಆಡಿರತಕ್ಕ ಮಾತು ನಿಜವಾಗಿಯೂ ಕೂಡಾ ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಹಾರಗಳ ಇತಿಹಾಸದಲ್ಲಿ ಬಹುಶಃ ಮೊದಲು ಅಂತ ನನಗನ್ನಿಸುತ್ತದೆ........ ಪ್ರಜಾಪ್ರಭುತ್ವದಲ್ಲಿ ಸ್ವತಂತ್ರವಾಗಿ ಅವರದೇ ಆದಂಥ ಕಾರ್ಯಕ್ರಮಗಳ ಆಧಾರದ ಮೇಲೆ ಕೆಲಸ ಕಾರ್ಯ ನಿರ್ವಹಿಸತಕ್ಕ ಜವಾಬ್ದಾರಿ ಸ್ಥಾನದಲ್ಲಿರುವ ರಾಜಕೀಯ ಪಕ್ಷಗಳ ಬಗ್ಗೆ ಸದನದ ಒಳಗಡೆ ತೀರ್ಮಾನವಾಗಿರತಕ್ಕ ಸಂದರ್ಭದಲ್ಲಿ ಕೂಡಾ ಸದನದ ಹೊರಗಡೆ ಪ್ರಶ್ನೆ ಮಾಡಿರತಕ್ಕಂಥಾದ್ದು ಒಂದು ಕಡೆ ಸದನಕ್ಕೆ ಅವರು ಮಾಡಿರುವ ಅಗೌರವ, ಇನ್ನೊಂದು ಕಡೆ ಇಡೀ ಸಂಸದೀಯ ನಿಯಮಾವಳಿಗಳನ್ನು ಉಲ್ಲಂಘಿಸಿ ಪ್ರಜಾಪ್ರಭುತ್ವದ ಕನಿಷ್ಠ ನಿಯಮವನ್ನು ಕೂಡಾ ಪಾಲಿಸದೇ ಇರುವ ವರ್ತನೆ" ಎಂದು ಕಾಂ. ಶ್ರೀರಾಮರೆಡ್ಡಿ ಹೇಳಿದರು.

ಕಾಂಗ್ರೆಸ್(ಐ)ನ ಅಧಿಕಾರ ದಾಹದ ನಾಟಕ

ಕೊನೆಯ ಅಂಕ ಮೊದಲ ದೃಶ್ಯ?

ಆಕೆಗೆ ವ್ಯಥಿತಳಾಗುವ ಹಕ್ಕಿದೆ. ತನ್ನ ಕೊರಗನ್ನು ಆಕೆ ಕಳೆದವಾರ ಗಟ್ಟಿಯಾಗಿ ಹಾಗೂ ಸ್ಪಷ್ಟವಾಗಿ ಅಮೇಥಿ ಸಾರ್ವಜನಿಕ ಸಭೆಯಲ್ಲಿ ಹೇಳಿದ್ದಾಳೆ ಕೂಡಾ. ನೆಟ್ಟಗಿರುವ ಮಾನವ ಜೀವಿಗಳೆಲ್ಲಾ ಆಕೆಗೆ ತಮ್ಮ ಸಹಾನುಭೂತಿ ವ್ಯಕ್ತಪಡಿಸುವುದು ಖಂಡಿತ. ಆದರೆ ಆ ಕೊರಗಿನ ಅಭಿವ್ಯಕ್ತಿಯಲ್ಲಿ ರಾಜಕೀಯ ದನಿಗಳೂ ಸೇರಿದಾಗ ಮಾತ್ರ ಸಂಶಯವುಂಟಾಗುತ್ತದೆ. ಅಮೇಥಿಯಲ್ಲಿರುವ ಸಭಿಕರಿಗೆ ಆ ಮೂಲಕ ಇಡೀ ದೇಶಕ್ಕೆ ತಾನು ಆ "(ಮಹಾನ್) ಕುಟುಂಬ"ಕ್ಕೆ ಸೇರಿದವಳೆಂದು ನೆನಪಿಸಲು ಮರೆಯಲಿಲ್ಲ, ದೇಶದ ರಾಜಕೀಯ ರಂಗದಲ್ಲಿ ಸರ್ವವ್ಯಾಪಿಯಾಗಿರುವ ವಿಚ್ಛಿದ್ರಕಾರಿ ಪ್ರವೃತ್ತಿಗಳ ಬಗ್ಗೆ ನೆನಪಿಸಲೂ ಮರೆಯಲಿಲ್ಲ. ಇವೆಲ್ಲವನ್ನು ಸೇರಿಸಿ ನೋಡಿದಾಗ ಆಗ ಅಮೇಥಿಗೆ ಹೋದ ಉದ್ದೇಶ. ರಾಜೀವ್ ಗಾಂಧಿ ಕೊಲೆ ತನಿಖೆಯ ಪ್ರಗತಿ ಕುಂಠಿತವಾಗಿರುವ ಬಗ್ಗೆ ತನ್ನ ಬೇಸರವನ್ನು ವ್ಯಕ್ತಪಡಿಸಲು ಮಾತ್ರವೇ ಅಲ್ಲ, ಅದಕ್ಕಿಂತ ಹೆಚ್ಚಿನದೇನೋ ಇದೆ ಎಂಬುದು ಎದ್ದು ಕಾಣುತ್ತದೆ.

ಅಪರಾಧ ಮತ್ತು ಅದಕ್ಕೆ ಶಿಕ್ಷೆಯ ವಿಷಯದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಲವು ಮಿತಿಗಳಿವೆ. "ಕಾನೂನಿನ ಪ್ರಕ್ರಿಯೆಗಳು" ನಡೆಯದೆ ಅದು ಏನೂ ಮಾಡುವಂತಿಲ್ಲ. ಇಂದಿರಾಗಾಂಧಿ ಕೊಲೆಯ ಕೇಸಿನಲ್ಲೂ ಕೊಲೆಗಾರರು ಸ್ಥಳದಲ್ಲೇ ಸಿಕ್ಕಿಬಿದ್ದರೂ ಆ ಕೇಸನ್ನು ಕೊನೆಗೂ ಮುಕ್ತಾಯಗೊಳಿಸಲು ವರ್ಷಗಳು ಹಿಡಿದವು. ನ್ಯಾಯದಲ್ಲಿ ವಿಳಂಬವಾಯಿತು ಎಂದರೆ ಯಾವಾಗಲೂ ನ್ಯಾಯದ ನಿರಾಕರಣೆಯಾಗಿದೆ ಎಂದೇನೂ ಅರ್ಥವಲ್ಲ.

ಅದು ಸರಿ ಆದರೆ ತನಿಖೆಗೇ ಎತ್ತಿಕೊಳ್ಳ... ಕೇಸುಗಳ ಬಗ್ಗೆ ನೂರಾರು ಮಹಿಳೆಯರು ವಿಧವೆಯರಾದ, ಮಕ್ಕಳು ಅನಾಥರಾದ ಕೇಸು... ಬಗ್ಗೆ ಅವರು ಏನೆನ್ನುತ್ತಾರೆ? ಆಕೆ ಇಂದಿರಾ ಗಾಂಧಿಯವರ ಕೊಲೆಯ ನಂತರ ದಿಲ್ಲಿಯ... ಸಾವಿರಾರು ಮುಗ್ಧ ಸಿಖ್ಖರ ಕೊಲೆಗಳ ಬ... ನೆನಪಿಸಿದ್ದರೆ ಆಕೆಯ ನ್ಯಾಯದ ಕೂಗಿಗೆ ಹೆ... ಬೆಲೆ ಬರುತ್ತಿತ್ತು. ಅದು ಆ ಮಹಾನ್ "ಕುಟುಂಬ"ದ ದೊಡ್ಡತನಕ್ಕೂ ಪುರಾವೆಯಾ... ಗುತ್ತಿತ್ತು, ಆ ಕುಟುಂಬಕ್ಕೆ ಸೇರಿರುವ ಆಕೆ... ಹೆಮ್ಮೆಗೂ ಒಂದು ಸಮರ್ಥನೆ ಸಿಗುತ್ತಿತ್ತು. ಆದರೆ ಆ ಸಾವಿರಾರು ಮುಗ್ಧರ ಪ್ರಸ್ತಾ... ಕೂಡಾ ಬರಲಿಲ್ಲ.

ಹೀಗಿರುವಾಗ ಗೃಹ ಮಂತ್ರಿ ಎಸ್... ಚವ್ಹಾಣರು ರಾಜಕೀಯ ಆಟದ ತನ್ನ ಪ್ರ... ಸ್ಫೋಟದಲ್ಲಿ ಸರಕಾರ ಕೆಲವು "ವಿಶೇಷ" ದಾ... ದಸ್ತಾವೇಜುಗಳನ್ನು ಪ್ರಕಟಿಸಿಲ್ಲ. ಅವನ್ನು ಪ್ರ... ಟಿಸಿದರೆ ಒಂದು ಮಹಾನ್ "ಕುಟುಂಬ" ... ಪೇಚಿಗೆ ಸಿಲುಕಿಸಬಹುದು ಎಂದು ಪರೋ...

ಇತಿ...
ಅಮೇಥಿ...
ಪತ್ರಿಕೆ...
ಎಬ್ಬ...
ಸಮಿತಿ...

ನಾಬೇಕೆಂದು ರಾಜ್ಯದ ಜನತೆಯಲ್ಲಿ ಮನವಿ ಾಳ್ಳಲಾಗಿದೆ.

ೇರಿ ಜಲ ವಿವಾದದ ಹೆಸರಿನಲ್ಲಿ ಹಿಂದಿ ಈ ಸಲ ಕನ್ನಡ-ತಮಿಳು ಜನರ ಮಧ್ಯೆ ಕಾವೇರಿ ಜಲಾನಯನ ಪ್ರದೇಶದಲ್ಲೇ ಬೆಂಗಳೂರು ನಗರದಲ್ಲೇ ಆಗಲಿ ಸಾಮಾನ್ಯ ಾವನೆಗಳನ್ನು ಕೆರಳಿಸಿ ಹಿಂಸಾಕೃತ್ಯ ನಡೆಸು ್ರಚೋದನೆ ನೀಡುವಲ್ಲಿ ಕಾಂಗ್ರೆ, ಬಿಜೆಪಿ, ಪಕ್ಷ, ಕನ್ನಡ ಸಂಘಟನೆಗಳು ವಿಫಲಗೊಂ ು ಸ್ವಾಗತಾರ್ಹ. ಇಂತಹ ಕ್ಷುಲ್ಲಕ ಸಮಸ್ಯೆ ತು, ಅದರಲ್ಲೂ ತಮಿಳುನಾಡಿಗೆ ನೀರು ುರುದಿವಸದಿಂದ ಸತತವಾಗಿ ಬೀಳುತ್ತಿ ಳೆಯಿಂದಾಗಿ ಎಲ್ಲಾ ನದಿಗಳಲ್ಲಿ ನೀರು ಹರಿಯುತ್ತಿರುವಾಗ ಬರೇ ರಾಜಕೀಯ ೇಶದಿಂದ ಚಳುವಳಿ ಹೂಡುತ್ತಿರುವವರ ೇಶ ಜನರಿಗೆಲ್ಲ ಗೊತ್ತಾಗಿರುವುದರಿಂದಲೇ ಹೆಚ್ಚಾಗಿ ಈ ಚಳುವಳಿಯಲ್ಲಿ ಭಾಗವಹಿಸಿಲ್ಲ ಅಂಶ ಮಹತ್ವದ್ದಾಗಿದೆ.

ೀ ಆಗಲೀ ರೈತರ ಜೀವನಾಡಿಯಾದ ನೀರಿನ ಗೆ ಸಮರ್ಪಕ ಪರಿಹಾರ ಒದಗಿಸಿ ಕೊಡಲು ಸರಕಾರ ಹೆಚ್ಚು ಗಮನ ಕೊಡುವುದು . ಹಾಗೆಯೇ ಟ್ರಿಬ್ಯೂನಲ್ ಕೂಡ ವಿಚಾ ಲ್ಲಿಯೇ ಕಾಲಕಳೆಯದೇ ಕಾವೇರಿ ನೀರಿನ ಯ ಕುರಿತು ಆದಷ್ಟು ಬೇಗ ತೀರ್ಪು ನೀಡು ಅತ್ಯಗತ್ಯ. ಬಿಜೆಪಿ, ವಾಟಾಳ ಪಕ್ಷಗಳು ಂತೆ ಟ್ರಿಬ್ಯೂನಲನ್ನು ಬಹಿಷ್ಕರಿಸುವ ನಿಲು ್ನು ನಾವು ವಿರೋಧಿಸುತ್ತೇವೆ. ತೀರ್ವ ಒತ್ತಾಯಿಸುತ್ತೇವೆ, ಅದರ ಜೊತೆಯ ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳು ಮೂಲಕ ಸಮರ್ಪಕವಾದ ಪರಿಹಾರ ಕಂಡು ದು ಅತ್ಯುತ್ತಮವೆಂದು ಹೇಳಲಿಚ್ಛಿಸುತ್ತೇವೆ.

ೋನಿಯಾ ಗಾಂಧಿಯವರು ತನ್ನ ಕೊರಗು ವ್ಯಕ್ತಪಡಿಸಿದ್ದು ಲವು ಊಹಾಪೋಹಗಳನ್ನು ಬಗ್ಗೆ ಸಿಪಿಐ(ಎಂ) ಕೇಂದ್ರ ರಪತ್ರಿಕೆ 'ಪೀಪಲ್ಸ್ ಡೆಮಾ ಿ'ಯ ವ್ಯಂಗ್ಯ.

ಾಗಿ ಘೋಷಿಸಿದರು. ಇದೀಗ ನಿಜವಾ ಯೂ ಕಾಂಗ್ರೆಸ್(ಐ)! ಅಧಿಕಾರಗಳಿಸಲಾ ಿ, ಉಳಿಸಿಕೊಳ್ಳಲಾಗಲೀ ಅವರು ಆಡುವ ಟಗಳಿಗೆ ಇತಿಮಿತಿಯೇ ಇಲ್ಲ! ಈ ನಾಟ ದ ಪ್ರತಿಯೊಂದು ಅಂಕದ ಪ್ರತಿಯೊಂದು ಶ್ಯದಲ್ಲೂ ಅವರನ್ನು ನೀವು ಕಾಣಬಹುದು- ೋಫೋರ್ಸ್ ನಲ್ಲಿ ರಾಜೀವಗಾಂಧಿ, ಶೇರು ಾರುಕಟ್ಟೆಯಲ್ಲಿ ಶಂಕರಾನಂದ ಮತ್ತು ಕೂರ್, ಸಕ್ಕರೆಯಲ್ಲಿ ಕಲ್ಪನಾಥ್ ರಾಯ್, ್ವೆಯಲ್ಲಿ ಜಾಫರ್ ಶರೀಫ್, ಬೈಲಾದಿಲ್ಲಾ ಲ್ಲಿ ಸಂತೋಷ್ ಮೋಹನ್ ದೇಬ್ ಇತ್ಯಾದಿ ತ್ಯಾದಿ ಇತ್ಯಾದಿ. ಅಂಚಿನಲ್ಲಿ ಎಲ್ಲಾ ಬಣ್ಣಗಳ ಾಗಳು ಭಟ್ಟರು ತಮ್ಮ ಆತ್ಮಗೌರವವನ್ನು ರೆತು ಜೋಕುಗಳ ಪಾತ್ರ ಆಡುವುದನ್ನು ವು ಕಾಣಬಹುದು.

ಇದು ಇಂದಿನ ಕಾಂಗ್ರೆಸ್(ಐ). ಈಗ ಹಾಸನಕ್ಕೆ ತನ್ನ ಸುಳ್ಳು ದಾವೆ ಹಾಕುವ ೊಬ್ಬ ನಟ ರಂಗ ಪ್ರವೇಶಿಸುತ್ತಿರುವಂ . ನರಸಿಂಹರಾಯರ ಪರವಾಗಿ ಎಸ್.ಬಿ. ್ವಾಣ್ ರ ಪಿರಂಗಿಯಿಂದ ಮೊದಲ ಗುಂಡು ರಿದೆ. ಇದಕ್ಕೆ ಪ್ರತಿಯಾಗಿ ಮುಂದಿನ ಗುಂಡು ು ಎಂದು ಉಸಿರು ಬಿಗಿಹಿಡಿದು ಕಾಯ ಬೇಕಾಗಿದೆ.

ವಿದೇಶೀ ಕೊಳ್ಳೆಗಾರರಿಗೆ ದೇಶೀ ಹಕ್ಕುದಾರರು

ಇದು ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಒಂದು ತಂತ್ರ. ಉದಾರೀಕರಣದೊಂದಿಗೆ ಭಾರತಕ್ಕೆ ಬಹುದೊಡ್ಡ ಪ್ರಮಾಣದಲ್ಲಿ ಬರುತ್ತಿರುವ ಈ ತಂತ್ರ ದೇಶದ ಮೇಲೆ ಸಾಮ್ರಾಜ್ಯ ಶಾಹಿಗಳ ಹಿಡಿತ ಬಲಗೊಳ್ಳಲೂ ಸಹಾಯ ಮಾಡುತ್ತದೆ. ಇದು ಏನು?

ಸರಳವಾಗಿ ಹೇಳುವುದಾದರೆ, ಇದೊಂದು ವ್ಯಾಪಾರೀತಂತ್ರ. ಇಂಗ್ಲೀಷನಲ್ಲಿ 'ಫ್ರಾಂಚೈಸ್' ಎಂದು ಕರೆಯಲ್ಪಡುವ ಈ ತಂತ್ರದಲ್ಲಿ ವಿದೇಶೀ ಕಂಪನಿ ಭಾರತದೊಳಗೆ ತನ್ನ ಉತ್ಪನ್ನಗಳನ್ನು ಮಾರಲು ಹಕ್ಕುದಾರರನ್ನು ನೇಮಿಸುತ್ತದೆ. ಇಲ್ಲ ಈ ವಿದೇಶೀ ದೇಶೀಯ ಕಂಪನಿ ಅಥವಾ ಸಂಘಟನೆ ವಿದೇಸಿಯ ಏಜೆಂಟ್ ಆಗುವುದಿಲ್ಲ. ಆದರೆ ಇಲ್ಲಿ ಆ ಉತ್ಪನ್ನಗಳ ವ್ಯಾಪಾರ ಕುದುರಿಸುವ ಜವಾಬ್ದಾರಸ್ಥ ಸಂಸ್ಥೆಯಾಗುತ್ತದೆ. ವಾಸ್ತವದಲ್ಲಿ ದೇಶೀ ಪರಿಸ್ಥಿತಿಗಳನ್ನು ಅಭ್ಯಸಿಸಿ ವಿದೇಶೀ ಉತ್ಪನ್ನಗಳ ಮಾರಾಟ ಅಭಿವೃದ್ಧಿ ಮಾಡುವ ಸಂಸ್ಥೆ ಇದಾಗಿರುತ್ತದೆ. (ವಿದೇಶೀ ಕಂಪನಿಯ ಏಜೆಂಟ್ ತರಹವೇ)

ಈ ತಂತ್ರ ಅಳವಡಿಸಿ ವ್ಯಾಪಾರ ಅಭಿವೃದ್ಧಿಪಡಿಸುವಲ್ಲಿ ಅಮೇರಿಕನ್ನರು ಜಗತ್ತಿನಲ್ಲೇ ಮೊದಲಿಗರು. ಜಾಗತಿಕವಾಗಿ ಪ್ರಸಿದ್ಧವಾಗಿರುವ ಈ ಸಾಮ್ರಾಜ್ಯಶಾಹಿಗಳ ಕಂಪನಿಗಳು ಸಾಕಷ್ಟಿವೆ. ರುಲಾಕ್ಸ ಯೊಗರ್ಟ, ಕೆಂಟುಕಿ ಫ್ರಾಡ್ ಚಿಕನ್, ಪೊಟೋಕಾಡ್, ಮೊಟೊ ಫೊಟೊ, ರಾಕ್ಸ್, ಮೆಕ್‌ಡಾನಾಲ್ಡ್ ಇವು ಕೆಲವು ಪರಿಚಿತ ಉದಾಹರಣೆಗಳು.

ಇಲ್ಲಿ ದೇಶೀ ಸಂಸ್ಥೆಗಳಿಗೆ/ವ್ಯಕ್ತಿಗಳಿಗೆ ಅದೇ ಪ್ರಮಾಣದಲ್ಲಿ ಲಾಭ ದೊರೆಯುತ್ತದೆಂದೇನೂ ಇಲ್ಲ. ಅಮೇರಿಕನ್ ಕಂಪನಿಗಳಿಗೇ ಈ ಲಾಭದ ಬಹುಪಾಲು ಸರಿದು ಹೋಗುತ್ತದೆ. ಆದರೂ ಕೆಲವು ದೇಶೀ ಸಂಸ್ಥೆಗಳು/ವ್ಯಕ್ತಿಗಳನ್ನು ಅಲ್ಪ ಸ್ವಲ್ಪ ಹೆಚ್ಚಿನ ಲಾಭ ನೀಡಿ ಸಳೆದುಕೊಳ್ಳಲು ಇವು ರಾಜಕೀಯ ದಾಳಗಳನ್ನಾಗಿಯೂ ದೇಶೀ ಕಂಪನಿಗಳನ್ನು ಬಳಸಿಕೊಳ್ಳುತ್ತವೆ.

ಈ ಫ್ರಾಂಚೈಸ್ ವ್ಯವಸ್ಥೆ ಮುಂಬರುವ ದಿನಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ದೇಶದೊಳಗೆ ಬರಬಹುದು ಎಂಬುದು ಭಾರತ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯ ನಿಯತಕಾಲಿಕದಲ್ಲಿನ ಲೇಖನವೊಂದು ಅಂದಾಜು ಮಾಡಿದೆ.

ಕೆಂಟುಕಿಯ ಕರ್ಮಕಾಂಡ

ಕೆಂಟುಕಿ ಫ್ರಾಯ್ಡ್ ಚಿಕನ್(ಕೆಎಫ್ ಸಿ) ಬೆಂಗಳೂರಿನಲ್ಲೊಂದು ಅಂಗಡಿ ತೆರೆದದ್ದು ಈಗಾಗಲೇ ಎಲ್ಲರಿಗೂ ತಿಳಿದ ವಿಷಯ. ಈ ಕೆ.ಎಫ್.ಸಿ.ಯ ಕೋಳಿ ಮಾಂಸದಲ್ಲಿ ಹಾನಿಕಾರಕ ವಸ್ತುಗಳಿವೆ ಎಂಬ ಆರೋಪವನ್ನು ಕೆಲವು ಸ್ವಯಂಸೇವಕ ಸಂಘಗಳು ಮಾಡಿದ್ದವು. ಈ ಅಂಗಡಿಯ ವಿರುದ್ಧ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದವು.

ಬೆಂಗಳೂರು ಮಹಾನಗರ ಪಾಲಿಕೆ ಈ ಅಂಗಡಿಯಿಂದ ಸ್ಯಾಂಪಲ್ಲುಗಳನ್ನು ಸಂಗ್ರಹಿಸಿ ತಜ್ಞರಿಂದ ಅದನ್ನು ವಿಶ್ಲೇಷಣೆ ಮಾಡಿಸಿದಾಗ ಈ ಮಾಂಸದಲ್ಲಿ ಆರೋಗ್ಯಕ್ಕೆ ಹಾನಿಕಾರಕ ವಸ್ತುಗಳು ಇರುವುದು ಗೊತ್ತಾಯಿತು. ಮಹಾನಗರ ಪಾಲಿಕೆ ಕೆ.ಎಫ್.ಸಿ ಗೆ ನೋಟಿಸ್ ನೀಡಿತು.

ಆದರೆ ಕೆ.ಎಫ್.ಸಿ.ಯ ಪ್ರತಿಕ್ರಿಯೆ ಏನು ಗೊತ್ತೆ? ಈ ವಿಶ್ಲೇಷಣೆಯ ವರದಿಯ ಪ್ರತಿ ನಮಗೆ ದೊರೆತಿಲ್ಲ, ಅದು ದೊರೆತ ನಂತರ ನಮ್ಮ ತಜ್ಞರಿಂದ ಅಭಿಪ್ರಾಯ ಕೇಳುತ್ತೇವೆ, ಅಲ್ಲಿಯವರೆಗೆ ಸಮಯಾವಕಾಶ ಬೇಕು ಎಂದು. ಕೆ.ಎಫ್.ಸಿಯ ಪ್ರತಿಕ್ರಿಯೆಯ ಈ ದಾಟಿ ಗಮನಿಸಿದರೆ ಹಾನಿಕಾರಕ ವಸ್ತುಗಳು ಕೋಳಿ ಮಾಂಸದಲ್ಲಿದ್ದರೂ ನಾವು ಅಂಗಡಿ **ಮುಚ್ಚುವುದಿಲ್ಲ ಎಂಬ ಧೋರಣೆ ಇರುವಂ**ತಿದೆ.

ಹೇಗಿದೆ ಬಹುರಾಷ್ಟ್ರೀಯ ಕಂಪನಿಗಳ ದುರಹಂಕಾರ

ಹೆಬ್ಬಂಡೆಯಾಗುತ್ತಿರುವ ಆಮದು

ಆಮದು ಉದಾರೀಕರಣ ಮಾಡಿದರೆ ರಫ್ತು ಹೆಚ್ಚುತ್ತದೆಂದು ಆಮದನ್ನೂ ಉದಾರೀಕರಿಸಿದರು. 1995-96ರ ಸಾಲಿನ ಮೊದಲ ಮೂರು ತಿಂಗಳ ಆಮದನ್ನು ಗಮನಿಸಿದರೆ ಆಮದು ಸಿಕ್ಕಾಪಟ್ಟೆ ಹೆಚ್ಚಾಗಿರುವುದು ಕಂಡು ಬರುತ್ತದೆ. 1994-95ರ ಸಾಲಿನ ಮೊದಲ ಮೂರು ತಿಂಗಳ ಆಮದನ್ನು ತೆಗೆದುಕೊಂಡರೆ ಈ ಸಾಲಿನ ಆಮದು ಹೆಚ್ಚಳ ಶೇ38 ರಷ್ಟಾಗುತ್ತದೆ. ಇದು ನಿರೀಕ್ಷಿಸಿದ್ದಕ್ಕಿಂತ ಶೇ25 ರಷ್ಟು ಹೆಚ್ಚಾಗಿದೆ. ಆಮದು ಇದೇ ಗತಿಯಲ್ಲಿ ಮುಂದುವರಿದರೆ ವರ್ಷದ ಕೊನೆಯ ವೇಳೆಗೆ ವ್ಯಾಪಾರ ಕೊರತೆ ಐನೂರು ಕೋಟಿ ಅಮೇರಿಕನ್ ಡಾಲರಿನಷ್ಟಾಗುತ್ತದೆ. ನಿರೀಕ್ಷಿತ ಮಟ್ಟಕ್ಕಿಂತ ಇದು ಸುಮಾರು ನೂರು ಕೋಟಿ ಡಾಲರುಗಳಷ್ಟು ಹೆಚ್ಚಾಗುತ್ತದೆ.

ಹಾಗೇ ನಮ್ಮ ರಫ್ತು ಸಹ ಹೆಚ್ಚಾಗಿದೆ. ಆದರೆ ಈ ಹೆಚ್ಚಳ ಶೇ 28 ರಷ್ಟು ಮಾತ್ರ. ಇದು ಕಳೆದ ವರ್ಷದ ಶೇ 17 ರಷ್ಟಕ್ಕಿಂತ ಶೇ 11 ರಷ್ಟು ಹೆಚ್ಚು ನಿಜ. ಆದರೂ ಆಮದಿನ ಪ್ರಮಾಣಕ್ಕೆ ಸರಿಯಾಗಿ ರಫ್ತು ಬೆಳೆದಿಲ್ಲ. ಹೀಗಿರುವಾಗಿ ವ್ಯಾಪಾರ ಕೊರತೆ ಹೆಚ್ಚುತ್ತಾ ಹೋಗುವ ಸನ್ನಿವೇಶ ಉಂಟಾಗಿದೆ.

ಒಂದು ಅಧ್ಯಯನದ ಪ್ರಕಾರ ದೇಶದ ರಫ್ತಿನಲ್ಲಿ ಆಮದಿನ ಪ್ರಮಾಣ ಬಹಳ ಇದೆ. ಅಂದರೆ ರಫ್ತು ಮಾಡುವ ಉತ್ಪನ್ನಗಳನ್ನು ಉತ್ಪಾದಿಸಲು ಹೆಚ್ಚು ಹೆಚ್ಚು ಆಮದಾದ ಉತ್ಪನ್ನ, ತಂತ್ರಜ್ಞಾನ ಬಳಸಲಾಗುತ್ತಿದೆ ಎಂಬುದು ಸ್ಪಷ್ಟ.

ಉದಾರೀಕರಣ ಹೇಳುವ ದಿಸೆಯಲ್ಲೇ ದೇಶದ ಆರ್ಥಿಕ ಸಾಗುತ್ತಿದೆಯೆ?

ಹಣದುಬ್ಬರ ಸ್ಫೋಟ?

ಇಂತಹದೊಂದು 'ಪದ' ಇದೆಯೆ? ಹೀಗೆಂದರೆ ಏನು? ಒಮ್ಮೆಲೇ ಹಣದುಬ್ಬರ ಎಣಿಸಲಾರದಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆದರೆ ಅದನ್ನು ಹಣದುಬ್ಬರ ಸ್ಫೋಟ ಎನ್ನಬಹುದು. ಇದು ಅರ್ಥಶಾಸ್ತ್ರಜ್ಞರು ರೂಪಿಸಿದ ಪದ. ಸರಳವಾಗಿ ಹೇಳವುದಾದರೆ ಬೆಲೆಗಳು ಒಮ್ಮೆಲೇ ಗಗನಕ್ಕೆ ಏರಿ ಬಿಡುತ್ತವ (ಜನಸಾಮಾನ್ಯರ ಕಣ್ಣಿಗೂ ಕಾಣದಷ್ಟು ಮೇಲೆ). ಇರಲಿ

ದೇಶದ ಒಬ್ಬ ಬಹು ಮುಖ್ಯ ಬೂರ್ಜ್ವ ಅರ್ಥಶಾಸ್ತ್ರಜ್ಞ ಡಾ.ಪಿ.ಆರ್. ಬ್ರಹ್ಮಾನಂದ ಇಂತಹ ಎಚ್ಚರಿಕೆ ನೀಡಿದ್ದಾರೆ. ಸದ್ಯದಲ್ಲಿ ಇರುವ ಹಣಕಾಸಿನ ಸ್ಥಿತಿ ಹೀಗೇ ಮುಂದುವರಿದರೆ ಇಂತಹ ಹಣದುಬ್ಬರದ ಸ್ಫೋಟ ಆಗಬಹುದು ಎಂಬುದು ಅವರ ಎಚ್ಚರಿಕೆಯ ತಿರುಳು. ಇಂದಿನ ಪರಿಸ್ಥಿತಿ ನೋಡಿದರೆ ಕೇಂದ್ರದ ಅರ್ಥ ಮಂತ್ರಿ ಡಾ. ಮನಮೋಹನ ಸಿಂಗರ ಆಶಾವಾದದಲ್ಲಿ ಪಾಲ್ಗೊಳ್ಳುವುದು ಕಷ್ಟ ಎಂದಿರುವ ಅವರು ಇದೇ ಗತಿಯಲ್ಲಿ ಹಣದುಬ್ಬರ ಮುಂದುವರಿದರೆ ಅದು ಈ ವರ್ಷದ ಕೊನೆಯ ವೇಳೆಗೆ ಶೇ 15 ರಿಂದ 18 ಕ್ಕೆ ಏರಬಹುದು ಎಂದಿದ್ದಾರೆ.



ಭಾರತೀಯ ಆರೋಗ್ಯಕ್ಕೆ ಹೆಚ್ಚುತ್ತಿರುವ ಬಹುರಾಷ್ಟ್ರೀಯ ಕಂಪನಿಗಳ ಕೊಡುಗೆ

ಹೊಸ ಔಷಧ ನೀತಿ ಬಂದ ಮೇಲೆ ಬಹುರಾಷ್ಟ್ರೀಯ ಕಂಪನಿಗಳು ದೇಶದೊಳಗಿನ ಔಷಧಿ ವ್ಯಾಪಾರದಲ್ಲಿ ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ದೈತ ಬಹುರಾಷ್ಟ್ರೀಯ ಕಂಪನಿಗಳಾದ ಇ. ಮೆರ್ಕ ಬೂಹ್ರಿಂಗರ್ ಮ್ಯಾನ್‌ಹೀಮ್, ಪ್ರಾಕ್ಟರ್ ಅಂಡ್ ಗ್ಯಾಂಬಲ್ ಗ್ಲಾಕ್ಸೋ, ವ್ಯಾಬೊರೇ ರೀಸ್‌ಕಟ್ ಕೋಲ್ಮಾನ್ ಮತ್ತು ಹೆಕ್ಸ್ ಇವ ಗಳಲ್ಲಿ ತಮ್ಮ ಬಂಡವಾಳ ಹೆಚ್ಚಿಸಿ ಕೊಳ್ಳುತ್ತಿವೆ.

ಲಾಭವೇ ಮುಖ್ಯ ಗುರಿಯಾಗಿರುವ ಈ ಕಂಪನಿಗಳು ದೇಶದ ಜನರ ಆರೋಗ್ಯದ ಕಾಳಜಿಯನ್ನಂತೂ ಮಾಡಲಾರದು. ಹೀಗಿರುವಾಗ ಆರೋಗ್ಯ ರಕ್ಷಣೆಯ ಖರ್ಚು ಅಪಾರವಾಗಿ ಹೆಚ್ಚುತ್ತದೆ. ದೇಶದ ಜನರ ಅನಾರೋಗ್ಯಕ್ಕೆ ಈ ಬಹುರಾಷ್ಟ್ರೀಯ ಕಂಪನಿಗಳು ನೀಡುವ ಕೊಡುಗೆ ಇದು.

ಆರ್ಥಿಕ ಸುಧಾರಣೆಯ ದುಷ್ಫಲಗಳು

ದೇಶದ ಯೋಜನಾ ಆಯೋಗ ಪಂಚವಾರ್ಷಿಕ ಯೋಜನೆಯ ಮಧ್ಯಮಾವಧಿ ಅವಲೋಕನ/ವಿಶ್ಲೇಷಣೆ ಮಾಡಿ ವರದಿ ಸಲ್ಲಿಸುವುದು ಒಂದು ವಾಡಿಕೆ. ಇದರಂತೆ ಜುಲೈ 6.1995 ರಂದು ಯೋಜನಾ ಆಯೋಗದ ಉಪಾಧ್ಯಕ್ಷ ಪ್ರಣವ್ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಇದು ಈ ಮಧ್ಯಮಾವಧಿ ಅವಲೋಕನ ಮಾಡುವ ಸಲುವಾಗೇ ನಡೆಸಿದ್ದು. ಜುಲೈ 19 ರಂದು ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಯೋಜನಾ ಆಯೋಗ ಆಯೋಗದ ಪೂರ್ಣ ಪ್ರಮಾಣದ ಸಭೆ ನಡೆದು ಈ ಕರಡು ವರದಿಯನ್ನು ಅಂತಿಮಗೊಳಿಸಬೇಕಾಗಿತ್ತು. ಇದಾದ ನಂತರ ಈ ಅಂತಿಮ ವರದಿಯನ್ನು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಮಂಡಿಸಬೇಕಾಗಿತ್ತು.

ಆದರೆ ಈ ಕರಡು ವರದಿ ಜುಲೈ 6 ರಂದು ಸಭೆಯ ಮುಂದೆ ಹೋಗಲಿಲ್ಲ. ಯಾಕೆ? ಯಾಕೆಂದರೆ ಈ ಕರಡು ವರದಿಯಲ್ಲಿ ಆರ್ಥಿಕ ಸುಧಾರಣೆಯ ದುಷ್ಪರಿಣಾಮಗಳ ಬಗ್ಗೆ ಬಹಳ ಹೇಳಲಾಗಿತ್ತು. ಇದು ಪ್ರಧಾನ ಮಂತ್ರಿಗಳ ಕಛೇರಿಗೂ ಗೊತ್ತಾಯಿತು. ಹಾಗೆಯೆ ಯೋಜನಾ ಆಯೋಗದ ಉಪಾಧ್ಯಕ್ಷರು ಈ ವರದಿ ಹೀಗೇ ಹೋಗಲು ನಾನು ಬಿಡೆ. ಪ್ರತಿಯೊಂದು ಮಂತ್ರಾಲಯದಿಂದಲೂ ಈ ವರದಿಯ ಬಗ್ಗೆ ಅಭಿಪ್ರಾಯ ಪಡೆದ ನಂತರವೇ ಇದನ್ನು ಅಂತಿಮಗೊಳಿಸುವುದು ಎಂದು ಆಜ್ಞೆ ಮಾಡಿದರು. ಆರ್ಥಿಕ ಸುಧಾರಣೆ ನಿಜವಾಗಿಯೂ ದೇಶಕ್ಕೆ ಸಮೃದ್ಧಿ ತರುತ್ತಿದ್ದರೆ ಪ್ರಧಾನ ಮಂತ್ರಿ ಯೋಜನಾ ಅಧ್ಯಕ್ಷ/ಉಪಾಧ್ಯಕ್ಷರುಗಳಿಗೆ ಈ ಅಳುಕೇಕೆ?

ಈ ಕರಡು ವರದಿ ಏನು ಹೇಳಿತ್ತು. ದೇಶದಲ್ಲಿನ ಕಳೆದ ನಾಲ್ಕು ವರ್ಷಗಳ ಆರ್ಥಿಕ ಸುಧಾರಣೆ ದೇಶಕ್ಕೆ ಬಹಳ ಒಳ್ಳೆಯದು ಮಾಡುತ್ತದೆ ಎಂದೆ? ಅದು ಹಾಗೇ ಹೇಳಿದ್ದರೆ ಸರ್ಕಾರ ಅದಕ್ಕೆ ಎಲ್ಲಿಲ್ಲದ ಪ್ರಚಾರ ನೀಡಬೇಕಾಗಿತ್ತಲ್ಲವೆ? ಸರ್ಕಾರ ಇದನ್ನು ಮುಚ್ಚಿಟ್ಟಿತು ಎಂದರೆ ಕರಡು ವರದಿ ಆರ್ಥಿಕ ಸುಧಾರಣೆಗಳ ಬಗ್ಗೆ ಬಹಳ ಕೆಟ್ಟದಾಗೇ ಹೇಳಿರಬೇಕು ಅಲ್ಲವೆ?

ಖಂಡಿತವಾಗಿಯೂ ಹೌದು. ಅದು ಆರ್ಥಿಕ ಸುಧಾರಣೆಗಳ ದುಷ್ಪರಿಣಾಮಗಳ ಬಗ್ಗೇ ಹೇಳಿದ್ದು. ಕೆಲವು ವಿಷಯಗಳು ಈಗಾಗಲೇ ಹೊರಬಿದ್ದಿವೆ. ಮುಂಬರುವ ದಿನಗಳಲ್ಲಿ ಇನ್ನೂ ಹಲವು ವಿಷಯಗಳು ಹೊರಬರುತ್ತವೆ.

ಉದಾರೀಕರಣದ ಆರ್ಥಿಕ ನೀತಿಗಳಿಂದಾಗಿ ದೇಶದೊಳಗೆ ಉದ್ಯೋಗ ಸೃಷ್ಟಿ ಬೆಳವಣಿಗೆ ಕಡಿಮೆಯಾಗಿದೆ ಎಂಬುದು ಮೊದಲನೇ ಮುಖ್ಯ ಅಂಶ. 1985-92ರ ಅವಧಿಗಿಂತ 1992-95 ರ ಅವಧಿಯಲ್ಲಿ ನಿರುದ್ಯೋಗ ಹೆಚ್ಚಾಗಿದೆ.

ಇದರ ಜೊತೆಗೇ ಸರ್ಕಾರ ಖರ್ಚು ಕಡಿಮೆ ಮಾಡುವ ಪ್ರಯತ್ನದಲ್ಲಿ ಸಾಮಾಜಿಕ ವಲಯಗಳಿಗೆ ಹಣ ಹರಿಯದಂತೆ ತಡೆದಿದೆ. ಆದ್ದರಿಂದ ದೇಶದ ಆರೋಗ್ಯ, ಶಿಕ್ಷಣ ಕೊನೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ಈ ವಲಯಗಳಿಗೆಲ್ಲ ಹಣದ ಖೋತಾ ಮಾಡಲಾಗಿದೆ ಜಾಗತಿಕವಾಗಿ ದೇಶ ಬಲಿಷ್ಠವಾಗಿ ಬೆಳೆಯಬೇಕಾಗಿರುವ ಈ ಸಂದರ್ಭದಲ್ಲಿ ದೇಶವನ್ನು ದುರ್ಬಲಗೊಳಿಸುವ ನೀತಿಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಈ ಕರಡು ವರದಿ ದೇಶದ 102 ಲಾಭಗಳಿಸುತ್ತಿರುವ ಸಾರ್ವಜನಿಕ ವಲಯದ ಘಟಕಗಳ ಮಾರಾಟವನ್ನು ವಿರೋಧಿಸಿದೆ. 1994-95 ರ ಸಾಲಿಗೆ ಈ ಘಟಕಗಳು 900 ಕೋಟಿ ರೂಪಾಯಿಗಳ ಲಾಭ ತೋರಿಸಿವೆ.

ಇನ್ನೊಂದು ಅಂಶ ವಿದ್ಯುತ್ ವಲಯದಲ್ಲಿ ಖಾಸಗಿ ಹೂಡಿಕೆ ನೀತಿ. ಹಾಗೆಯೇ ಒಳ್ಳೆಯ ತೈಲ ಬಾವಿಗಳನ್ನು ವಿದೇಶೀಯರಿಗೆ ಬಿಟ್ಟು ಕೊಡುವುದನ್ನು ಅದು ವಿರೋಧಿಸಿದೆ. ಇಲ್ಲಿ ತೈಲ ಶುದ್ಧೀಕರಣವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡುವ ಬದಲು ದೇಶದ ತೈಲ ಕಂಪನಿಗಳಿಗೇ ನೀಡಬೇಕು ಎನ್ನುತ್ತದೆ. ವಿದ್ಯುತ್ ವಲಯದಲ್ಲಿ ಪ್ರತಿಫಲದ ಭರವಸೆ ನೀಡುವ ಬದಲು ಖಾಸಗಿಯವರ ಉತ್ಪಾದನೆಯನ್ನು ದೊಡ್ಡ ಪ್ರಮಾಣದ ಬಳಕೆದಾರರಿಗೆ ಮಾರುವುದಕ್ಕೆ ಅನುವು ಮಾಡಿಕೊಡಬೇಕೆನ್ನುತ್ತದೆ.

ಹಣಕಾಸು ಖೋತಾವನ್ನು ಶೇ5.5ಕ್ಕೆ ಸೀಮಿತ ಗೊಳಿಸುತ್ತೇನೆನ್ನುವ ಸರ್ಕಾರದ ಹೇಳಿಕೆಯನ್ನು ಅದು ಟೀಕಿಸಿದೆ.

ಇದಲ್ಲದೆ ಈ ಕರಡು ವರದಿ ವಿದೇಶಿ ಸಾಲದ ಮೇಲಿನ ಬಡ್ಡಿಯ ಹೊರೆ ಭಾರವಾಗುವ ಬಗ್ಗೆ ಎಚ್ಚರಿಸುತ್ತದೆ. ಇದು ಎಷ್ಟು ದೊಡ್ಡ ಪ್ರಮಾಣದ್ದಾಗಿರುವುದೆಂದರೆ ನಮ್ಮ ಆದಾಯದ ಶೇ 52 ರಷ್ಟಾಗುತ್ತದೆ.!! ಇದರ ಜೊತೆಗೇ ನಮ್ಮ ವ್ಯಾಪಾರ ಬಾಕಿ ಹೆಚ್ಚುತ್ತದೆ ಮತ್ತೆ ದೇಶ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ದೊಡ್ಡ ಬಿಕ್ಕಟ್ಟಿಗೆ ಹೋಗುತ್ತದೆ.

ಹಣದುಬ್ಬರದ ಬಗ್ಗೆ ಹೇಳುತ್ತ ಈ ಕರಡು ವರದಿ 1991-95ರ ಅವಧಿಯ ಸರಾಸರಿ ಹಣದುಬ್ಬರ ಸುಧಾರಣಾ ಪೂರ್ವದ ಹಣದುಬ್ಬರಕ್ಕಿಂತ ಹೆಚ್ಚಾಗಿದೆ ಎಂದಿದೆ.

ಹೀಗೆ ಈ ಕರಡು ವರದಿ ಸರ್ಕಾರದ ಪ್ರತಿಯೊಂದು ಸಮರ್ಥನೆಯನ್ನು ಹೊಸಕಿ ಹಾಕಿದೆ. ಆದ್ದರಿಂದಲೇ ಅಲ್ಲವೇ ಸರ್ಕಾರ ಈ ಕರಡು ವರದಿಯನ್ನು ಮುಚ್ಚಿಟ್ಟಿರುವುದು.

ದೇಶದೊಳಗೆ



ವಿಶ್ವ

ಹರ್ಯಾಣ ಸರಕಾರದಿಂದ ರೈತರ ಹತ್ಯಾಕಾಂಡ

ಕಾಂಗ್ರೆಸ್(ಐ) ಸರಕಾರದ ಆರ್ಥಿಕ ಉದಾರೀಕರಣ ನೀತಿಯ ಫಲ ಏನೆಂಬುದು ಈಗ ಗೊತ್ತಾಗತೊಡಗಿದೆ. ಅಂತರ್ರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್.) ಹಾಗೂ ವಿಶ್ವಬ್ಯಾಂಕ್ ನಿರ್ದೇಶನದ ಪ್ರಕಾರ ನಡೆಯುವುದರಿಂದ ದೇಶ ಅನುಭವಿಸಬೇಕಾದ ಸಂಕಷ್ಟಗಳು ಅರಿವಾಗತೊಡಗಿದೆ.

ಹರ್ಯಾಣದಲ್ಲಿ ಆಗಸ್ಟ್ 23ರಂದು ಪೋಲೀಸರು ನಡೆಸಿದ ಹತ್ಯಾಕಾಂಡ ಕೇಂದ್ರ ಸರ್ಕಾರದ ನೀತಿಯ ಫಲಶ್ರುತಿಯಾಗಿದೆ. ಬಹರಾಯಿ ಕದ್ಮಾ ಗೋಪಾಲವಾಸ್ ಮತ್ತು ದಗ್ರೋಲಿ ಗ್ರಾಮಗಳ ನಿಶ್ಯಸ್ತ್ರ ರೈತರು ಪ್ರತಿಭಟನೆಯಲ್ಲಿ ತೊಡಗಿದ್ದಾಗ ಪೋಲೀಸರು ಹಾರಿಸಿದ ಗುಂಡಿಗೆ ಐದು ಜನರು ಬಲಿಯಾದರು. ಸುಮಾರು 200 ರೈತರು ಗಾಯಗೊಂಡರು.

ವಿದ್ಯುಚ್ಛಕ್ತಿ ದರವನ್ನು ಹಠಾತ್ತನೆ ಎರಡು ಪಟ್ಟು ಹೆಚ್ಚಿಸಿದ್ದು ಮತ್ತು ಭಿವಾನಿ ಪ್ರದೇಶದ 120 ಹಳ್ಳಿಗಳಿಗೆ ವಿದ್ಯುತ್ ಪೂರೈಸುವುದನ್ನು ನಿಲ್ಲಿಸುವ ಸರಕಾರದ ಕ್ರಮವನ್ನು ರೈತರು ವಿರೋಧಿಸುತ್ತಿದ್ದರು.

ವಿಶ್ವಬ್ಯಾಂಕ್-ಐಎಂಎಫ್ ಗಳನ್ನು ಸಂತೃಪ್ತಿಪಡಿಸಲು ಕೇಂದ್ರ ಹಾಗೂ ರಾಜ್ಯಗಳಲ್ಲಿರುವ ಭೂಮಾಲಿಕ ಸರಕಾರಗಳು ಮಾನವ ಹಕ್ಕುಗಳನ್ನು ಅಲಕ್ಷಿಸಿ ನಾಗರಿಕ ಜೀವನದಲ್ಲಿ ಗೊಂದಲವನ್ನು ಹುಟ್ಟಿಸಲು ಸಿದ್ಧವಾಗಿವೆ ಎಂಬುದಕ್ಕೆ ಹರ್ಯಾಣದ ಈ ಹೇಯ ಪ್ರಕರಣ ಸಾಕ್ಷಿಯಾಗಿದೆ.

ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ ಮತ್ತು ಅಖಿಲ ಭಾರತ ಕಿಸಾನ್ ಸಭಾ ಈ ಗೋಲಿ ಬಾರ್ ಅನ್ನು ಖಂಡಿಸಿವೆ.

ಹರ್ಯಾಣ ಮುಖ್ಯಮಂತ್ರಿ ರಾಜೀನಾಮೆ ಕೊಡಬೇಕು ಎಂದು ಅವು ಒತ್ತಾಯಿಸಿವೆ. ಸಂಬಂಧಪಟ್ಟ ಪೋಲೀಸರ ವಿರುದ್ಧ ಕೊಲೆ ಮೊಕದ್ದಮೆ ಹೂಡಬೇಕು. ಸತ್ತವರ ಕುಟುಂಬಗಳಿಗೆ ತಲಾ ಕನಿಷ್ಠ ಐದು ಲಕ್ಷ ರೂ ಪರಿಹಾರ ಹಾಗೂ ಗಾಯಾಳುಗಳಿಗೂ ಸಾಕಷ್ಟು ಧನ ವಿತರಿಸುವಂತೆ ಎರಡೂ ಸಂಘಟನೆಗಳು ಒತ್ತಾಯಿಸಿವೆ.

ಎಲ್ಲಕ್ಕಿಂತ ಹೆಚ್ಚಾಗಿ ಸಂತ್ರಸ್ತ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಪೂರೈಸುವುದನ್ನು ಪುನಃ ಪ್ರಾರಂಭಿಸಬೇಕು ಎಂದೂ ಮನವಿ ಮಾಡಿವೆ.

ರೈತರ ಸಾಲ ಮರುಪಾವತಿಗೆ ತಡೆ

ಬಂಡವಾಳಶಾಹಿ ಭೂಮಾಲಿಕ ಪಕ್ಷಗಳು ದೇಶವನ್ನು ಸಾಮ್ರಾಜ್ಯಶಾಹಿಗೆ ಒತ್ತೆಯಿಡುವ ನೀತಿಗಳನ್ನು ರೂಪಿಸುತ್ತಿರುವಾಗ ಅದಕ್ಕೆ ದೃಢವಾದ ವಿರೋಧವನ್ನು ವ್ಯಕ್ತಪಡಿಸುತ್ತಿರುವುದು ಎಡಶಕ್ತಿಗಳು ಮಾತ್ರ ಇದು ವಿರೋಧಕ್ಕಾಗಿ ವಿರೋಧ ಮಾತ್ರವಲ್ಲ, ರಚನಾತ್ಮಕ ಹಾಗೂ ತತ್ವಬದ್ಧ ವಿರೋಧವಾಗಿದೆ.

ದೇಶದ ಆರ್ಥಿಕ ಸ್ವಾವಲಂಬನೆಗೆ, ಅನ್ನದಾತ ಹಾಗೂ ಕಾರ್ಮಿಕ ವರ್ಗವನ್ನು ಸಂಕಷ್ಟದಿಂದ ಪಾರು ಮಾಡಲು ಎಡಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಗರಿಷ್ಠಕ್ರಮಗಳನ್ನು ಕೈಗೊಳ್ಳಲಾಗಿದೆ.

ಇಗೋ ಇಲ್ಲಿದೆ, ತಾಜಾ ತಾಜಾ ಉದಾಹರಣೆ. ರೈತರು ಪಡೆದ 10,000 ರೂವರೆಗಿನ ಬ್ಯಾಂಕ್ ಸಾಲವನ್ನು ಮರುಪಾವತಿ ಮಾಡಬೇಕಿಲ್ಲ ಎಂದು ತ್ರಿಪುರಾದ ಎಡರಂಗ ಸರಕಾರ ಘೋಷಿಸಿದೆ. ಇದರಿಂದ ರಾಜ್ಯದ 2.73 ಲಕ್ಷ ರೈತರಿಗೆ ಪ್ರಯೋಜನ ಆಗಲಿದೆ.

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂಭತ್ತು ಬ್ಯಾಂಕುಗಳು ಕೊಟ್ಟ ಒಟ್ಟು ಕೃಷಿ ಸಾಲದ ಶೇಕಡ 50ನ್ನು ರಾಜ್ಯ ಸರಕಾರ ಮರುಪಾವತಿ ಮಾಡಿದೆ. ಉಳಿದ ಅರ್ಧವನ್ನು ನಬಾರ್ಡ್ ಮರುಪಾವತಿ ಮಾಡಿದೆ.

ಸೌಲಭ್ಯ ಕಿತ್ತುಕೊಂಡಿದ್ದ ಕಾಂಗ್ರೆ ಮೈತ್ರಿಕೂಟ

10,000 ರೂ.ವರೆಗಿನ ಕೃಷಿ ಸಾಲದ ಮರುಪಾವತಿ ಮೇಲೆ 1990 ರಲ್ಲಿ ವಿ.ಪಿ. ಸಿಂಗ್ ನೇತೃತ್ವದ ರಾಷ್ಟ್ರೀಯರಂಗ ಸರಕಾರ ನಿಷೇಧ ವಿಧಿಸಿತ್ತು.

ಆದರೆ, ತ್ರಿಪುರಾದಲ್ಲಿನ ಕಾಂಗ್ರೆಸ್(ಐ)-ಟಿ.ಯು.ಜೆ.ಎಸ್. ಮೈತ್ರಿಕೂಟದ ಸರಕಾರ ಇದನ್ನು ಜಾರಿಗೊಳಿಸಿರಲಿಲ್ಲ. ರಾಜ್ಯದ ಒಬ್ಬನೇ ಒಬ್ಬ ರೈತನಿಗೂ ಈ ಯೋಜನೆಯ ಲಾಭ ಸಿಕ್ಕಿರಲಿಲ್ಲ.

ನವೆಂಬರ್‌ನಲ್ಲಿ ವಿ.ವಿ. ವಿದ್ಯಾರ್ಥಿ ಮುಷ್ಕರ

ಪಿ.ವಿ. ನರಸಿಂಹರಾವ್ ಸರಕಾರದ ನೀತಿಗಳು ಶಿಕ್ಷಣ ಕ್ಷೇತ್ರವನ್ನು ಬಿಟ್ಟಿಲ್ಲ. ಹೊಸ ಆರ್ಥಿಕ ನೀತಿಯಿಂದಾಗಿ ಉನ್ನತ ಶಿಕ್ಷಣಕ್ಕೆ ವೆಚ್ಚ ಮಾಡುವ ಹಣ ಕಡಿಮೆಯಾಗುತ್ತಿದ. ಶಿಕ್ಷಣದ ವ್ಯಾಪಾರೀಕರಣಕ್ಕೆ ಹಾದಿಯನ್ನು ಸುಗಮಗೊಳಿಸಿಕೊಡಲಾಗುತ್ತಿದೆ. ವಿಶ್ವವಿದ್ಯಾಲಯಗಳನ್ನು ಕೂಡಾ ಖಾಸಗೀಕರಿಸಲು ಸರಕಾರ ಹೊರಟಂತಿದೆ.

ಇವೆಲ್ಲವನ್ನು ಪ್ರತಿಭಟಿಸಲು ನವೆಂಬರ್ ಕೊನೆಯಲ್ಲಿ ಅಖಿಲ ಭಾರತವಿದ್ಯಾರ್ಥಿಮುಷ್ಕರನಡೆಯಲಿದೆ.

ಅಲಹಾಬಾದ್ ನಲ್ಲಿ ಆಗಸ್ಟ್ 26 ಮತ್ತು 27 ರಂದು ನಡೆದ ಅಖಿಲ ಭಾರತ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಸಮಾವೇಶ ಈ ಹೋರಾಟಕ್ಕೆ ಕರೆ ನೀಡಿದೆ. ಎಸ್.ಎಫ್.ಐ. ಸಮಾವೇಶವನ್ನು ವ್ಯವಸ್ಥೆಗೊಳಿಸಿತ್ತು.

ಕಲ್ಕತ್ತ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಪ್ರೊ. ಭಾರತಿ ರೇ ಸಮಾವೇಶವನ್ನು ಉದ್ಘಾಟಿಸಿದರು. ಎಸ್.ಎಫ್.ಐ. ಸಹಕಾರ್ಯದರ್ಶಿ ಪಿ. ಕೃಷ್ಣ ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ಬೃತಿನ್ ಸೇನ್ ಗುಪ್ತಾ ಅವರೂ ಮಾತನಾಡಿದರು.

90 ವಿಶ್ವವಿದ್ಯಾಲಯಗಳಿಂದ ಒಟ್ಟು 184 ಪ್ರತಿನಿಧಿಗಳು ಇದರಲ್ಲಿ ಪಾಲ್ಗೊಂಡಿದ್ದರು.

ಆಂಧ್ರ ಪ್ರದೇಶ: ನಾಯ್ಡು ಸರಕಾರ ಏನು ಮಾಡಬೇಕು-ಏನು ಮಾಡಬಾರದು

ಆಂಧ್ರ ಪ್ರದೇಶದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ತೆಲುಗುದೇಶಂ ಪಕ್ಷದ ಮುಖಂಡ ಎನ್. ಚಂದ್ರಬಾಬು ನಾಯ್ಡುರವರನ್ನು ಸಿಪಿಐ(ಎಂ) ಆಂಧ್ರ ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿನಂದಿಸಿದೆ. ಹಿಂದಿನ ಎನ್.ಟಿ.ಆರ್. ಸರಕಾರ ಕೈಗೊಂಡ ಕೆಲವು ಕ್ರಮಗಳ ಬಗ್ಗೆ ಪುನರಾಲೋಚನೆ ಮಾಡುವುದಾಗಿ ಅವರು ಹೇಳಿರುವುದನ್ನು ಕಾರ್ಯದರ್ಶಿ ಮಂಡಳಿ ಸ್ವಾಗತಿಸಿದೆ. ಕೆ.ಜಿ.ಗೆ 2 ರೂ.ನಲ್ಲಿ ಸಬ್ಸಿಡಿ ಅಕ್ಕಿ ಯೋಜನೆ ಮುಂದುವರಿಸುವುದಾಗಿ, ಪಾನ ಪ್ರತಿಬಂಧದ ಕಟ್ಟುನಿಟ್ಟಾದ ಅನುಷ್ಠಾನ ಹಾಗೂ ರೈತರಿಗೆ 50 ರೂ. ದರದಲ್ಲಿ ವಿದ್ಯುತ್ ಇವನ್ನೆಲ್ಲಾ ಮುಂದುವರಿಸುವುದಾಗಿ ತಿಳಿಸಿರುವುದು, ವಿವಾದಗ್ರಸ್ತವಾದ ಸುಬ್ರಮಣ್ಯಂ ಮತ್ತು ರಾಮಕೃಷ್ಣ ರಾವ್ ಸಮಿತಿಗಳ ವರದಿಗಳ ಬಗ್ಗೆ, ನ್ಯಾಯ ಪಂಚಾಯಿತಿ ವ್ಯವಸ್ಥೆ ಬಗ್ಗೆ ಪುನರಾಲೋಚನೆ ಮುಂತಾದ ಕ್ರಮಗಳು, ನೀರಾವರಿಯನ್ನು ತ್ವರಿತಗೊಳಿಸುವ ಪ್ರಯತ್ನ ಅಲ್ಪಸಂಖ್ಯಾತರ, ಮಹಿಳೆಯರ, ಗಿರಿಜನರ ಹಳ್ಳಿಗಳ ರಕ್ಷಣೆ ಇವೆಲ್ಲಾ ಸ್ವಾಗತಾರ್ಹವಾಗಿರುವ ಹಾಗೂ ಸರಿಯಾದ ದಿಕ್ಕಿನಲ್ಲಿರುವ ಹೇಳಿಕೆಗಳು ಎಂದಿರುವ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಗಿರಿಜನರ ಭೂಮಿಗಳಿಗೆ ಒತ್ತುವರಿ ಪಡೆಯುತ್ತಿರುವುದನ್ನು ತಡೆಯಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಪಡಿದೆ. ಈ ಹಿಂದೆ ಜನರ ಮೇಲೆ ಹೇರಿರುವ ಹೆಚ್ಚಿನ ತೆರಿಗೆ ಭಾರವನ್ನು ರದ್ದು ಮಾಡುವ ಬಗ್ಗೆಯೂ ಸರಕಾರ ಯೋಚನೆ ಮಾಡಬೇಕು ಎಂದು ಹೇಳಿದೆ. ತಾನು ನೀಡಿದ ಭರವಸೆಗಳನ್ನು ಅನುಷ್ಠಾನಕ್ಕೆ ತರುವ ದೃಢನಿರ್ಧಾರವನ್ನು ಈ ಸರ್ಕಾರ ತೋರ್ಪಡಿಸಬೇಕು. ಈ ಭರವಸೆಗಳಿಗನುಗುಣವಾದ ಜನಸಾಮಾನ್ಯರಿಗೆ ನ್ಯಾಯ ದೊರಕಿಸುವ ಕ್ರಮಗಳನ್ನು ರೂಪಿಸಬೇಕು, ಇವು ಜ್ಯಾರಿಗೆ ಬರುವಂತಿರಬೇಕು ಎನ್ನುತ್ತಾ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಈ ದಿಕ್ಕಿನಲ್ಲಿ ಸರಕಾರ ಮತ್ತು ಪಕ್ಷಗಳೊಂದಿಗೆ ಹಾಗೂ ಇತರರೊಂದಿಗೆ ಸಮಾಲೋಚನೆ ನಡೆಸಬೇಕು ಎಂದು ಅಭಿಪ್ರಾಯಪಟ್ಟಿದೆ.

ರಾಜ್ಯದಲ್ಲಿ ಬೆಳೆದು ಬರುತ್ತಿರುವ ರಾಜಕೀಯ ಸನ್ನಿವೇಶದ ಮೇಲೆ ಸರಕಾರ ಕಣ್ಣಿಟ್ಟಿರಬೇಕು. ಲೋಕಸಭಾ ಚುನಾವಣೆಗಳು ಇನ್ನೇನು ನಡೆಯಲಿವೆ. ರಾಜ್ಯಗಳ ಮೇಲೆ ಕೇಂದ್ರ ನಡೆಸುತ್ತಿರುವ ಅನ್ಯಾಯಗಳನ್ನು ತಡೆಯಬೇಕು, ಇಲ್ಲವಾದರೆ ರಾಜ್ಯ ತೀವ್ರ ಹಣಕಾಸು ಅಭಾವ ಎದುರಿಸಬೇಕಾಗಿ ಬಂದು ಸಮಸ್ಯೆಗಳ ಪರಿಹಾರ ಸಾಧ್ಯವಾಗಲಿಕ್ಕಿಲ್ಲ. ಇದನ್ನು ತಡೆಯುವ ಏಕೈಕ ದಾರಿಯೆಂದರೆ ಜನಗಳನ್ನು ಅಣಿನೆರಸಿ ಕಾಂಗ್ರೆಸ್ ಪಕ್ಷದ ಕುಹಕತನ ಮತ್ತು ಬಿಜೆಪಿಯ ಧರ್ಮಾಂಧತೆಯ ವಿರುದ್ಧ ಹೋರಾಟ ನಡೆಸುವುದು ಇದಕ್ಕಾಗಿ ರಾಷ್ಟ್ರೀಯರಂಗ ಮತ್ತು ಎಡಪಕ್ಷಗಳೊಡನೆ ಬಲವಾದ ಸಂಯೋಜನೆ ಆಗತ್ಯ. ಅಧಿಕಾರ ವಹಿಸಿಕೊಂಡ ನಂತರ ಈ ಬಗ್ಗೆ ಮುಖ್ಯಮಂತ್ರಿ ಏನೂ ಹೇಳದಿರುವುದು ದುರಾದೃಷ್ಟಕರ ಎಂದಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಈಗಿನ ಮುಖಂಡತ್ವ ರಾಷ್ಟ್ರೀಯರಂಗದಲ್ಲಿ ಉಳಿಯುತ್ತದೆ ಹಾಗೂ ರಾಷ್ಟ್ರಮಟ್ಟದಲ್ಲಿ ಒಂದು ಬಲವಾದ ಪರ್ಯಾಯಕ್ಕೆ ಪ್ರಯತ್ನಿಸುತ್ತದೆ ಎಂದು ಆಶಿಸಿದೆ.

ತೆಲುಗುದೇಶಂ ಪಕ್ಷದಲ್ಲಿ ಭುಗಿಲೆದ್ದ ಬಿಕ್ಕಟ್ಟಿನ ಪರಿಣಾಮವಾಗಿ ಎನ್.ಟಿ. ರಾಮರಾವ್ ಮುಖ್ಯಮಂತ್ರಿ ಪದವಿಯಿಂದ ತೆಗೆದು ಹಾಕಲ್ಪಟ್ಟು ಚಂದ್ರಬಾಬು ನಾಯ್ಡು ಹೊಸ ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷರಾಗಿದ್ದಾರೆ. ತೆಲುಗುದೇಶಂ ಪಕ್ಷ ಚುನಾವಣೆಗಳಲ್ಲಿ ಭಾರೀ ವಿಜಯಗಳಿಸಿದ ಎಂಟು ತಿಂಗಳಲ್ಲೇ ಪಕ್ಷದ ಬಹುಪಾಲು ಎಂಎಲ್‌ಎಗಳು ಬಂಡಾಯದಿಂದಾಗಿ ಈ ತ್ವರಿತ ಬದಲಾವಣೆ ನಡೆಯಿತು.

ಎನ್.ಟಿ.ಆರ್. ಸರಕಾರ ಕೆಲವು ಜನಪ್ರಿಯ ಕ್ರಮಗಳನ್ನು ಕೈಗೊಂಡರೂ ಇನ್ನೂ ಕೆಲವು ರಂಗಗಳಲ್ಲಿ ಅದು ಕಾಂಗ್ರೆ ಕೇಂದ್ರ ಸರ್ಕಾರದ ಮಾದರಿಯದ್ದೇ ಕ್ರಮಗಳನ್ನು ಅಂಗೀಕರಿಸಲಾರಂಭಿಸಿತು. ಮುಖ್ಯವಾಗಿ ಸಾರ್ವಜನಿಕ ಸೇವೆಗಳ ಖಾಸಗೀಕರಣದಲ್ಲಿ. ಅಲ್ಲದೆ ಎಡ ಪಕ್ಷಗಳೊಡನೆ ಯಾವುದೇ ಚರ್ಚೆ, ಸಮಾಲೋಚನೆ ನಡೆಸುವ ಗೋಜಿಗೂ ಹೋಗಲಿಲ್ಲ. ಈ ನಡುವೆ ಪಕ್ಷದೊಳಗೆ, ಸರಕಾರದಲ್ಲಿ ಎನ್.ಟಿ.ರಾಮರಾವ್ ಪತ್ನಿ ಲಕ್ಷ್ಮಿ ಪಾರ್ವತಿಯ ಹಸ್ತಕ್ಷೇಪದಿಂದ ಬಹುಪಾಲು ಪಕ್ಷದ ಮುಖಂಡರು ಹಾಗೂ ಎಂ.ಎಲ್.ಎ.ಗಳಲ್ಲಿ ಅತೃಪ್ತಿ ಬೆಳೆಯಿತು. ಕೊನೆಗೆ ಮುಕ್ಕಾಲುಪಾಲು ಎಂ.ಎಲ್.ಎ.ಗಳು ಚಂದ್ರಬಾಬು ನಾಯ್ಡು ನೇತೃತ್ವದ ಬಂಡಾಯಕ್ಕೆ ಬೆಂಬಲ ನೀಡುವಂತಾಯಿತು.

ಈ ಬಂಡಾಯ ಕಂಡಾಗ ಎನ್.ಟಿ.ಆರ್. ವಿಧಾನಸಭೆಯ ವಿಸರ್ಜನೆಗೆ ಸಲಹೆ ಮಾಡಿದರು. ಇದೊಂದು ಪ್ರಜಾಪ್ರಭುತ್ವ ವಿರೋಧಿ ಕ್ರಮ ಎಂದು ಸಿಪಿಐ(ಎಂ) ಹಾಗೂ ಸಿಪಿಐ ವಿರೋಧಿಸಿದವು. ಎನ್.ಟಿ.ಆರ್. ತಮ್ಮ ಹಠಬಿಟ್ಟು ಪರಿಸ್ಥಿತಿಯನ್ನು ಒಪ್ಪಿಕೊಂಡು ರಾಷ್ಟ್ರೀಯ ರಂಗದ ಅಧ್ಯಕ್ಷರಾಗಿ ರಾಷ್ಟ್ರಮಟ್ಟದಲ್ಲಿ ತನ್ನ ಪಾತ್ರ ವಹಿಸಬೇಕು ಎಂದು ಸಿಪಿಐ(ಎಂ) ಸಲಹೆ ಮಾಡಿತು. ಈ ನಡುವೆ ಜನತಾದಳ ರಾಷ್ಟ್ರ ಮುಖಂಡರು ಬಂದು ತೆಲುಗು ದೇಶಂ ಐಕ್ಯತೆ ಕಾಪಾಡಲು ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಕೊನೆಗೆ ವಿಧಾನಸಭೆಯಲ್ಲಿ ಬಲಪರೀಕ್ಷೆಯಾಗಬೇಕಿದ್ದ ಹಿಂದಿನ ದಿನ ಸಿಪಿಐ(ಎಂ) ಚಂದ್ರಬಾಬು ನಾಯ್ಡುರವರಿಗೆ ಬೆಂಬಲ ಸೂಚಿಸಿತು.

ಈ ಹಿನ್ನೆಲೆಯಲ್ಲಿಯೇ ಸಿಪಿಐ(ಎಂ)ನ ಆಂಧ್ರಪ್ರದೇಶ ರಾಜ್ಯ ಕಾರ್ಯದರ್ಶಿ ಮಂಡಳಿ ತೆಲುಗು ದೇಶಂ ಹೊಸ ಮುಖಂಡತ್ವ ಕಳೆದ ಎಂಟು ತಿಂಗಳಲ್ಲಿ ಅನುಸರಿಸಿದ ನೀತಿಗಳನ್ನು ವಿಮರ್ಶಿಸಬೇಕೆಂದು ಬಯಸುತ್ತದೆ. ಅದೇ ವೇಳೆಗೆ ಒಬ್ಬ ವ್ಯಕ್ತಿಯ ಮೇಲಷ್ಟೇ ನಿಂತಿರುವ ಹಾಗೂ ಇಡೀ ಪಕ್ಷ ನಿರ್ಣಯ ರೂಪಿಸುವಲ್ಲಿ ತೊಡಗುವ ವ್ಯವಸ್ಥೆಯಿಲ್ಲದೆ ಪಕ್ಷ ಬಹಳ ದಿನ ಸ್ಥಿರವಾಗಿರಲಾರದು ಎಂಬ ಪಾಠವನ್ನು ಈ ದುರಾದೃಷ್ಟಕಾರಿ ಘಟನೆಯಿಂದ ಕಲಿಯಬೇಕೆಂದು ಸಿಪಿಐ(ಎಂ) ಬಯಸಿದೆ.

"ಹಾಸ್ಟೇಲ್ ವಿದ್ಯಾರ್ಥಿಗಳ ಯಶಸ್ವಿ ಸಮಾವೇಶ"

ದಾವಣಗೆರೆ: ಪ್ರಪ್ರಥಮವಾಗಿ ಸಂಘಟಿಸಲಾದ ರಾಜ್ಯ ಮಟ್ಟದ ಹಾಸ್ಟೇಲ್ ವಿದ್ಯಾರ್ಥಿಗಳ ಸಮಾವೇಶವು ಎಸ್.ಎಫ್.ಐ. ರಾಜ್ಯ ಸಮಿತಿ ನೇತೃತ್ವದಲ್ಲಿ ಆಗಸ್ಟ್ 26 ರಂದು ದಾವಣಗೆರೆಯಲ್ಲಿ ಯಶಸ್ವಿಯಾಗಿ ನಡೆಯಿತು. ರಾಜ್ಯದ 11 ಜಿಲ್ಲೆಗಳಿಂದ 190 ಪ್ರತಿನಿಧಿಗಳು ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ (ಹಾಸ್ಟೇಲ್) ಎಸ್. ಜಯಣ್ಣರವರು ಹಾಸ್ಟೇಲ್ ವಿದ್ಯಾರ್ಥಿಗಳ ಸಮಾವೇಶ ಸಂಘಟಿಸಿದ್ದಕ್ಕೆ ಎಸ್.ಎಫ್.ಐ.ಯನ್ನು ಅಭಿನಂದಿಸುತ್ತ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಸೌಲಭ್ಯಗಳೂ ಯಾವುದಕ್ಕೂ ಸಾಲದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಎಸ್.ಎಫ್.ಐ. ಕೇಂದ್ರ ಸಮಿತಿ ಅಧ್ಯಕ್ಷರಾದ ಕಾಂ. ವೈ ವೆಂಕಟೇಶ್ವರರಾವ್‌ರವರು ಮಾತನಾಡುತ್ತ ನಾವು ಐಷಾರಾಮಿ ಭೋಜನವನ್ನು ಕೇಳುತ್ತಿಲ್ಲ. ಸರ್ಕಾರದಿಂದ ಸಿಗಬೇಕಾಗಿರುವ ಎರಡು ಹೊತ್ತಿನ ತುತ್ತನ್ನು ಮಾತ್ರ ನ್ಯಾಯೋಜಿತವಾದ ರೀತಿಯಲ್ಲಿ ಕೊಡಿರೆಂದು ಕೇಳಿದರು. ಅವರು ಮುಂದುವರೆದು ಮಾತನಾಡುತ್ತಾ ಸರ್ಕಾರ ಹಾಸ್ಟೇಲ್ ವಿದ್ಯಾರ್ಥಿಗಳಿಗೆ ಊಟವೊಂದಕ್ಕೆ 2.75ಪೈಸೆ ಕೊಡುತ್ತದೆ. ಆರೋಗ್ಯ ತಪಾಸಣೆಗೆ ವರ್ಷಕ್ಕೆ 20 ರೂ. ನೀಡುತ್ತದೆ. ನಮ್ಮ ದೇಶ ಅಥವಾ ಕರ್ನಾಟಕದ ಯಾವ ಮೂಲೆಯಲ್ಲಾದರೂ 2.75 ಪೈಗೆ ಊಟ ಸಿಗುತ್ತದೆಯೆ? ಹಾಗೇನೆ ವರ್ಷವೊಂದಕ್ಕೆ ಮನುಷ್ಯನಿಗೆ ಆರೋಗ್ಯ ತಪಾಸಣೆಗೆ 20 ರೂ. ಸಾಲುತ್ತದೆಯೇ? ಎಂದು ಪ್ರಶ್ನಿಸಿದ ಅವರು ಇಂದಿನ ಹಾಗೂ ಹಿಂದಿನ ಸರ್ಕಾರಗಳು ತಾವೇ ಘೋಷಿಸಿದ ರೀತಿಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಕೊಡಬೇಕಾದ ಸೌಲಭ್ಯಗಳನ್ನು ನೀಡುತ್ತಿಲ್ಲ. ಬೇಡಿಕೆಗಳ ಈಡೇರಿಕೆಗೆ ವಿದ್ಯಾರ್ಥಿಗಳ ಹೋರಾಟ ಅನಿವಾರ್ಯವೆಂದರು.

ಮಾಜಿ ಸಂಸತ್ ಸದಸ್ಯರಾದ ಕೆ.ಜಿ. ಮಹೇಶ್ವರಪ್ಪನವರು ಮಾತನಾಡುತ್ತಾ ಹಾಸ್ಟೇಲ್ ಸಮಸ್ಯೆಗಳ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನ ಕರೆಯುವಂತೆ ಸರಕಾರವನ್ನು ಒತ್ತಾಯಿಸಿದರು.

ಸಮಾವೇಶದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಎಸ್.ಎಫ್.ಐ. ರಾಜ್ಯ ಸಮಿತಿ ಅಧ್ಯಕ್ಷರಾದ ಶಾಂತಾರಾಮ ನಾಯಕ್ ವಹಿಸಿದ್ದರು. ಕೆ. ಮಹಾಂತೇಶ ಪ್ರಾಸ್ತಾವಿಕ ಮಾತನಾಡಿದರು. ಸ್ವಾಗತ ಸಮಿತಿ ಅಧ್ಯಕ್ಷರಾದ ಪತ್ರಕರ್ತ ಬಿ.ಎಸ್. ಮಲ್ಲೇಶ ಸ್ವಾಗತಿಸಿದರು. ಎಲ್. ಮಂಜುನಾಥ ವಂದಿಸಿದರು.

ಉದ್ಘಾಟನಾ ಅಧಿವೇಶನದ ನಂತರ ರಾಜ್ಯ ಸಮಿತಿ ಪರವಾಗಿ ಕಾರ್ಯದರ್ಶಿ ಪ್ರಕಾಶ್ ಕೆ. ಮಂಡಿಸಿದ ವರದಿ ಮೇಲೆ ಮೂರು ಆಯೋಗಗಳನ್ನು ರಚಿಸಿ ಎಲ್ಲಾ ಪ್ರತಿನಿಧಿಗಳು ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ನೋಡಿಕೊಳ್ಳಲಾಯಿತು. ಆಯೋಗ 1) ಆರ್ಥಿಕ ವಿಷಯಗಳು ಮತ್ತು ಹಾಸ್ಟೇಲ್ 2) ಶೈಕ್ಷಣಿಕ ಸಮಸ್ಯೆಗಳು ಮತ್ತು ಹಾಸ್ಟೇಲ್ 3) ಆರೋಗ್ಯ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಹಾಸ್ಟೇಲ್. ಆಯೋಗದ ಮೂಲಕ ಬಂದ ಅಭಿಪ್ರಾಯಗಳನ್ನು ಶಿಫಾರಸ್ಸುಗಳನ್ನು ಕ್ರೋಢೀಕರಿಸಿ ಬೇಡಿಕೆಗಳನ್ನು ಅಂತಿಮಗೊಳಿಸಲಾಯಿತು. ಈ ಬೇಡಿಕೆಗಳ ಆಧಾರದಲ್ಲಿ ಸೆ.20 ರಂದು ರಾಜ್ಯ ಮಟ್ಟದ ರ್‍ಯಾಲಿ ಹಾಗೂ ಇತರ ಪ್ರಚಾರವನ್ನು ಕನಿಷ್ಠ 300 ಹಾಸ್ಟೇಲಿಗೆ ತೆಗೆದುಕೊಂಡು ಹೋಗಲು ತೀರ್ಮಾನಿಸಲಾಯಿತು.

ಹಾಸ್ಟೇಲ್ ವಿದ್ಯಾರ್ಥಿಗಳ ಸಮಾವೇಶವನ್ನು ಯಶಸ್ವಿಯಾಗಿ ಸಂಘಟಿಸಿದ ದಾವಣಗೆರೆ ಎಸ್.ಎಫ್.ಐ. ಸಂಗಾತಿಗಳನ್ನು ರಾಜ್ಯ ಸಮಿತಿ ಈ ಸಂದರ್ಭದಲ್ಲಿ ಅಭಿನಂದಿಸಿದೆ.

ಸಾಮೂಹಿಕ ಸಂಘಟನೆಗಳ ವೇದಿಕೆಯ ಸಭೆ

ಕರ್ನಾಟಕ ರಾಜ್ಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಪ್ರತಿನಿಧಿಗಳ ಸಭೆಯು ದಿನಾಂಕ ಸೆಪ್ಟೆಂಬರ್ 5ರಂದು ಸಂಜೆ 6 ಘಂಟೆಗೆ ಸಿಐಟಿಯು ರಾಜ್ಯ ಸಮಿತಿ ಕಛೇರಿಯಲ್ಲಿ ನಡೆಯಿತು. ಈ ಸಭೆಯು ಅಧ್ಯಕ್ಷತೆಯನ್ನು ಸಿಐಟಿಯು ಮುಖಂಡರಾದ ಕಾಂ. ಶ್ರೀನಿವಾಸ್‌ರವರು ವಹಿಸಿದ್ದರು.

ಕರ್ನಾಟಕ ರಾಜ್ಯದಲ್ಲಿ ಹಿಂದಿನ ಸರ್ಕಾರ ಮಾಡಿದ ತೀರ್ಮಾನದ ಪ್ರಕಾರ ಕಾವೇರಿ ನದಿಯ ನೀರನ್ನು ರಾಜ್ಯಕ್ಕೆ ತೊಂದರೆ ಇದ್ದರೂ ಸಹ ಅನಿವಾರ್ಯವಾಗಿ 5 ಟಿ.ಎಂ.ಸಿ. ನೀರನ್ನು ಬಿಟ್ಟಿರುವುದನ್ನು ವಿರೋಧಿಸಿ ರಾಜಕೀಯ ಪಕ್ಷಗಳು ಮುಂಬರುವ ಲೋಕಸಭಾ ಚುನಾವಣೆಗೆ ಉಪಯೋಗಿಸಿಕೊಳ್ಳಲು ರಾಜಕೀಯ ದುರುದ್ದೇಶದಿಂದ ಚಳುವಳಿ ನಡೆಸುವುದನ್ನು ಸಾಮೂಹಿಕ ಸಂಘಟನೆಗಳ ಈ ವೇದಿಕೆಯು ಖಂಡಿಸಿತು.

ಬೆಂಗಳೂರು ಬಂದ್‌ಗೆ ಬೆಂಬಲ ನೀಡಬಾರದೆಂದು ಈ ಸಂದರ್ಭದಲ್ಲಿ ಸಾಮೂಹಿಕ ಸಂಘಟನೆಗಳ ವೇದಿಕೆ ಮನವಿ ಮಾಡಿತ್ತು.

ಶಿವಮೊಗ್ಗ: ಸಾಮೂಹಿಕ ಸಂಘಟನೆಗಳ ಜಿಲ್ಲಾ ಪ್ರತಿನಿಧಿಗಳು ಸೆಪ್ಟೆಂಬರ್ 1ರಂದು ಶ್ರೀಯುತ ವಾಸುದಾಸ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು.

ಸಿಐಟಿಯು ಮುಖಂಡ ಎಸ್.ಬಿ. ಶಿವಶಂಕರ್, ಹಮಾಲಿಕಾರ್ಮಿಕ ಸಂಘದ(ಹೆಚ್.ಎಂ.ಎಸ್.) ಮುಖಂಡ ಬಿ.ತುರುಕಪ್ಪ ಇವರು ಮಾತನಾಡಿ ಐಕ್ಯತೆಯಿಂದ ಹೋರಾಡದಿದ್ದರೆ ಉಳಿಗಾಲವಿಲ್ಲ, ಆರ್ಥಿಕ ನೀತಿಯಿಂದ ನಿರುದ್ಯೋಗ ಸಮಸ್ಯೆ ಪೆಡಂಭೂತವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ವಾಸುದಾಸ್‌ರವರು ಮಾತನಾಡಿ ಜನತೆಯ ಬೇಡಿಕೆಗಳ ಅಡಿಯಲ್ಲಿ ನಡೆಯುವ ಹೋರಾಟ ಸುಸಂಗತವಾಗಿದ್ದು, ಈ ಹೋರಾಟದಲ್ಲಿ ಎಲ್ಲಾ ಸರ್ಕಾರಿ ನೌಕರರು ಪಾಲ್ಗೊಳ್ಳುವರೆಂದರು. ಹಾಗೂ ಜನತೆ ಕೂಡ ಒಂದಾಗಿ ಹೋರಾಡುವ ಅಗತ್ಯವಿದೆ ಎಂದರು.

ಎಸ್‌ಎಫ್‌ಐ: ಸೆ.20 ವಿಧಾನಸೌಧ ಚಲೋ

ಎಸ್‌ಎಫ್‌ಐ ರಾಜ್ಯ ಸಮಿತಿಯು ಹಾಸ್ಟೆಲ್ ಹಾಗೂ ಇನ್ನಿತರ ಶೈಕ್ಷಣಿಕ ಸಮಸ್ಯೆಗಳ ಈಡೇರಿಕೆಗೆ ಒತ್ತಾಯಿಸಿ ಸೆಪ್ಟೆಂಬರ್ 20ರಂದು ವಿಧಾನಸೌಧಾ ಚಲೋ ಸಂಘಟಿಸಿದೆ. ಆದ್ದರಿಂದ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಎಸ್‌ಎಫ್‌ಐ ರಾಜ್ಯ ಸಮಿತಿ ವಿನಂತಿಸಿದೆ.

ಕೊಜೆಂಟ್ರಿಕ್ಸ್: ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ

ಚಿಂತಾಮಣಿ

ಕೊಜೆಂಟ್ರಿಕ್ಸ್ ಜೊತೆ ರಾಜ್ಯ ಸರ್ಕಾರ ಮಾಡಿಕೊಂಡಿರುವ ಒಪ್ಪಂದವನ್ನು ರದ್ದು ಮಾಡಬೇಕೆಂದು ಆಗ್ರಹಿಸಿ ಆಗಸ್ಟ್ 14ರಂದು ಚಿಂತಾಮಣಿಯ ತಾಲ್ಲೂಕು ಕಚೇರಿಯನ್ನು ಸಿಪಿಐ(ಎಂ) ನಾಯಕತ್ವದಲ್ಲಿ ನೂರಾರು ಜನ ಮುತ್ತಿಗೆ ಹಾಕಿ ಪಿಕೆಟಿಂಗ್ ನಡೆಸಿ ಬಂಧನಕ್ಕೊಳಗಾದರು.

ಬೆಳಿಗ್ಗೆ ವಿವಿಧ ಪ್ರದೇಶಗಳಿಂದ ಬಂದಿದ್ದ ನೂರಾರು ಜನ ಪ್ರವಾಸಿ ಮಂದಿರದಿಂದ ಮೆರವಣಿಗೆ ಆರಂಭ ಮಾಡಿ, ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಮೆರವಣಿಗೆ ತಾಲ್ಲೂಕು ಕಛೇರಿ ತಲುಪಿದ ತಕ್ಷಣವೇ ಕಚೇರಿಯ ಎಲ್ಲಾ ಕೊಠಡಿಗಳಿಗೆ ಕಾರ್ಯಕರ್ತರು ನುಗ್ಗಿ ಕೊಠಡಿಗಳಲ್ಲಿ ಕೆಂಬಾವುಟಗಳನ್ನು ಹಾರಾಡಿಸಿ ಕೆಲಸ ಕಾರ್ಯಗಳನ್ನು ನಿಲ್ಲಿಸಿದರು. ದಿಢೀರನೇ ಎಲ್ಲ ರೂಂಗಳಲ್ಲಿ ಪ್ರತ್ಯಕ್ಷವಾದ ಕೆಂಬಾವುಟಗಳನ್ನು ಕಂಡು ಕೆಲವರು ಗಾಬರಿಗೊಂಡರೆ, ಇನ್ನೂ ಕೆಲವರು ಸಂತೋಷಪಟ್ಟರು. ಈ ಮುತ್ತಿಗೆಯನ್ನು ಕಂಡು ನೂರಾರು ಜನ ಕಛೇರಿಯ ಮುಂದೆ ಜಮಾಯಿಸಿದರು. ಇವರುಗಳನ್ನು ಉದ್ದೇಶಿಸಿ ಕಾಂ. ಜಿ.ಸಿ. ಬಯ್ಯಾರೆಡ್ಡಿ ಮಾತನಾಡಿ ಈ ಒಪ್ಪಂದವನ್ನು ಸಿಪಿಐ(ಎಂ) ಏಕೆ ವಿರೋಧಿಸುತ್ತದೆ ಎಂಬುದನ್ನು ವಿವರಿಸಿ, ದೇವೇಗೌಡರಿಗೆ ರೈತರ, ಬಡವರ ಹಾಗೂ ರಾಜ್ಯದ ಅಭಿವೃದ್ಧಿಯ ಬಗ್ಗೆ ಕನಿಷ್ಠ ಕಾಳಜಿಯಿದ್ದರೆ ತಕ್ಷಣ ಈ ಒಪ್ಪಂದವನ್ನು ರದ್ದು ಮಾಡಬೇಕೆಂದು ಆಗ್ರಹಿಸಿದರು.

ಹೋರಾಟದ ನಾಯಕತ್ವವನ್ನು ಜಿ.ವಿ.ಅಶ್ವತನಾರಾಯಣರೆಡ್ಡಿ ಜಿ.ಸಿ.ಬಯ್ಯಾರೆಡ್ಡಿ, ಎಂ.ಎಸ್.ಆನಂದ್, ಗೋಪಿನಾಥ್ ಮತ್ತಿತರ ಸಂಗಾತಿಗಳು ವಹಿಸಿದ್ದರು.

ಇದೇ ರೀತಿಯಲ್ಲಿ ಜಿಲ್ಲೆಯ ಶಿಡ್ಲಘಟ್ಟದಲ್ಲಿ 125, ಬಾಗೇಪಲ್ಲಿಯಲ್ಲಿ 150 ಗುಡಿಬಂಡೆಯಲ್ಲಿ 120, ಗೌರಿಬಿದನೂರಿನಲ್ಲಿ 50 ಹಾಗೂ ಕೋಲಾರದ ಜಿಲ್ಲಾಧಿಕಾರಿಗಳ ಕಚೇರಿ ಪಿಕೆಟಿಂಗ್ ಮಾಡಿ ಸುಮಾರು 50 ಜನ ಬಂಧನಕ್ಕೊಳಗಾದರು.

ಈ ಹೋರಾಟಕ್ಕೆ ಜನ ಸಾಮಾನ್ಯರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತಗೊಂಡಿದ್ದು ಹೋರಾಟವನ್ನು ಮುಂದುವರಿಸಬೇಕಾದ ಅನಿವಾರ್ಯತೆಯನ್ನು ಎತ್ತಿ ತೋರಿಸಿದೆ.

ಹುಬ್ಬಳ್ಳಿ

ಜನವಿರೋಧಿ ಕೊಜೆಂಟ್ರಿಕ್ಸ್ ಒಪ್ಪಂದವನ್ನು ಕೈಬಿಡಬೇಕೆಂದು ಆಗ್ರಹಿಸಿ ಹುಬ್ಬಳ್ಳಿ ತಾಲ್ಲೂಕ ತಹಶೀಲ್ದಾರರ ಕಚೇರಿ ಎದುರು ಪಿಕೆಟಿಂಗ್ ನಡೆಸಿದ 78 ಜನ ಸಿಪಿಐ(ಎಂ) ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ಅನಂತರ ಬಿಡುಗಡೆ ಮಾಡಿದರು. ಸಿಪಿಐ(ಎಂ) ರಾಜ್ಯ ಸಮಿತಿಯ ಕರೆಯ ಮೇರೆಗೆ ಪಕ್ಷದ ಧಾರವಾಡ ಜಿಲ್ಲಾ ಸಮಿತಿಯು ತಾಲ್ಲೂಕು ಕಛೇರಿ ಮುತ್ತಿಗೆ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಬಂಧಿತರಲ್ಲಿ 15 ಜನ ಮಹಿಳೆಯರಿದ್ದರು. ಜಿಲ್ಲಾ ಸಮಿತಿಯ ಕಾರ್ಯದರ್ಶಿ ನಿತ್ಯಾನಂದಸ್ವಾಮಿ, ಜಿಲ್ಲಾ ಸಮಿತಿ ಸದಸ್ಯರುಗಳಾದ ಸಿ.ಆರ್.ಭಟ್, ಎಂ.ಎಚ್. ಮುಲ್ಲಾ ಮತ್ತು ಡಿ.ಜಿ. ಗೋಂದಕರ್ ಚಳುವಳಿಯ ನೇತೃತ್ವ ವಹಿಸಿದ್ದರು.

ಆರಂಭದಲ್ಲಿ ತಹಶೀಲ್ದಾರರ ಕಚೇರಿ ಎದುರು ಬೆಳಿಗ್ಗೆ 11 ಘಂಟೆಯಿಂದ ಸಾಮೂಹಿಕ ಧರಣಿ ಸತ್ಯಾಗ್ರಹವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಸಿ.ಆರ್. ಭಟ್ ಅವರು ಕೊಜೆಂಟ್ರಿಕ್ಸ್ ಕಂಪನಿಯು ಉತ್ಪಾದಿಸುವ ವಿದ್ಯುತ್ತಿಗೆ ದುಬಾರಿ ಬೆಲೆ ಕೊಡಬೇಕಾಗುವುದು ಎಂದು ಹೇಳಿದರು. ನಮ್ಮ ಕೆ.ಇ.ಬಿ.ಗೆ ಶೇಕಡ 16ರಷ್ಟು ಲಾಭದ ಗ್ಯಾರಂಟಿ ನೀಡದ ಸರ್ಕಾರ ವಿದೇಶಿ ಕಂಪನಿಗೆ ಶೇಕಡಾ 16 ರಿಂದ 30 ರವರೆಗೆ ಲಾಭದ ಗ್ಯಾರಂಟಿ ಕೊಡುವ ಮರ್ಮವೇನು ಎಂದು ಅವರು ಪ್ರಶ್ನಿಸಿದರು. ಜಿಲ್ಲಾ ಸಮಿತಿ ಕಾರ್ಯದರ್ಶಿ ನಿತ್ಯಾನಂದಸ್ವಾಮಿ ಅವರು ಮಾತನಾಡಿ ದೇವೇಗೌಡರು ಜನರ ಆಗ್ರಹಕ್ಕೆ ಮನ್ನಣೆ ನೀಡಿ ಕೊಜೆಂಟ್ರಿಕ್ಸ್ ಒಪ್ಪಂದವನ್ನು ರದ್ದು

ಮಾಡಬೇಕು ಎಂದು ಒತ್ತಾಯಿಸಿದರು.

ದೊಡ್ಡಬಳ್ಳಾಪುರ

ದೊಡ್ಡಬಳ್ಳಾಪುರದಲ್ಲಿ ಆಗಸ್ಟ್ 21ರಂದು ಸೋಮವಾರ ಬೆಳಿಗ್ಗೆ 11 ಘಂಟೆಗೆ ಸಿಪಿಐ(ಎಂ) ಆಶ್ರಯದಲ್ಲಿ ಕೊಜೆಂಟ್ರಿಕ್ಸ್ ವಿದ್ಯುತ್ ಕಂಪೆನಿಯನ್ನು ವಿರೋಧಿಸಿ ಸುಮಾರು 100ಕ್ಕೂ ಹೆಚ್ಚು ಕಾರ್ಯಕರ್ತರು ರಸ್ತೆ ತಡೆ ನಡೆಸಿದರು. ಹಳೆಯ ಬಸ್ ನಿಲ್ದಾಣದ ಎರಡೂ ರಸ್ತೆಗಳನ್ನು ಸುಮಾರು ಅರ್ಧಗಂಟೆಗೂ ಹೆಚ್ಚು ಸಮಯ ತಡೆದಿದ್ದರಿಂದ ವಾಹನ ಸಂಚಾರ ಅಸ್ತವ್ಯಸ್ತವಾಯಿತು.

ನೆರೆದಿದ್ದ ಕಾರ್ಯಕರ್ತರನ್ನು ಮತ್ತು ನಾಗರೀಕರನ್ನು ಉದ್ದೇಶಿಸಿ ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯ ಆರ್. ಚಂದ್ರ ತೇಜಸ್ವಿ ಮಾತನಾಡುತ್ತಾ, ಕಾಂಗ್ರೆಸ್ ನ್ನು ವಿರೋಧಿಸಿ ಮತ ಪಡೆದ ಜನತಾದಳ ಸರಕಾರ, ಕೇಂದ್ರದ ಜನ ವಿರೋಧಿ ನೀತಿಗಳನ್ನು ಬೆಂಬಲಿಸುತ್ತಿರುವುದನ್ನು ಖಂಡಿಸಿದರು.

ಎಲ್ಲಾ ದೇಶಪ್ರೇಮಿಗಳು ಈ ಲೂಟಿಕೋರ, ಪರಿಸರ ವಿರೋಧಿ ಕಂಪನಿಯನ್ನು ದೇಶದಲ್ಲಿ ಸ್ಥಾಪನೆ ಮಾಡಲು ಬಿಡಬಾರದೆಂದು ಮನವಿ ಮಾಡಿದರು.

ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ರಾಮಾಂಜನಪ್ಪನವರು ಕೊಜೆಂಟ್ರಿಕ್ಸ್ ಕಂಪೆನಿಗೆ ಪರ್ಯಾಯ ವ್ಯವಸ್ಥೆಯ ಧೋರಣೆಗಳನ್ನು ರಾಜ್ಯದ ದೇವೇಗೌಡರ ಸರಕಾರ ರೂಪಿಸಬೇಕೆಂದು ಆಗ್ರಹಿಸಿದರು.

ಕುರುಗೋಡು

ಲಕ್ಷಾಂತರ ಜನ ಈಗಾಗಲೇ, ವಿದ್ಯುತ್ ದೊರೆಯದೇ ಹಾಗೂ ವಿದ್ಯುತ್ ಬಿಲ್ ಪಾವತಿಸದೇ, ದೀಪದ ಬೆಳಕಿನಲ್ಲಿ ವಾಸಿಸುತ್ತಿರುವ ಸಂದರ್ಭದಲ್ಲಿ ತೀವ್ರ ವಿದ್ಯುತ್ ಬೆಲೆ ಏರಿಸಲ್ಪಡುವಂತ ಕೊಜೆಂಟ್ರಿಕ್ಸ್ ಒಪ್ಪಂದದಿಂದ ಇನ್ನೂ ಲಕ್ಷಾಂತರ ಜನ ವಿದ್ಯುತ್ ಬಳಕೆಯಿಂದ ವಂಚಿತರಾಗುತ್ತಾರೆ. ಮಾತ್ರವಲ್ಲ ಎಲ್ಲಾ ವಸ್ತುಗಳ ಬೆಲೆಯು ತೀವ್ರವಾಗಿ ಏರಿಸಲ್ಪಡುತ್ತದೆ. ವಿದ್ಯುತ್ ಬಿಲ್ ಪಾವತಿಸದೇ, ಲಕ್ಷಾಂತರ ಸಣ್ಣ ಕಾರ್ಖಾನೆಗಳು ಮುಚ್ಚಲ್ಪಡುವ ಅಪಾಯದಲ್ಲಿವೆಯೆಂದು ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು. ಬಸವರಾಜ್ ರವರು ಧರಣಿಗಾರರನ್ನು ಉದ್ದೇಶಿಸಿ ಮಾತನಾಡಿದರು. ಕುರುಗೋಡಿನಲ್ಲಿ ಆಗಸ್ಟ್ 28 ರಂದು ಸಿಪಿಐ(ಎಂ) ಪಕ್ಷವು ಕೊಜೆಂಟ್ರಿಕ್ಸ್ ವಿದ್ಯುತ್ ಒಪ್ಪಂದದ ವಿರುದ್ಧ ಧರಣಿ ಸತ್ಯಾಗ್ರಹ ನಡೆಸಿತು. ಸುಮಾರು 50ಕ್ಕೂ ಹೆಚ್ಚು ಜನ ಭಾಗವಹಿಸಿದ್ದ ಈ ಸತ್ಯಾಗ್ರಹದ ನೇತೃತ್ವವನ್ನು ವಿ.ಎಸ್. ಶಿವಶಂಕರ, ಜೆ. ಗಾದಿಲಿಂಗಪ್ಪ, ನಾಗರಾಜ, ಏಕಾಂತಗೌಡ, ದಿವಾಕರಪ್ಪ ಎನ್., ಇಮಾಮ್ ಸಾಬ್, ಪಕೀರಪ್ಪ, ಹೆಚ್. ಮಲ್ಲಯ್ಯ ವಹಿಸಿದ್ದರು.

ರಾಮದುರ್ಗ

ಜನತೆಯ ಹಿತಗಳಿಗೆ ಮಾರಕವಾದ ಕೊಜೆಂಟ್ರಿಕ್ಸ್ ವಿದ್ಯುತ್ ಘಟಕದ ಒಪ್ಪಂದವನ್ನು ರದ್ದುಗೊಳಿಸಲು ಒತ್ತಾಯಿಸಿ ರಾಮದುರ್ಗದಲ್ಲಿ ಆಗಸ್ಟ್ 14 ರಂದು ಪ್ರತಿಭಟನಾ ಕಾರ್ಯಕ್ರಮ ನಡೆಯಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಜ್ಯಾದ್ಯಂತ ನಡೆದ ಪ್ರತಿಭಟನಾ ಕಾರ್ಯಕ್ರಮದ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಮಹಿಳೆಯರನ್ನೊಳಗೊಂಡು ನೂರಾರು ಜನರು ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ಮುಖಂಡ ವಿ.ಪಿ. ಕುಲಕರ್ಣಿ, ಅವರು ಮಾತನಾಡಿ, ಈ ಘಾತುಕ ಒಪ್ಪಂದ ರದ್ದಾಗಬೇಕೆಂದು ಒತ್ತಾಯಿಸಿದರು. ಈ ಯೋಜನೆಯ ಸಾಧಕ ಬಾಧಕಗಳ ಬಗ್ಗೆ ತೀವ್ರ ಚರ್ಚೆ ನಡೆಸುವ ಬದಲು ಈ ಒಪ್ಪಂದವನ್ನು ದೇವೇಗೌಡರು ಸಮರ್ಥಿಸಿಕೊಳ್ಳುತ್ತಿರುವುದನ್ನು ತೀವ್ರವಾಗಿ ಖಂಡಿಸಿದರು.

ಮೆರವಣಿಗೆಯ ನೇತೃತ್ವವನ್ನು ನಾಗಪ್ಪ ಸಂಗೊಳ್ಳಿ, ವಾಗೀಶ, ಶಿಂಧೆ, ನಜೀರ್ ಸಾಬ ಮುಲ್ಲಾ, ಬಾಬಾಂಗಿರ ಜಮೀನ್ದಾರ, ಬಾಬು ಭಜಂತ್ರಿ, ಫಕರುಸಾಬ ನದಾಫ, ಮುಂತಾದವರು ವಹಿಸಿದ್ದರು.

ಕೊನೆಯಲ್ಲಿ ಗೈಬುಸಾಬ, ಜೈನ್ ಖಾನ ಅವರು ವಂದನಾರ್ಪಣೆ ಸಲ್ಲಿಸಿದರು.

ಗುಲ್ಬರ್ಗ

ಎನ್ರಾನ್ ಗಿಂತಲೂ ಕಠಿಣವಾದ ಹಾಗೂ ದುಬಾರಿಯಾದ ಶರತ್ತುಗಳನ್ನು ಒಳಗೊಂಡಿರುವ ಕೊಜೆಂಟ್ರಿಕ್ಸ್ ಯೋಜನೆಗಳನ್ನು ರದ್ದುಗೊಳಿಸಲು ಒತ್ತಾಯಿಸಿ ಸಿ.ಪಿ.ಐ(ಎಂ) ಪಕ್ಷದ ನೂರಾರು ಕಾರ್ಯಕರ್ತರು ಆಗಸ್ಟ್ 17ರಂದು ಒಂದು ಘಂಟೆಗೂ ಹೆಚ್ಚು ಕಾಲ ಜಿಲ್ಲಾಧಿಕಾರಿ ಕಛೇರಿ ಪಿಕೆಟಿಂಗ್ ಮಾಡಿ ಬಂಧನಕ್ಕೊಳಗಾದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ, ಜಿಲ್ಲಾ ಪರಿಷತ್ ಸದಸ್ಯ ಮೇಘರಾಜ ಕಠಾರೆ ಹಾಗೂ ಜೆಎಂಎಸ್‌ನ ಕೆ. ನೀಲಾ, ನೇತೃತ್ವದಲ್ಲಿ ಸೂಪರ್ ಮಾರ್ಕೆಟ್ ನಿಂದ ಹೊರಟ ಮೆರವಣಿಗೆ, ಜಿಲ್ಲಾಧಿಕಾರಿ ಕಛೇರಿಗೆ ತೆರಳಿತು.

ನೆರೆದ ಜನತೆಯನ್ನು ಉದ್ದೇಶಿಸಿ ಮಾತನಾಡಿದ ಮಾರುತಿ ಮಾನ್ಪಡೆಯವರು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ರಾಜ್ಯ ಸಂಪತ್ತನ್ನು ಕೊಳ್ಳೆ ಹೊಡೆಯಲು ಜನತಾದಳ ಸರಕಾರ ಅವಕಾಶ ಒದಗಿಸಿಕೊಡುತ್ತಿದೆ ಎಂದು ಆಪಾದಿಸಿದರು.

32 ಜನ ಮಹಿಳೆಯರನ್ನು ಒಳಗೊಂಡಂತೆ 120ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ದಕ್ಷಿಣ ಕನ್ನಡ

ಜನತೆಗೆ ಹಾಗೂ ರಾಜ್ಯದ ಅಭಿವೃದ್ಧಿಗೆ ಮಾರಕವಾಗುವ ಹಾಗೂ ವಿದ್ಯುತ್ ದರ ಏರಿಸುವ ಕೊಜೆಂಟ್ರಿಕ್ಸ್ ಶರತ್ತುಗಳಿಗೆ ಒಪ್ಪಿಕೊಂಡು ರಾಜ್ಯ ಸರಕಾರ ಈ ಯೋಜನೆಯನ್ನು ಜ್ಯಾರಿಗೊಳಿಸಬಾರದೆಂದೂ, ನಮ್ಮ ಹಿತಕ್ಕನುಸಾರವಾಗಿ ನಮ್ಮ ಶರತ್ತುಗಳಿಗೆ ಒಪ್ಪಿದರೆ ಒತ್ತಾಯವನ್ನು ಪರಿಗಣಿಸದೆ ಜ್ಯಾರಿಗೆ ತರಬೇಕೆಂದೂ, ಈ ಬಗ್ಗೆ ರಾಜ್ಯ ಸರಕಾರವು ಜನತೆಯ ಮುಂದುವರಿದರೆ ತೀವ್ರವಾದ ಹೋರಾಟ ನಡೆಸಬೇಕಾಗುತ್ತೆಂದು ಆಗಸ್ಟ್ 14 ರಂದು ಮಂಗಳೂರು ಜಿಲ್ಲಾಧಿಕಾರಿಯವರ ಕಚೇರಿಯೆದುರು ಪಿಕೆಟಿಂಗ್ ನಡೆಸಿದ ಸಿಪಿಐ(ಎಂ) ಕಾರ್ಯಕರ್ತರನ್ನೂ ನೆರೆದ ಜನಸ್ತೋಮವನ್ನು ಉದ್ದೇಶಿಸಿ ಕೆ.ಆರ್.ಶ್ರೀಯಾನ್ ಮಾತನಾಡುತ್ತಾ ಎಚ್ಚರಿಸಿದರು.

ಬಳಿಕ ಸಿಐಟಿಯು ಅಧ್ಯಕ್ಷರಾದ ಬಿ. ಮಾಧವವರು ಮಾತನಾಡಿ ಸರಕಾರ ಈ ಕೊಜೆಂಟ್ರಿಕ್ಸ್ ಯೋಜನೆಯ ಬಗ್ಗೆ ಪುನರ್ ವಿಮರ್ಶಿಸಿ ಈಗಿನ ಶರತ್ತುಗಳನ್ನು ರದ್ದುಗೊಳಿಸಬೇಕೆಂದು ಹೇಳಿದರು.

ಪಿಕೆಟಿಂಗ್ ನಡೆಸಿದ 600 ಕ್ಕೂ ಹೆಚ್ಚು ಕಾರ್ಯಕರ್ತರನ್ನು ಮುಖಂಡರನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಉಡುಪಿ

ಉಡುಪಿ ತಾಲೂಕು ಕಛೇರಿಯ ಮುಂದೆ ಸಿಪಿಐ(ಎಂ) ಕಾರ್ಯಕರ್ತರು ಘೋಷಣೆಗಳನ್ನು ಕೂಗುತ್ತ ಪಿಕೆಟಿಂಗ್ ನಡೆಸಿದರು. ಇದರ ನೇತೃತ್ವವನ್ನು ಕಾಂ. ಪಿ. ವಿಶ್ವನಾಥ ರೈ ಮತ್ತು ಡೇವಿಡ್ ಕರ್ಕಡರು ವಹಿಸಿದ್ದರು. ಕಾರ್ಯಕರ್ತರನ್ನುದ್ದೇಶಿಸಿ ಪಿ.ವಿಶ್ವನಾಥ ರೈಯವರು ಮಾತನಾಡಿದರು. ಬಳಿಕ ಸುಮಾರು 200ಕ್ಕೂ ಹೆಚ್ಚು ಕಾರ್ಯಕರ್ತರನ್ನು ಬಂಧಿಸಲಾಯಿತು.

ವಿಜಾಪುರ

ಕೊಜೆಂಟ್ರಿಕ್ಸ್ ವಿದ್ಯುತ್ ಒಪ್ಪಂದ ಮಾಡಿಕೊಂಡಿರುವ ಕರ್ನಾಟಕ ಸರ್ಕಾರದ ವಿದ್ಯುತ್ ನೀತಿಯು ಜನವಿರೋಧಿಯಾಗಿರುವುದರಿಂದ ಕೂಡಲೇ ಈ ಒಪ್ಪಂದವನ್ನು ರದ್ದುಗೊಳಿಸಬೇಕೆಂದು ಸಿಪಿಐ(ಎಂ) ರಾಜ್ಯ ಮುಖಂಡರಾದ ಎನ್.ಕೆ.ಉಪಾಧ್ಯಾಯರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು. ಆಗಸ್ಟ್ 14 ರಂದು ನಡೆದ ಜಿಲ್ಲಾಧಿಕಾರಿಗಳ ಕಚೇರಿ ಮುತ್ತಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಅವರು ಪ.ಬಂಗಾಳ ಮಾದರಿಯ ವಿದ್ಯುತ್ ನೀತಿಯನ್ನು ಜಾರಿಗೊಳಿಸಬೇಕೆಂದು ಸರಕಾರಕ್ಕೆ ಒತ್ತಾಯಿಸಿದರು. ನಂತರ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಕಾಂ. ಭೀಮಸಿ ಕಲಾದಗಿಯವರು ರೈತರ ಪಂಪ್ ಸೆಟ್ಟುಗಳಿಗೆ ಹಾಗೂ ಮನೆ ಬಳಕೆ ವಿದ್ಯುತ್ ದರ ಏರಿಸುವ ರಾಜ್ಯ ಸರಕಾರದ ತೀರ್ಮಾನವನ್ನು ತೀವ್ರವಾಗಿ ಖಂಡಿಸಿದರು.

ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕಾಂ. ಅಣ್ಣಾರಾಯ ಈಳಗೇರ ಅವರು ಈ ಸಂದರ್ಭದಲ್ಲಿ ಮಾತನಾಡಿದರು.

ನಾಯಕತ್ವವನ್ನು ರೈತ ಸಂಘದ ಉಪಾಧ್ಯಕ್ಷ ಕಾಂ. ಬಸಂತಪ್ಪ ಕಲ್ಲೊಳ್ಳಿ ಜನವಾದಿ ಮಹಿಳಾ ಸಂಘಟನೆಯ ಶ್ರೀಮತಿ ಸುರೇಖಾ ರಜಪೂತ, ಶ್ರೀಮತಿ ಸುಶೀಲಾ ಬಾಯಿ ಮಿಣಜಗಿ, ಅನಸೂಯ ಕಾಸೆಸೋನಾಬಾಯಿ ಬ್ಯಾಳಿ, ಎಸ್.ಎಫ್.ಐನ ಮೆಹಬೂಬ ಅವಟಿ ಮುಂತಾದವರು ವಹಿಸಿದ್ದರು.

ಜಿಲ್ಲಾಧಿಕಾರಿಗಳಿಗೆ ಪ್ರತಿಭಟನಾ ಮನವಿಯನ್ನು ಸಲ್ಲಿಸಲಾಯಿತು.

ಕುಂದಾಪುರ

ಕೊಜೆಂಟ್ರಿಕ್ಸ್ ವಿದ್ಯುತ್ ಸ್ಥಾವರ ಸ್ಥಾಪನೆಯ ಒಪ್ಪಂದ ರದ್ದಾಗಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ರಾಜ್ಯ ಸಮಿತಿ ರಾಜ್ಯಾದ್ಯಂತ ಆಗಸ್ಟ್ 14 ರಂದು ಪಿಕೆಟಿಂಗ್ ನಡೆಸಬೇಕೆಂದು ಕರೆ ಕೊಟ್ಟಿದ್ದ ಹಿನ್ನಲೆಯಲ್ಲಿ ಕುಂದಾಪುರ ತಾಲೂಕು ಸಮಿತಿ ನೇತೃತ್ವದಲ್ಲಿ ತಾಲೂಕು ಕಚೇರಿ ಎದುರು ಆ.14 ರಂದು ಪಿಕೆಟಿಂಗ್ ನಡೆಸಿ 400ಕ್ಕೂ ಹೆಚ್ಚು ಕಾರ್ಯಕರ್ತರು ಬಂಧನಕ್ಕೊಳಗಾಗಿ ಬಿಡುಗಡೆಯಾದರು. ಈ ಚಳುವಳಿಯ ನೇತೃತ್ವವನ್ನು ಕಾಂ. ಕೆ. ಶಂಕರ್, ಸಿ. ನಾರಾಯಣ, ವಿ. ನರಸಿಂಹ, ಜೆ.ಬಿ. ಮೊಹಮದ್, ನಂದಿಕುಲಾಲ್ ಮೊದಲಾದವರು ವಹಿಸಿದ್ದರು.

ಹಗರಿಬೊಮ್ಮನ ಹಳ್ಳಿ

ಕೊಜೆಂಟ್ರಿಕ್ಸ್ ಹಾಗೂ ರಾಜ್ಯ ಸರ್ಕಾರದ ವಿದ್ಯುತ್ ನೀತಿಯನ್ನು ವಿರೋಧಿಸಿ ಆ. 14ರಂದು ನಗರದಲ್ಲಿ ಮೆರವಣಿಗೆ ನಡೆಸಿದ ಸಿಪಿಐ(ಎಂ)ನ 51 ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ನಗರದ ಸಿಪಿಐ(ಎಂ) ಕಾರ್ಯಾಲಯದಿಂದ ತಾಲೂಕು ಕಚೇರಿಗೆ ಮೆರವಣಿಗೆ ನಡೆಸಿದ ಕಾರ್ಯಕರ್ತರು ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು.

ನಂತರ ನಗರದ ಪ್ರಮುಖ ರಸ್ತೆಯಲ್ಲಿ ಕೊಜೆಂಟ್ರಿಕ್ಸ್‌ನ ಪ್ರತಿಕೃತಿ ದಹಿಸಿದರು. ಅದಕ್ಕೂ ಮುಂಚೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ಜೆ.ಎಂ. ವೀರಸಂಗಯ್ಯ, ಗಣೇಶ್, ಜಗನ್ನಾಥ್ ಮತ್ತು ಜಿ. ಶ್ರೀಮತಿ ಮಾತನಾಡಿದರು.

ಕೆ. ಚೌಡಪ್ಪ, ಅನ್ವರ್ ಬಾಷಾ, ಗೋಣಿ ಬಸಮ್ಮ ಆರ್.ಎಸ್. ಬಸವರಾಜ್, ಅಡಿವೆಪ್ಪ, ದುರುಗಪ್ಪ, ಎಂ.ಬಸವರಾಜ್, ಎ. ನಾಗರಾಜ್ ಹಾಗೂ ಚಿದಾನಂದ ಮೆರವಣಿಗೆ ನೇತೃತ್ವ ವಹಿಸಿದ್ದರು.

ಶಿವಮೊಗ್ಗ

ಆಗಸ್ಟ್ 14 ರಂದು ಶಿವಮೊಗ್ಗ ಜಿಲ್ಲಾಧಿಕಾರಿಗಳ ಆವರಣದಲ್ಲಿ ಕೊಜೆಂಟ್ರಿಕ್ಸ್ ವಿರೋಧಿಸಿ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಲಾಯಿತು. ಸತ್ಯಾಗ್ರಹಿಗಳು ಕೊಜೆಂಟ್ರಿಕ್ಸ್ ವಿರುದ್ಧ ಘೋಷಣೆ ಕೂಗುತ್ತಿದ್ದರು. ಇದರ ನೇತೃತ್ವವನ್ನು ಜಿಲ್ಲಾ ಕಾರ್ಯದರ್ಶಿ ಎಸ್.ವಿ. ಶಿವಶಂಕರ್, ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಎಲ್. ರಾಜು, ಕಾಂ. ಎಲ್. ರಂಜೇಗೌಡ, ಕಾಂ. ಸುಕುಮಾರನ್, ಕಾಂ. ನಾರಾಯಣ್ ಮುಂತಾದವರು ವಹಿಸಿದ್ದರು.

ನಂತರ ಜಿಲ್ಲಾಧಿಕಾರಿಗಳ ಕಛೇರಿ ಪಿಕೆಟಿಂಗ್ ಮಾಡಿದಾಗ ಎಲ್ಲರನ್ನೂ ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು.

ಡಿ.ವೈ.ಎಫ್.ಐ.ನಿಂದ ಮಾನವ ಸರಪಳಿ

ಗೋಣಿಕೊಪ್ಪ: ನಲವತ್ತೊಂಬತ್ತನೆಯ ಸ್ವಾತಂತ್ರ್ಯೋತ್ಸದ ಸಂದರ್ಭದಲ್ಲಿ ಗೋಣಿಕೊಪ್ಪಲಿನ ಖಾಸಗಿ ಬಸ್ ನಿಲ್ದಾಣದಲ್ಲಿ ದೇಶದ ಸ್ವಾತಂತ್ರ್ಯ ರಕ್ಷಣೆಗೆ, ಕೋಮು ಸೌಹಾರ್ದತೆಗೆ ಮತ್ತು ರಾಷ್ಟ್ರದ ಐಕ್ಯತೆಗಾಗಿ ಡಿವೈಎಫ್ಐನ ಕೊಡಗು ಜಿಲ್ಲಾ ಸಮಿತಿಯ ವತಿಯಿಂದ ಮಾನವ ಸರಪಳಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಾಕಷ್ಟು ಸಂಖ್ಯೆಯಲ್ಲಿ ಉತ್ಸಾಹಿ ಜನರು ಈ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು "ನಮ್ಮ ದೇಹ ಛಿದ್ರವಾದರೂ, ವಿಛಿದ್ರಕಾರಕ ಶಕ್ತಿಗಳ ವಿರುದ್ಧ ದೇಶದ ಐಕ್ಯತೆಗಾಗಿ ಶ್ರಮಿಸುವೆವು" ಎಂಬುದಾಗಿ ಪ್ರತಿಜ್ಞೆ ಸ್ವೀಕರಿಸಿದರು.

ಗೋಣಿಕೊಪ್ಪದ ಬಸ್ ನಿಲ್ದಾಣದಲ್ಲಿ ನಗರದ ಡಿ.ವೈ.ಎಫ್.ಐ. ಅಧ್ಯಕ್ಷರಾದ ಕೆ.ಪಿ. ಜಲೀಲ್ ರವರಿಂದ ಧ್ವಜಾರೋಹಣದ ನಂತರ ಬಸ್ ನಿಲ್ದಾಣದ ವೇದಿಕೆಯಿಂದ ಸಾರ್ವಜನಿಕರನ್ನುದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಪೀಟರ್ ಲೋಬೋ, ಮೈಸೂರಿನ ಕಾರ್ಮಿಕ ಮುಖಂಡರಾದ ಆರ್. ಮೋಹನ್ ಕುಮಾರ್, ಸಿಐಟಿಯು ಹೆಚ್.ಎಂ.ಕಾಳಯ್ಯ, ಸಿದ್ದಾಪುರ ಘಟಕದ ಎನ್.ಡಿ. ಕುಟ್ಟಪ್ಪ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಕಾರ್ಮಿಕ ಮುಖಂಡರೂ ಆದ ಡಾ. ಎ.ಆರ್. ಅಪ್ಪಣ್ಣ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಪ್ಪಣ್ಣನವರು ವಹಿಸಿದ್ದರು, ಕಾಂ. ಕೆ.ಪಿ. ಜಲೀಲ್ ಸ್ವಾಗತಿಸಿ, ಕಾಂ. ಹೊನ್ನಪ್ಪನವರು ವಂದಿಸಿದರು.

ನೀರಾವರಿ ಸಮಾವೇಶ

ಗುಲ್ಬರ್ಗ: ಆಗಸ್ಟ್ 7ರಂದು ನಾಗನೂರನಲ್ಲಿ ನೀರಾವರಿ-ರೈತರ ಸಮಾವೇಶವನ್ನು ನಡೆಸಲಾಯಿತು. ಪಿ.ಎಸ್. ಪಾಟೀಲರು ಮಾಡಿದರು.

ಕಾಂ. ಹಳ್ಳಪ್ಪ ಹವಲ್ದಾರ ಅಧ್ಯಕ್ಷರು ಗ್ರಾ.ಪ.ನಾಗನೂರ, ಕಾಂ. ಮಾರುತಿ ಮಾನ್ಪಡೆ, ಕಾಂ. ಚನ್ನಪ್ಪ ಆನೆಗುಂದಿ, ಕಾಂ.ಕೆ.ನೀಲಾ ಮುಂತಾದವರು ಮಾತನಾಡಿದರು.

ಬಸವನ ಬಾಗೇವಾಡಿ

ಆಗಸ್ಟ್ 17ರಂದು ಬಸವನಬಾಗೇವಾಡಿ ಬಸವೇಶ್ವರ ದೇವಾಲಯ ಆವರಣದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೀರಾವರಿ ಯೋಜನೆಗಳ ಸಮಾವೇಶದ ಅಧ್ಯಕ್ಷತೆಯನ್ನು ಸಾಯಬಣ್ಣಾ ಹುಂಡಿಗನೂರ ವಹಿಸಿದ್ದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಕಾಂ. ಚಂದ್ರಶೇಖರ ಬಾಳೆ ಮಾತನಾಡಿ ಸರಕಾರದ ನಿರ್ಲಕ್ಷ್ಯ ಮನೋಭಾವವನ್ನು ಖಂಡಿಸಿದರು. ಜಿಲ್ಲಾಧ್ಯಕ್ಷರಾದ ಭೀಮಸಿ ಕಲಾದಗಿ ಮಾತನಾಡುತ್ತಾ, ಜಿಲ್ಲೆಯಲ್ಲಿ 4 ನಾ 1 ದೋಣಿ ಹಿದರು ರೈತರ ಭೂಮಿಗೆ ನೀರು ಬಂದಿಲ್ಲ. ಬರಗಾಲಕ್ಕೆ ತುತ್ತಾಗಿ ರೈತರು ಪರರಾಜ್ಯಕ್ಕೆ ವಲಸೆ ಹೋಗುತ್ತಾರೆ ಎಂದರು.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

"ಅಮೇರಿಕಾಕ್ಕೆ ಮಹಿಳಾ ಸಮ್ಮೇಳನವನ್ನು ಅಪಹರಿಸಲು ಬಿಡಬೇಡಿ"

-ಎಐಡಿಡಬ್ಲ್ಯುಎ ಎಚ್ಚರ

ಚೀನಾದ ರಾಜಧಾನಿ ಬೀಜಿಂಗ್ ನಲ್ಲಿ ಅಂತರ್ರಾಷ್ಟ್ರೀಯ ಮಹಿಳಾ ಸಮ್ಮೇಳನವನ್ನು ಅಮೇರಿಕಾ ಮತ್ತು ಇತರ ಜಿ-7 ಶ್ರೀಮಂತ ದೇಶಗಳು ತಮ್ಮ ಸಂಕುಚಿತ ಸ್ಪರ್ಧೆ ಸಾಧನೆಗೆ ಬಳಸಿಕೊಳ್ಳದಂತೆ ಒಂದು ದೃಢ ನಿಲುವು ತಳೆಯಬೇಕು ಎಂದು ಅಖಿಲ ಭಾರತ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಭಾರತದ ಅಧಿಕೃತ ನಿಯೋಗವನ್ನು ಒತ್ತಾಯಿಸಿದೆ. ಸಮ್ಮೇಳನ ಆರಂಭವಾಗುವ ಹಿಂದಿನ ದಿನ ಒಂದು ಹೇಳಿಕೆ ನೀಡಿರುವ ಎಐಡಿಡಬ್ಲ್ಯುಎ ಸಮ್ಮೇಳನದ ಕರಡಿನಲ್ಲಿ ಶ್ರೀಮಂತ ಪಾಶ್ಚಿಮಾತ್ಯ ದೇಶಗಳ ಪರವಾಗಿರುವ 'ಸ್ಪಷ್ಟ ಪಕ್ಷಪಾತ'ದ ಉದಾಹರಣೆಗಳನ್ನು ನೀಡಿದೆ. ಈ ಕರಡಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಸೂಚಿಸಲಾಗಿದೆ. ಆದರೆ ಇವಕ್ಕೆಲ್ಲಾ ಹಣ ಒದಗಿಸುವವರಾರು ಎಂಬ ನಿರ್ಣಾಯಕ ಪ್ರಶ್ನೆಯನ್ನು ಅದು ಉಪೇಕ್ಷಿಸಿದೆ.

ವಿಶ್ವಸಂಸ್ಥೆಯ ಕರಡಿನ ಪ್ರತಿ ಅಂಶದ ಬಗ್ಗೆ ತನ್ನ ವಿಮರ್ಶೆಯನ್ನೊಳಗೊಂಡ ಒಂದು ಪತ್ರವನ್ನು ಎಐಡಿಡಬ್ಲ್ಯುಎ ಭಾರತೀಯ ನಿಯೋಗದ ನೇತೃತ್ವ ವಹಿಸಲಿದ್ದ ಸಚಿವ ಮಾಧವರಾವ್ ಸಿಂಧ್ಯಾ ರವರಿಗೆ ನೀಡಿದ್ದು ಬೀಜಿಂಗ್‌ನ ಅಧಿಕೃತ ಸಮ್ಮೇಳನದಲ್ಲೂ ಇವನ್ನು ಹಾಗೂ ಭಾರತೀಯ ಮಹಿಳೆಯರ ಸ್ಥಿತಿ-ಗತಿ ಕುರಿತಾದ ಪರ್ಯಾಯ ಪ್ರಬಂಧವನ್ನು ಹಂಚುವುದಾಗಿ ಸಮ್ಮೇಳನದ ಮೊದಲು ಹೊರಡಿಸಿದ್ದ ಎಐಡಿಡಬ್ಲ್ಯುಎ ಪತ್ರಿಕಾ ಹೇಳಿಕೆ ತಿಳಿಸಿತ್ತು.

ಬೇಅಂತ್ ಕೊಲೆ: ಗಂಭೀರ ದುಷ್ಪರಿಣಾಮ -ಸುರ್ಜಿತ್

ಆಗಸ್ಟ್ 31ರಂದು ಪಂಜಾಬ್ ಮುಖ್ಯಮಂತ್ರಿ ಬೇಅಂತ್ ಸಿಂಗರ ಅಮಾನುಷ ಹತ್ಯೆಯ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ತಮ್ಮ ತೀವ್ರ ಆಘಾತವನ್ನು ವ್ಯಕ್ತಪಡಿಸುತ್ತಾ ಇದು ಪಂಜಾಬಿನ ಸನ್ನಿವೇಶದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದಿದ್ದಾರೆ.

ಐ.ಎನ್.ಎಸ್.ನೊಂದಿಗೆ ಮಾತನಾಡುತ್ತಾ ಸುರ್ಜಿತ್ ರವರು "ಇದೊಂದು ದೊಡ್ಡ ಆಘಾತ. ಈಗಲೂ ಭಯೋತ್ಪಾದಕರು ತಮ್ಮ ಮನಬಂದಂತೆ ಆಕ್ರಮಣ ಮಾಡುವ ಸಾಮರ್ಥ್ಯ ಹೊಂದಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ. ಬೇಅಂತ್ ಸಿಂಗ್ ಭಯೋತ್ಪಾದಕರ ವಿರುದ್ಧ ಎಡೆ ಬಿಡದ ಹೋರಾಟ ಮಾಡುತ್ತಿದ್ದ ಏಕೈಕ ವ್ಯಕ್ತಿಯಾಗಿದ್ದಿದ್ದರಿಂದ ಈ ಕೊಲೆ ರಾಜ್ಯದ ರಾಜಕೀಯ ಸನ್ನಿವೇಶದ ಮೇಲೆ ಗಂಭೀರ ದುಷ್ಪರಿಣಾಮ ಬೀರಲಿದೆ. ಸ್ವಲ್ಪಮಟ್ಟಿಗೆ ಅಕಾಲಿಗಳ ಸ್ಥೈರ್ಯವನ್ನು ಇದು ತಟ್ಟಬಹುದು" ಎಂದು ಹೇಳಿದರು.

ಮುಂದುವರಿದು " ಈ ಪಿಡುಗಿನ ವಿರುದ್ಧ ಒಟ್ಟಾಗಿ ಹೋರಾಟ ನಡೆಸದಿದ್ದರೆ ಪರಿಸ್ಥಿತಿ ಹದಗೆಡಬಹುದು ಎಂಬುದನ್ನು ಎಲ್ಲಾ ಜಾತ್ಯಾತೀತ ಶಕ್ತಿಗಳು ಅರಿಯಬೇಕು" ಎಂದು ಸುರ್ಜಿತ್ ಅಭಿಪ್ರಾಯಪಟ್ಟಿದ್ದಾರೆ.

ಪ್ರವಾಹ ತಂದ ವಿನಾಶ -ಪೊಲಿಟ್ ಬ್ಯೂರೋ ಆತಂಕ

ದೇಶದ ಹಲವೆಡೆ ಇತ್ತೀಚೆಗೆ ಪ್ರವಾಹದಿಂದುಂಟಾದ ವಿನಾಶದ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ತೀವ್ರ ಆತಂಕ ವ್ಯಕ್ತಪಡಿಸಿದೆ. ಈ ಪ್ರವಾಹದಲ್ಲಿ ಸಾವನ್ನಪ್ಪಿದವರ ಕುಟುಂಬಗಳಿಗೆ ತನ್ನ ಸಂತಾಪವನ್ನು ಅದು ವ್ಯಕ್ತಪಡಿಸಿದ.

ಉತ್ತರ ಪ್ರದೇಶ, ಹರಿಯಾಣಾ, ಹಿಮಾಚಲ ಪ್ರದೇಶ, ಮತ್ತು ಇತರೆಡೆಗಳಲ್ಲಿ ಪ್ರವಾಹದಿಂದ ಸಾವಿಗೀಡಾದವರ ಸಂಖ್ಯೆ ಆತಂಕಕಾರಿಯಾಗಿ ಹೆಚ್ಚುತ್ತಲೇ ಇದೆ. ಇದು ಬೆಳೆಗಳಿಗೆ ಭಾರೀ ನಷ್ಟ ತಂದಿದೆಯಲ್ಲದೆ ಮನೆ ಸೇತುವೆ ಇತ್ಯಾದಿ ಕುಸಿಯಲೂ ಕಾರಣವಾಗಿದೆ. ಕಾಲರಾ ಮುಂತಾದ ಸಾಂಕ್ರಾಮಿಕಗಳು ಹರಡುವ ಅಪಾಯವೂ ಇದೆ.

ಪ್ರವಾಹಗ್ರಸ್ತ ಜನರಿಗೆ ತಕ್ಷಣ ಪರಿಹಾರ ಒದಗಿಸಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಕ್ರಮಗಳನ್ನು ಕೈಗೊಳ್ಳಬೇಕು. ಪರಿಹಾರ ಸಾಮಗ್ರಿಗಳನ್ನು ತುರ್ತಾಗಿ ಈ ಪ್ರದೇಶಗಳಿಗೆ ರವಾನಿಸಬೇಕು. ಸಂಬಂಧಪಟ್ಟ ರಾಜ್ಯ ಸರಕಾಗಳು ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವಾಗುವಂತೆ ಎಲ್ಲಾ ನೆರವನ್ನು ಕೇಂದ್ರ ಸರಕಾರ ಒದಗಿಸಬೇಕು ಎಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ.

ದೇಶದಲ್ಲಿ ಮತ್ತೆ-ಮತ್ತೆ ಒಂದೇ ಕಾಲಕ್ಕೆ ಪ್ರವಾಹ ಮತ್ತು ಬರದ ವಿಧ್ವಂಸಗಳನ್ನು ನಾವು ಕಾಣಬೇಕಾಗಿ ಬಂದಿರುವುದು. ಜಲದ ನಿರ್ವಹಣೆ ಕುರಿತಾದ ಕೇಂದ್ರದ ದಿವಾಳಿಕೋರ ನೀತಿಯಿಂದಾಗಿ ಎಂದು ಟೀಕಿಸಿರುವ ಪಿ.ಬಿ. ಕೇಂದ್ರ ಸರಕಾರ ಪ್ರವಾಹ ಮತ್ತು ಬರದ ಈ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ರೂಪಿಸಬೇಕಾಗಿದೆ ಎಂದಿದೆ.

ಆರು ಕಲ್ಲಿದ್ದಲು ಕಾರ್ಮಿಕರ ಕೊಲೆ: ಸಿಐಟಿಯು ಖಂಡನೆ

ಆಗಸ್ಟ್ 21ರ ಕಲ್ಲಿದ್ದಲು ಕಾರ್ಮಿಕರ ಮುಷ್ಕರದ ದಿನದಂದು ಧರಣಿಯಲ್ಲಿ ಭಾರತ್ ಕೋಕಿಂಗ್ ಕೋಲ್ ಕಾರ್ಪೋರೇಷನ್ ನ ಮುಗ್ದ ಕಲ್ಲಿದ್ದಲು ತೊಳೆಯುವ ವಿಭಾಗದ ಆರು ಕಾರ್ಮಿಕರ ಮೇಲೆ ಆ ಕಂಪೆನಿಯ ಒಂದು ಡಂಪರ್ ಲಾರಿ ಹರಿದು ಅವರು ಸ್ಥಳದಲ್ಲೇ ಮೃತರಾಗಿದ್ದಾರೆ. ಇದೊಂದು ಆಕಸ್ಮಿಕ ಘಟನೆ ಎಂದು ಚಿತ್ರಿಸಲು ಮ್ಯಾನೇಜ್‌ಮೆಂಟ್ ಪ್ರಯತ್ನಿಸುತ್ತಿದ್ದರೂ ಧರಣಿ ನಡೆಯುತ್ತಿದ್ದ ಜಾಗದಲ್ಲೇ ಈ ಅಪಘಾತ ಏಕೆ ನಡೆಯಿತು ಎಂಬ ಬಗ್ಗೆ ವಿವರಣೆ ಕೊಡಲು ಅದಕ್ಕಾಗಿಲ್ಲ ಎಂದು ಹೇಳಿರುವ ಸಿಐಟಿಯು ಕಾರ್ಯದರ್ಶಿ ಮಂಡಳಿ ಈ ಕೊಲೆಯನ್ನು ಬಲವಾಗಿ ಖಂಡಿಸಿದೆ. ಈ ಘಟನೆಯಲ್ಲಿ ಇನ್ನೂ ಹತ್ತು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಮುಷ್ಕರ ನಿರತ ಕಾರ್ಮಿಕರ ಮೇಲೆ ಈ ಪ್ರಾಣಾಂತಿಕ ಹಲ್ಲೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು, ಈ ಭಯಾನಕ ಕೊಲೆಯ ಅಪರಾಧ ನಡೆಸಿದವರಿಗೆ ಕಠಿಣ ಶಿಕ್ಷೆ ನೀಡಬೇಕು ಎಂದು ಸಿಐಟಿಯು ಒತ್ತಾಯಿಸಿದೆ. ಕೊಲೆಗೀಡಾದ ಆರು ಕಲ್ಲಿದ್ದಲು ಕಾರ್ಮಿಕರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ದೇಶಾದ್ಯಂತ ಎಲ್ಲಾ ಕಾರ್ಮಿಕ ಸಂಘಗಳು ಇವನ್ನು ಖಂಡಿಸಿ ಬಿ.ಸಿ.ಸಿ.ಎಲ್. ಮ್ಯಾನೇಜುಮೆಂಟಿನ ಕಾರ್ಮಿಕ-ವಿರೋಧಿ ನೀತಿಗಳನ್ನು ವ್ಯಾಪಕ ರೀತಿಯಲ್ಲಿ ಬೆಳಕಿಗೆ ತರಬೇಕು ಎಂದು ಅದು ಕರೆ ನೀಡಿದೆ.

ಈ ನಡುವೆ ಬಿಹಾರ ಸಿಐಟಿಯು ಘಟಕ ರಾಜ್ಯಾದ್ಯಂತ ಸೆಪ್ಟೆಂಬರ್ 21ರಂದು ಪ್ರತಿಭಟನಾ ದಿನ ಆಚರಿಸಲು ಹಾಗೂ ಧನ್ಬಾದ್‌ನಲ್ಲಿ ಬೃಹತ್ ರ್‍ಯಾಲಿ ನಡೆಸಲು ನಿರ್ಧರಿಸಿದೆ.

ಕೃಷ್ಣಾ ಕಣಿವೆಯ ತಾಲೂಕು ಸಮಾವೇಶಗಳು:

ಪುಟ 1 ರಿಂದ

ರಾಜ್ಯ ಮಟ್ಟದ ನೀರಾವರಿ ಸಮಾವೇಶಕ್ಕೆ ಪೂರ್ವಭಾವಿಯಾಗಿ ತಾಲೂಕು ಸಮಾವೇಶಗಳು ನಡೆದಿವೆ.

ಯಾದಗಿರಿಯಲ್ಲಿ ಭೀಮೋಪ್ಲೋ ಯೋಜನೆಗಾಗಿ ಸಮಾವೇಶ ನಡೆಯಿತು. ವಿಶ್ವನಾಥ ರೆಡ್ಡಿಯವರು ಉದ್ಘಾಟನೆ ಮಾಡಿದರು. ಹಳೆಪ್ಪ ಹವಲದಾರ ಅಧ್ಯಕ್ಷತೆ ವಹಿಸಿದ್ದರು. ಮಾರುತಿ ಮಾನ್ಪಡೆ ಭಾಷಣ ಮಾಡಿದರು.

ನಾಗನೂರದಲ್ಲಿ ನಡೆದ ಸಮಾವೇಶ ಹಳೆಪ್ಪ ಹವಲ್ದಾರ ಅವರು ಅಧ್ಯಕ್ಷತೆಯಲ್ಲಿ ನಡೆಯಿತು. ಪಿ.ಎಸ್. ಪಾಟೀಲರು ಉದ್ಘಾಟನೆ ಮಾಡಿದರು. ಮಾರುತಿ ಮಾನ್ಪಡೆಯವರು ಮುಖ್ಯ ಅತಿಥಿಗಳಾಗಿದ್ದರು. ಸುರಪುರದಲ್ಲಿ ನಡೆದ ಸಮಾವೇಶದಲ್ಲಿ ಬಿ.ಜಿ. ಪಾಟೀಲರು ಅಧ್ಯಕ್ಷತೆ ವಹಿಸಿದ್ದರು. ಚೆನ್ನಪ್ಪ ಮಾರುತಿ ಮಾನ್ಪಡೆ ಮೊದಲಾದವರು ಭಾಷಣ ಮಾಡಿದರು.

ಇಂಡಿ ಬಿಜಾಪುರ

ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ಸಿಂದಗಿಗಳಲ್ಲಿಯೂ ಸಮಾವೇಶಗಳು ನಡೆದು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಬಾಳೆ, ಭೀಮಸಿ ಕಲಾದಗಿ, ಅಣ್ಣಾರಾಯ ಇಳಿಗೇರ ಮೊದಲಾದವರು ಭಾಗವಹಿಸಿದ್ದರು.

ರಾಯಚೂರು ಜಿಲ್ಲೆಯ ತುಂಗಭದ್ರಾ ಎಡದಂಡೆ ಕಾಲುವೆ ಸಮಾವೇಶವನ್ನು ಮಾನ್ವಿಯಲ್ಲಿ ಕಾಂ. ಚಂದ್ರಶೇಖರ ಬಾಳೆ ಉದ್ಘಾಟಿಸಿದರು. ನೀರಾವರಿ ಸಚಿವ ಶ್ರೀ ಬಿ. ಮುನಿಯಪ್ಪ, ಮಾಜಿ ಜಿಲ್ಲಾ ಪರಿಷತ್ ಅಧ್ಯಕ್ಷ ಸುರೇಶ ರೆಡ್ಡಿ ಅತಿಥಿಗಳಾಗಿ ಭಾಗವಹಿಸಿದ್ದರು. ಕಾಂ. ಮಲ್ಲಯ್ಯ ಜಾಲಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ವೀರನಗೌಡ ಗೊತ್ತುವಳಿ ಮಂಡಿಸಿದರು. ಮಲ್ಲಿಕಾರ್ಜುನ ವರದಿ ಮಂಡಿಸಿದರು. ಒಂದು ಲಕ್ಷ ಕರಪತ್ರ ಹಂಚಲಾಗಿದ್ದು, ನೂರಾರು ಹಳ್ಳಿಗಳಲ್ಲಿ ಜೀಪ್ ಜಾಥಾಗಳನ್ನು ಮುಖಾಂತರ ವ್ಯಾಪಕ ಪ್ರಚಾರದೊಂದಿಗೆ ಭೀಮರಾಯನ ಗುಡಿ ಸಮಾವೇಶಕ್ಕೆ ತಯಾರಿ ಮಾಡಲಾಗಿತ್ತು.

ರೈಲು ದುರಂತ: ವಿಕೃತ ರೈಲು ನೀತಿಯ ದುಷ್ಫಲ ರೈಲ್ವೇ ಮಂತ್ರಿಗಳು ರಾಜೀನಾಮೆ ನೀಡಬೇಕು

-ಪೊಲಿಟ್ ಬ್ಯೂರೋ

ಆಗಸ್ಟ್ 21ರಂದು ಉತ್ತರ ಪ್ರದೇಶದ ಫಿರೋಜಾಬಾದಿನ ಬಳಿ ನಡೆದ ಭೀಕರ ರೈಲು ಅಪಘಾತ ಸುಮಾರು 450ಕ್ಕೂ ಹೆಚ್ಚು ಪ್ರಯಾಣಿಕರನ್ನು ಬಲಿ ತೆಗೆದುಕೊಂಡಿದೆ. ಈ ಅಪಘಾತದ ಬಗ್ಗೆ ತನ್ನ ತೀವ್ರ ದುಃಖ ವ್ಯಕ್ತಪಡಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಪ್ರಾಣ ಕಳೆದುಕೊಂಡಿರುವ ಕುಟುಂಬಗಳಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಜೀವಗಳ ಬಲಿತೆಗೆದುಕೊಂಡ ಈ ದುರಂತ ನಡೆದರೂ ಭಾರತ ಸರಕಾರ ತನ್ನ ಹೊಣೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಇಂತಹ ಅಪಘಾತಗಳಿಗ ಸರಕಾರ ಹೊಣೆ ಹೊರಬೇಕು, ರೈಲ್ವೇ ಮಂತ್ರಿ ಜಾಫರ್ ಷರೀಫ್ ತಕ್ಷಣ ರಾಜೀನಾಮೆ ನೀಡಬೇಕು ಎಂದು ಪೊಲಿಟ್ ಬ್ಯೂರೋ ಆಗಸ್ಟ್ 21 ರಂದು ನೀಡಿರುವ ಪತ್ರಿಕಾ ಹೇಳಿಕೆ ಒತ್ತಾಯಿಸಿದೆ.

ಇತ್ತೀಚೆಗೆ ಇಂತಹ ದೊಡ್ಡ ರೈಲ್ವೇ ಅಪಘಾತಗಳ ಒಂದು ಸರಣಿಯೇ ಕಂಡು ಬಂದಿದೆ. ಕಳೆದ ವರ್ಷ ಇಂತಹ ಅಪಘಾತಗಳಲ್ಲಿ 800 ಜನ ಸತ್ತರು. ಈ ವರ್ಷದ ಮೊದಲ 5 ತಿಂಗಳಲ್ಲೇ 10 ಪ್ರಮುಖ ಅಪಘಾತಗಳು ನಡೆದಿದ್ದು ಇದರಲ್ಲಿ 158 ಜನ ಅಸುನೀಗಿದ್ದಾರೆಂಬುದು ಬಹಳ ಗಂಭೀರ ಸಂಗತಿ. ಇವು ಸರಕಾರ ಹೇಳುವಂತೆ ಕೆಲವು ಮಾನವ ತಪ್ಪುಗಳಿಂದಾಗುವ ದುರಂತಗಳಲ್ಲ, ಒಂದು ಒಟ್ಟಾರೆ ಧೋರಣೆಯ ಫಲ ಎಂದು ಸಿಪಿಐ(ಎಂ) ಅಭಿಪ್ರಾಯವನ್ನು ಪಿ.ಬಿ. ಹೇಳಿಕೆ ಪುನರುಚ್ಚರಿಸುತ್ತಾ ರೈಲ್ವೇ ಧೋರಣೆ ಖಾಸಗೀಕರಣದ ಮೇಲೆ ಸರ್ಕಾರೀ ಖರ್ಚನ್ನು ಕಮ್ಮಿ ಮಾಡುವ ಮೇಲೆಯೇ ಹೆಚ್ಚಿನ ಒತ್ತು ನೀಡಿ ರೈಲ್ವೇ ನಿರ್ವಹಣೆ, ಈಗಿನ ಸಾಧನಗಳ ಆಧುನೀಕರಣ, ಸಿಬ್ಬಂದಿಯ ತರಬೇತಿ ಇತ್ಯಾದಿ ಮೇಲಿನ ಖರ್ಚನ್ನು ಕಡಿತ ಮಾಡಿದೆ. ಈ ಧೋರಣೆಯನ್ನು ಬದಲಿಸಿ ತಕ್ಷಣ ಪ್ರಯಾಣಿಕರ ಸುರಕ್ಷಿತತೆಯ ಮೇಲೆ ಹೆಚ್ಚಿನ ಒತ್ತು ನೀಡಬೇಕು ಎಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ.

ಮಾನವ ಜೀವದ ಬಗ್ಗೆ ನಿರ್ಲಕ್ಷ

ಕಳೆದ ಕೆಲವು ವರ್ಷಗಳಲ್ಲಿ ಹಲವಾರು ಹೊಸ ಸೂಪರ್ ಫಾಸ್ಟ್ ರೈಲುಗಳನ್ನು ಆರಂಭಿಸಲಾಗಿದೆ. ಆದರೆ ಇವಕ್ಕೆ ಮೊದಲು ಸುರಕ್ಷಿತತೆಯ ಬಗ್ಗೆ ಗಮನಹರಿಸಲಾಗಿದೆಯೇ? ಸುರಕ್ಷತತೆಯ ಕ್ರಮಗಳನ್ನು ಒದಗಿಸುವ ಬದಲು ಶತಾಬ್ದಿ, ರಾಜಧಾನಿ ಎಕ್ಸ್‌ಪ್ರೆಸ್‌ಗಳನ್ನು ಓಡಿಸಿ ಉದಾರೀಕರಣ, ಜಾಗತೀಕರಣದ ನೀತಿಗಳಿಗೆ ಅನುಗುಣವಾಗಿ ರೈಲು ಪ್ರಯಾಣವನ್ನು ಶ್ರೀಮಂತರ ಭೋಗ ಸಾಧನವಾಗಿ ಮಾಡಲಾಗುತ್ತಿದೆ. ರೈಲ್ವೇ ಮಂತ್ರಿಗಳಂತೂ ಎಲ್ಲವನ್ನೂ ಆಮದು ಮಾಡುವುದರಲ್ಲೇ ತೊಡಗಿದ್ದಾರೆಯೇ ವಿನಹ ಮಾನವ ಜೀವಗಳ ಬಗ್ಗೆ ನಿರ್ಲಕ್ಷ್ಯದಿಂದ್ದಾದಾರೆ. ತಮ್ಮ ತಮ್ಮ ಕುಟುಂಬದ, ತನ್ನ ಚಮಚಾಗಳ ಲಾಭದಲ್ಲೇ ಆಸಕ್ತರಾಗಿರುವ ಇಂತಹವರು ಮಂತ್ರಿಗಳಾಗಿರುವಾಗ ಒಂದು ತಿಂಗಳಲ್ಲಿ ಐದು ಅಪಘಾತಗಳು ನಡೆಯದೆ ಇನ್ನೇನಾದೀತು ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ ಅವರನ್ನು ಕೇಂದ್ರ ಮಂತ್ರಿಮಂಡಲದಿಂದ ವಜಾ ಮಾಡಬೇಕೆಂದು ಒತ್ತಾಯಿಸಿದೆ.

ಬೈಲದಿಲಾ ಗಣಿ ಖಾಸಗೀಕರಣ ಪ್ರಯತ್ನ ಸಾರ್ವಜನಿಕ ಹಣದ ಲೂಟಿಯ ಪ್ರಯತ್ನ

-ಪೊಲಿಟ್ ಬ್ಯೂರೋ

ಬೈಲಾದಿಲಾ ಕಬ್ಬಿಣ ಗಣಿಗಳ ಗಣಿ ಸಂಖ್ಯೆ 11 ಬಿ ಅತ್ಯಂತ ಶ್ರೀಮಂತ ಕಬ್ಬಿಣದ ಅದುರು ನೀಡುವ ಗಣಿ. ರಾಷ್ಟ್ರೀಯ ಧಾತು ಅಭಿವೃದ್ಧಿ ನಿಗಮ (ಉಬ್ಬು) ದ ಒಡೆತನದಲ್ಲಿರುವ ಗಣಿಗಳಲ್ಲೇ ಅತ್ಯಂತ ಲಾಭದಾಯಕ ಗಣಿಯಿದು. ಇದನ್ನು ಒಂದು ಖಾಸಗಿಯವರಿಗೆ ವಹಿಸುವ ಕೇಂದ್ರ ಸರಕಾರದ ಪ್ರಯತ್ನ ಸಂಪೂರ್ಣ ಬಯಲಾಗಿದೆ. ಕಳೆದವಾರ ಸಂಸತ್ತಿನಲ್ಲಿ ಈ ಬಗ್ಗೆ ನಡೆದ ಚರ್ಚೆಯಿಂದ ಇದು ಸ್ಪಷ್ಟವಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಗಸ್ಟ್ 22 ರಂದು ನೀಡಿರುವ ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದೆ.

ಹಣಕಾಸು ಇಲಾಖೆ ಹಾಗೂ ಎನ್.ಎಂ.ಡಿ.ಸಿ.(NMDC) ಯ ಆಕ್ಷೇಪವಿದ್ದರೂ ಉಕ್ಕು ಮಂತ್ರಿ ಸಂತೋಷ್ ಮೋಹನ್ ದೇಬ್ ಈ ವ್ಯವಹಾರ ಕುದುರಿಸಿದ್ದು, ಸರಕಾರಕ್ಕೆ ಈ ಬಗ್ಗೆ ನಂಬಬಹುದಾದ ವಿವರಣೆ ನೀಡಲು ಸಾಧ್ಯವಾಗಿಲ್ಲ ಎಂದಿರುವ ಪೊಲಿಟ್ ಬ್ಯೂರೋ ಇದು ಸಾರ್ವಜನಿಕ ಹಣದ ಲೂಟಿಯಲ್ಲದೆ ಮತ್ತೇನೂ ಅಲ್ಲ ಎಂದಿದೆ. ಖಾಸಗೀ ವಲಯ ಎಲ್ಲಿ ಹಣ ತೊಡಗಿಸಬಯಸುವುದಿಲ್ಲವೋ ಅಲ್ಲಿ ಮಾತ್ರ ಸರಕಾರ ಹಣ ತೊಡಗಿಸಬೇಕೆಂಬ ಸಂತೋಷ್ ಮೋಹನ್ ದೇಬ್ ವಿವರಣೆ ಸಾರ್ವಜನಿಕ ವಲಯವನ್ನು ನಾಶಮಾಡುವ ಕರೆಯಲ್ಲದೆ ಮತ್ತೇನೂ ಅಲ್ಲ ಎಂದೂ ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಸಂಸತ್ತಿನಲ್ಲಿ ಪಕ್ಷ ಭೇದವಿಲ್ಲದೆ ಎಲ್ಲರೂ ಈ ಗಣಿಯ ವರ್ಗಾವಣೆಯನ್ನು ವಿರೋಧಿಸಿರುವುದರಿಂದ ಸರಕಾರ ತನ್ನ ಹಿಂದಿನ ನಿರ್ಣಯವನ್ನು ರದ್ದು ಮಾಡಿ ಈ ಅತ್ಯುತ್ತಮ ಗಣಿಯನ್ನು ಎನ್.ಎಂ.ಡಿ.ಸಿ.ಯ ಒಡೆತನದಲ್ಲೇ ಉಳಿಸಬೇಕು ಎಂದು ಒತ್ತಾಯಿಸಿರುವ ಪೊಲಿಟ್ ಬ್ಯೂರೋ ಈ ಭ್ರಷ್ಟ ವ್ಯವಹಾರವನ್ನು ತಡೆಯಲು ಒಂದು ಆಂದೋಲನ ನಡೆಸಬೇಕು ಎಂದು ಪಕ್ಷದ ಘಟಕಗಳಿಗೆ ಹಾಗೂ ಸಾರ್ವಜನಿಕ ವಲಯದ ರಕ್ಷಣೆಯಲ್ಲಿ ಆಸಕ್ತಿಯಿರುವ ಸಾಮೂಹಿಕ ಸಂಘಟನೆಗಳಿಗೆ ಕರೆ ನೀಡಿದೆ.

ಪಾಶ್ಚಿಮಾತ್ಯ ಸಶಸ್ತ್ರ ಸಿಬ್ಬಂದಿ ಆಮದು?

-ಪಿ.ಬಿ. ಆತಂಕ

ಕಾಶ್ಮೀರ ಕಣಿವೆಯಲ್ಲಿ ಅಪಹರಿಸಲ್ಪಟ್ಟ ಬಂಧಿಗಳ ಬಿಡುಗಡೆಗೆ ಸಂಬಂಧಪಟ್ಟಂತೆ ಬ್ರಿಟಿಷ್ ಸೇನೆಯ ವಿಶೇಷ ವಿಮಾನಸೇವೆಯ, ಅಮೇರಿಕಾದ ಡೆಲ್ಟಾ ಪಡೆಗಳ ಹಾಗೂ ಜರ್ಮನ್ ಗಡಿ ಪೋಲೀಸ್ GSG-9ರ ಸಿಬ್ಬಂದಿಯನ್ನು ಕರೆಸಲಾಗಿದೆ ಎಂಬ ವರದಿಗಳ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತೀವ್ರ ಆತಂಕ ವ್ಯಕ್ತಪಡಿಸಿದೆ. ಪಾಶ್ಚಿಮಾತ್ಯ ದೇಶಗಳ ವಿಶೇಷ ಸಶಸ್ತ್ರ ಪಡೆಗಳನ್ನು ಕಾಶ್ಮೀರ ಕಣಿವೆಯಲ್ಲಿ ಕಾರ್ಯಾಚರಣೆಗಿಳಿಸುವ ವರದಿ ನಿಜವಾಗಿದ್ದರೆ ಇದು ಬಹಳ ಕಳವಳಕಾರಿ. ಈ ಬೆಳವಣಿಗೆಗಳ ಬಗ್ಗೆ ಭಾರತೀಯ ಸೇನಾ ಅಧಿಕಾರಿಗಳಿಗೆ ತುಂಬಾ ಬೇಸರವಾಗಿದೆ ಎಂಬ ವರದಿಗಳೂ ಬರುತ್ತಿವೆ. ಇಂತಹ ಅಭೂತಪೂರ್ವ ಕ್ರಮದಿಂದ ಭಾರತೀಯ ಭದ್ರತಾ ಪಡೆಯ ಸ್ಥೈರ್ಯ ಕುಗ್ಗುವಂತಾದರೆ ಅದೊಂದು ಗಂಭೀರ ಸಂಗತಿ. ಈ ಬಗ್ಗೆ ನಿಲುವನ್ನು ಸ್ಪಷ್ಟೀಕರಿಸಿ ಈ ಸಂಬಂಧವಾಗಿ ಎದ್ದಿರುವ ಭಯವನ್ನು ದೂರಮಾಡಬೇಕಾದುದು ಸರ್ಕಾರದ ಕರ್ತವ್ಯ ಎಂದು ಪೊಲಿಟ್ ಬ್ಯೂರೋ ಹೇಳಿದೆ.